


'ಅರಳು ಮರಳು' ಅನಂತರ
ಮರಳಿ ಅರಳಿದ ಕವನ ಸಂಕಲನ

ಇದು ನಭೋವಾಣಿ

ಅಂಬಿಕಾತನಯದತ್ತ (ವರಕವಿ ಡಾ. ದ.ರಾ. ಬೇಂದ್ರೆ) ವಿರಚಿತ

ಸಂಪಾದಕ: ಡಾ. ವಾಮನ ಬೇಂದ್ರೆ

ವರಕವಿ ಡಾ. ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

೨೪-೧೧-೧೯೮೧ ರಂದು ಕೀರ್ತಿಶೇಷ ಡಾ।। ದ. ರಾ. ಬೇಂದ್ರೆಯವರ ಕವಿ ನಿವಾಸ-೧೩, ಶ್ರೀಮಾತಾ, ಸಾಧನಕೇರಿ, ಧಾರವಾಡದಲ್ಲಿ ಡಾ।। ಕೆ. ಎಸ್. ಶರ್ಮಾ ಅವರ ಅಧ್ಯಕ್ಷತೆ, ಪಿ. ಆರ್. ಭಾಗವತ, ಪಟ್ಟಣಕೋಡಿ, ಸುರೇಶ ಕುಲಕರ್ಣಿ ಇವರ ಸಹಕಾರದೊಂದಿಗೆ ಡಾ।। ವಾಮನ ಬೇಂದ್ರೆಯವರು ಬೇಂದ್ರೆ ಮನೆತನದ ಸಕಲ ಸಧಸ್ಯರನ್ನೊಳಗೊಂಡು ''ಅಂಬಿಕಾತನಯದತ್ತ ವೇದಿಕೆ''ಯನ್ನು ಸ್ಥಾಪಿಸಿದರು. ಈ ವೇದಿಕೆಯು ಸತತವಾಗಿ ಬೇಂದ್ರೆ ಸ್ಮರಣೋತ್ಸವಗಳನ್ನು ರಾಜ್ಯದಾದ್ಯಂತ ಮಾಡುತ್ತ ಬಂದಿದೆ. ಅಂಬಿಕಾತನಯದತ್ತ ವೇದಿಕೆ ಈ ವರೆಗೆ ಮಾಡಿದ ಮಹತ್ತ್ವದ ಸಾಧನೆಗಳು ಹೀಗಿವೆ :

(೧) ಕರ್ನಾಟಕ ಸರಕಾರ ೧೯೯೩ರಲ್ಲಿ ವರಕವಿ ಡಾ।। ದ. ರಾ. ಬೇಂದ್ರೆ (ಅಂಬಿಕಾತನಯದತ್ತ) ರಾಷ್ಟ್ರೀಯ ಸ್ಮಾರಕ (ರಿ) ಸಂಸ್ಥೆಯನ್ನು ಸ್ಥಾಪಿಸಿತು. ಧಾರವಾಡದ ಕವಿ ನಿವಾಸದ ಪಕ್ಕದಲ್ಲಿ ಬೇಂದ್ರೆ ಮನೆತನ ಈ ಸಂಸ್ಥೆಗೆ ದಾನವಾಗಿ ಕೊಟ್ಟ ನಿವೇಶನದಲ್ಲಿ ''ಬೇಂದ್ರೆ ಭವನ'' ಎಂಬ ಭವ್ಯ ಕಟ್ಟಡ ಕಟ್ಟಿಸುವುದಲ್ಲದೆ, ಅಲ್ಲಿ ಬೇಂದ್ರೆ ಜೀವನ ಆಧರಿಸಿ 'ಸಮರಸವೇ ಜೀವನ' ಸ್ಮರಣೀಯ ಭಾವಚಿತ್ರ ಪ್ರದರ್ಶನ ಏರ್ಪಡಿಸಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯು ೧೯೯೭ ರಿಂದ ಸಕಲರಿಗ ಪ್ರೇಕ್ಷಣೀಯ ಸ್ಥಳವಾಗುವಂತೆ ಕಾರ್ಯಾಚರಣೆಯಲ್ಲಿ ತೊಡಗಿದೆ. ಪ್ರತಿ ತಿಂಗಳ ಬೇಂದ್ರೆ ಸ್ಮಾರಕ ಉಪನ್ಯಾಸ ಹಾಗೂ ಭಾವಗೀತ, ನಾಟಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಪ್ರತಿವರ್ಷ ೨೫,೦೦೦-೦೦ ರೂಪಾಯಿಯ ಒಂದು ಫೆಲೋಶೀಪ್ ಹಾಗೂ ೧೦,೦೦೦-೦೦ ರೂಪಾಯಿಯ ಅಂಬಿಕಾತನಯದತ್ತ ಪ್ರಶಸ್ತಿಯನ್ನು (ಬೇಂದ್ರೆ ಮನೆತನ ಸಂಗ್ರಹಿಸಿದ ನಿಧಿಯನ್ನು ಆಧರಿಸಿ) ಕೊಡುತ್ತ ಬಂದಿದೆ. ಅಂಬಿಕಾತನಯದತ್ತ ವೇದಿಕೆ ಈ ಕಾರ್ಯಗಳಿಗೆ ಪ್ರೇರಣೆ ನೀಡಿದೆ.

(೨) ಹುಬ್ಬಳ್ಳಿಯ ''ವಿಶ್ವಶ್ರಮಚೇತನ'', ಬಸವೇಶ್ವರ ನಗರ ಸ್ಟಾಪ್, ಗೋಕುಲ ರಸ್ತೆ, ಆವರಣದಲ್ಲಿ (ಅ) ಬೇಂದ್ರೆ ಪ್ರತಿಮೆ (ಬ) ವರಕವಿ ಡಾ।। ದ. ರಾ. ಬೇಂದ್ರೆ ಸಂಶೋಧನ ಸಂಸ್ಥೆ (ಕ) ಬೇಂದ್ರೆ ಕಂಡ ಬೆನಕ ವಿದ್ಯಾವಿನಾಯಕ ದೇವಾಲಯ (ಡ) ಬೇಂದ್ರೆ ಸಂಗೀತ ಆಕಾಡೆಮಿಗಳನ್ನು ಸ್ಥಾಪಿಸಿ (ಈ) ಬೇಂದ್ರೆ ಕುಟೀರದಲ್ಲಿ ವಿವಿಧ ಕಾರ್ಯಕ್ರಮ ಬೇಂದ್ರೆ ಜನ್ಮ ದಿನೋತ್ಸವ ಹಾಗೂ ಬೇಂದ್ರೆ ಪುಣ್ಯ ದಿನದ ಸ್ಮರಣೋತ್ಸವಗಳನ್ನು ವೈಶಿಷ್ಟ್ಯಪೂರ್ಣವಾಗಿ ಸಂಯೋಜಿಸುತ್ತ ಬಂದಿದೆ. ೨೦೦೫ರಲ್ಲಿ ವಿಶ್ವಶ್ರಮ ಚೇತನದಲ್ಲಿ ಬೇಂದ್ರೆ ಔದುಂಬರದತ್ತ ಚೈತನ್ಯ ಎಂಬ ಸ್ಮೃತಿ ಪೀಠವನ್ನು ಸ್ಥಾಪಿಸಲಾಗಿದೆ. ಕರ್ನಾಟಕ ರಾಜ್ಯ ಸರಕಾರಿ ದಿನಗೂಲಿ ನೌಕರರ ಮಹಾಮಂಡಲ ಈ ಸಂಯೋಜನೆ ಕೈಕೊಂಡಿದೆ.

(೩) ಬೇಂದ್ರೆ ಕವಿ ನಿವಾಸವನ್ನು ವಸ್ತು ವಾಸ್ತು ಸಮುಚ್ಚಯವಾಗಿ ಪ್ರೇಕ್ಷಣೀಯ ಸ್ಥಳವಾಗಿ ಸಂಯೋಜಿಸಿ, ಅಲ್ಲಿ ಸಖೀಗೀತ-ಸ್ಮಾರಕ ಹಾಗೂ ವರಕವಿ ಡಾ।। ದ. ರಾ. ಬೇಂದ್ರೆ ಅಧ್ಯಯನ ಕೇಂದ್ರವನ್ನು ೨೦೦೪ ರಿಂದ ಪ್ರಾರಂಭಸಲಾಗಿದೆ. ಇದಕ್ಕೆ ಅಂಬಿಕಾತನಯದತ್ತ ವೇದಿಕೆ ಪ್ರೇರಣೆ ನೀಡಿದೆ.

(೪) ಹುಬ್ಬಳ್ಳಿಯ ''ವಿಶ್ವಶ್ರಮ ಚೇತನ'' ಆವರಣದಲ್ಲಿರುವ ಬೇಂದ್ರೆ ಕುಟೀರದಲ್ಲಿ ೧೯೯೯ ರಿಂದ ಬೇಂದ್ರೆ ಸಂಗೀತ ಅಕ್ಯಾಡೆಮಿಯನ್ನು ಸ್ಥಾಪಿಸಿ ಬೇಂದ್ರೆ ಸಂಗೀತ ರಾತ್ರಿಯನ್ನು ಸಂಯೋಜಿಸಿ ''ಬೇಂದ್ರೆ ಸಂಗೀತ'' ಪರಂಪರೆಯನ್ನು ಬೆಳೆಸುವ ಕಾರ್ಯ ಮಾಡುತ್ತಿದೆ.

(೫) ಬೇಂದ್ರೆ ಸಂಶೋಧನ ಸಂಸ್ಥೆಯು ಬೇಂದ್ರೆ ಸಮಗ್ರ ಸಾಹಿತ್ಯ-ಸಂಶೋಧನೆಯ ಕೃತಿಗಳನ್ನು ೨೫ ಸಂಪುಟಗಳಲ್ಲಿ ಪ್ರಕಟಿಸುವ ಬೃಹತ್ ಯೋಜನೆಯನ್ನು ಸಂಯೋಜಿಸಿದೆ. ಈಗಾಗಲೇ ಸಮಗ್ರ ಕಾವ್ಯದ ಆರು ಸಂಪುಟಗಳು ೨೦೦೩ರಲ್ಲಿ ಔದುಂಬರಗಾಥೆಯಾಗಿ ಪ್ರಕಟವಾಗಿದೆ. ಏಳನೆಯ ಸಂಪುಟ ''ಶ್ರೀ ಮಾತಾರವಿಂದ ಪ್ರಜ್ಞಾಪ್ರಕಾಶ'' ೨೦೦೫ರಲ್ಲಿ ಪ್ರಕಟವಾಗಿದೆ. ಮುಂದಿನ ಕೆಲಸ ಪ್ರಗತಿ ಪಥದಲ್ಲಿ ಸಾಗಿದೆ.

(೬) ಬೇಂದ್ರೆ ಸಂಗೀತ ಅಕ್ಯಾದೆಮಿಯು ಬೇಂದ್ರೆ ಸಮಗ್ರ ಕಾವ್ಯಕ್ಕೆ ಶಾಸ್ತ್ರೀಯ ಸಂಗೀತ ಸಂಯೋಜನೆಯನ್ನು ಮಾಡಿ, ಮೂಲ ಕಾವ್ಯದೊಂದಿಗೆ ಬೃಹತ್ ಸಂಗ್ರಹವಾಗಿ ಪ್ರಕಟಿಸುವ ಯೋಜನೆಯಿದೆ. ಈಗಾಗಲೇ ಈ ದಿಶೆಯಲ್ಲಿ ಆರು ಕೃತಿಗಳು ಪ್ರಕಟವಾಗಿವೆ. ತನ್ಮೂಲಕ ''ಬೇಂದ್ರೆ ಸಂಗೀತ'' ಪರಂಪರೆಯನ್ನು ಸ್ಥಾಪಿಸಲು ಅನುವಾಗುವ ಸಂಗೀತ-ಸಾಹಿತ್ಯ ರಚನೆಯ ಕಾರ್ಯ ಇದಾಗಿದೆ.

ಕಾರ್ಯಸ್ಥಳ : ''ವಿಶ್ವಶ್ರಮ ಚೇತನ'', ಬಸವೇಶ್ವರ ನಗರ, ಗೋಕುಲ ರೋಡ, ಹುಬ್ಬಳ್ಳಿ-೫೮೦ ೦೩೦.

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ

ಹುಬ್ಬಳ್ಳಿ

ಹೃದಯ-ವಿವೇಕ ಬೆಳಕು ಬರಲಿ


ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹುಬ್ಬಳ್ಳಿ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು



ಅಂಬಿಕಾತನಯದತ್ತರ

ಇದು ನಭೋವಾಣಿ

"ಅರಳು ಮರಳು" ನಂತರ ಮರಳಿ ಅರಳಿದ ಕವನ ಸಂಕಲನ



ಅಂಬಿಕಾತನಯದತ್ತರ ಕಾವ್ಯ
(ವರಕವಿ ಡಾ|| ದ. ರಾ. ಬೇಂದ್ರೆ)

ಇದು ನಭೋವಾಣಿ

''ಅರಳು ಮರಳು'' ನಂತರ ಮರಳಿ ಅರಳಿದ ಕವನ ಸಂಕಲನ

ಸಂಪಾದಕರು :

ಡಾ|| ವಾಮನ ಬೇಂದ್ರೆ,
ಸಹ-ನಿರ್ದೇಶಕರು,
ಬೇಂದ್ರೆ ಸಂಶೋಧನ ಸಂಸ್ಥೆ

ಪ್ರಕಾಶಕರು :

ಡಾ|| ಕೆ. ಎಸ್. ಶರ್ಮಾ,
ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ
''ವಿಶ್ವಶ್ರಮ ಚೇತನ'', ಗೋಕುಲ ರಸ್ತೆ ಹುಬ್ಬಳ್ಳಿ - ೫೮೦ ೦೩೦.
ಕರ್ನಾಟಕ ರಾಜ್ಯ

ಇದು ಸಭೋವಾಣಿ :

(ಕವನ ಸಂಕಲನ)

★

ಕವಿ : 'ಅಂಬಿಕಾತನಯದತ್ತ' (ವರಕವಿ ಡಾ|| ದ. ರಾ. ಬೇಂದ್ರೆ)

★

ಸಂಪಾದಕರು : ಡಾ|| ವಾಮನ ಬೇಂದ್ರೆ, ಸಹ ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ

★

ಪ್ರಕಾಶಕರು :

ಡಾ|| ಕೆ. ಎಸ್. ಶರ್ಮಾ, ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ

ಶ್ರೀಮಾತಾ ಪ್ರಕಾಶನ,

ಅಂಬಿಕಾತನಯದತ್ತ ವೇದಿಕೆ, 'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030.

★

★

ಬೆಲೆ : ರೂ.45-00

★

ಆವೃತ್ತಿಗಳು : ಮೊದಲ ಆವೃತ್ತಿ ೧೯೮೨,

2ನೇ ಆವೃತ್ತಿ : 11-11-2004, ನರಕ ಚತುರ್ದಶಿ, ದ. ರಾ. ಬೇಂದ್ರೆ 24ನೇ ವಾರ್ಷಿಕ ಸಂಸ್ಮರಣೆ

★

ಆಕಾರ : 1/8 ಡೆಮ್ಮಿ

★

ಕಲೆ : ಶ್ರೀ ಸುರೇಶ ಕುಲಕರ್ಣಿ, ಧಾರವಾಡ

★

ಹೊರಹೊದಿಕೆ ವಿನ್ಯಾಸ : ಶ್ರೀ ರವೀಂದ್ರ ವಿಶ್ವಜ್ಞ, ಧಾರವಾಡ

★

ಪುಟ ವಿನ್ಯಾಸ/ಡಿಟಿಪಿ : ಶ್ರೀ ಈರಣ್ಣ ನೂಲ್ವಿ, ಡಾ|| ಕೆ. ಎಸ್. ಶರ್ಮಾ ಐ.ಟಿ.ಸಿ., ಹುಬ್ಬಳ್ಳಿ

★

ಮುದ್ರಕರು :

ಶರ್ಮಾ ಮುದ್ರಕರು,

4, ಪತ್ರಕರ್ತರ ಕಾಲನಿ, ಹುಬ್ಬಳ್ಳಿ - 580 032.

★

ಕೃತಿಗಳಿಗಾಗಿ ಬರೆಯಿರಿ :

ಶ್ರೀಮಾತಾ ಪ್ರಕಾಶನ,

'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030. ದೂರವಾಣಿ : (0836) 2330466.

ರವೀಂದ್ರ ಪುಸ್ತಕಾಲಯ,

ಕಾರ್ಗಲ್ ಕಾಲೋನಿ-577421, ದೂರವಾಣಿ : 08186-228616.

ಅರ್ಪಣೆ

ಶ್ರೀ ಭಗವಾನ್

ಪಾಂಡುರಂಗಾರ್ಪಣಮಸ್ತು

—ಅಂದತ್ತ

ಪರಿವಿಡಿ

i) ಭೂಮಿಕೆ - ಡಾ|| ವಾಮನ ಬೇಂದ್ರೆ.........ix
ii) ಪ್ರಕಾಶಕರ ಸ್ಪಂದನ - ಡಾ|| ಕೆ. ಎಸ್. ಶರ್ಮಾ...xiv

೧.	ಮಹಾನುಭಾವರು	೧
೨.	ಇದು ನಭೋವಾಣಿ	೩
೩.	ಬಾ, ಬಾ, ಭಗವಾನ್	೮
೪.	ಪಾಂಡು -ರಂಗ-ಸ್ಥಲ	೧೦
೫.	ವಿಳುಖ್ ಐತಿ : ಬೆಳಕು ಇದೆ : ಇದೇ ಬೆಳಕು	೧೩
೬.	ಅಭಂಗ - ವಿಟ್ಠಲ	೧೫
೭.	ನೆನಸಿದವರ ಮನಸಿನ್ಯಾಗ	೧೬
೮.	ಸಂಕಷ್ಟ ಹರಣಾಷ್ಟಕ ಮುಕ್ತಾವಲಿ	೧೭
೯.	ಅ-ಉ-ಮ ಸಂವಾದ	೧೯
೧೦.	ಮಂಗಲಮೂರ್ತಿ	೨೧
೧೧.	ಹರಿಹರ ಸಾಮರಸ್ಯ	೨೨
೧೨.	ಶಕಪುರುಷನ ಶತಮಾನ	೨೩
೧೩.	ಪೂತಾತ್ಮ-ಹೂತಾತ್ಮ-ಹುತಾತ್ಮ-ಮಹಾತ್ಮ	೨೮
೧೪.	ಗಾಂಧಿ-ಸತ್ಯ	೩೨
೧೫.	ಧ್ರುವತಾರೆ	೩೪
೧೬.	ಸೃಷ್ಟಿ-ಸ್ಥಿತಿ-ಲಯ	೩೫
೧೭.	ಹುಂಜ-ಹೂ	೩೬
೧೮.	ಕದಳಿಗೆ ಪ್ರಶ್ನೆ	೩೭
೧೯.	ಜೇಡನ ಹೂ	೩೮

೨೦. ಬನ್ನಿ-ಭಂಗಾರ ೩೯

೨೧. ಬಂಗಾರದ ಹೊದಿಕೆ ೪೨

೨೨. ಅಭಯ ಸ್ವಸ್ತಿ ೪೩

೨೩. ಅರಿದು ಹಾದಿ (ಭಾವಾನುವಾದ) ೪೪

೨೪. ಮಂತ್ರ-ಯಂತ್ರ-ತಂತ್ರ ೪೫

೨೫. ನಾನು ಕಂಡಂತೆ ೪೬

೨೬. ಕೃತಕೃತ್ಯ ೪೭

೨೭. ಪ್ರಾಚೀನ ೪೮

೨೮. ಓಂ ಪ್ರಾರ್ಥನಾ ಗೀತ ೪೯

೨೯. ಮಹಾತ್ಮಾ ೫೦

೩೦. ಭಾವ-ಭಾಷೆ ೫೫

೩೧. ವಾಸನಿ ೫೬

೩೨. ಚತುರ-ವಾಣಿ ೫೮

೩೩. ನಾನೋ ಮಹೀದಾಸ ೬೦

೩೪. ನವ ವಿಸರ್ಗ ೬೨

ಡಾ|| ದ. ರಾ. ಬೇಂದ್ರೆಯವರ ಜೀವನ ಕಥೆಯ ಹಂದರ 1

ಡಾ|| ದ. ರಾ. ಬೇಂದ್ರೆಯವರ ಸಾಹಿತ್ಯ ಕೊಡುಗೆ 5

ಸಂಪಾದಕರ ಭೂಮಿಕೆ

ಪುರಾಣ ಕಾಲದ ಆಕಾಶವಾಣಿಗೂ, ಇಂದಿನ ಪ್ರತಿನಿತ್ಯ ಕೇಳುವ ಆಕಾಶವಾಣಿಗೂ ಸಾಕಷ್ಟು ಅಂತರವಿದೆ. 'ಅಭಿಜ್ಞಾನ ಶಾಕುಂತಲ'ದಲ್ಲಿ ಆಕಾಶವಾಣಿಯಾದರೆ ಅದು ಸಾಕ್ಷಿ ಧ್ವನಿ, ದೇವರ ನುಡಿ. ಪ್ರತಿನಿತ್ಯ ಆಕಾಶವಾಣಿಯಲ್ಲಿ ಕೇಳುವ ಮಾತು-ಮಾನವನ ಮಾತು.

''ಇದು ನಭೋವಾಣಿ'' ಮತ್ತು ''ಇದು ನऽಭೋ! ವಾಣಿ!'' ಎಂದು ಎರಡು ವಿಧದಿಂದ ಈ ಕವನ ಸಂಗ್ರಹದ ಶೀರ್ಷಿಕೆಯನ್ನು ವಿಭಜಿಸಬಹುದು. ಮೊದಲನೆಯ ವಿಭಜನೆಯ ರೀತಿ ಸಾಮಾನ್ಯ. ಅದು ಆಕಾಶವಾಣಿಗೆ ಸಮಾನಾರ್ಥ ಪದವೆಂದು ಹೇಳಬಹುದು. ಎರಡನೆಯ ರೀತಿಯ ವಿಭಜನೆಯು ವಾಣಿ ದೇವತೆಯನ್ನು ಸಂಬೋಧಿಸುವ ಬಗೆಯನ್ನು ಸೂಚಿಸುತ್ತದೆ. ಹೀಗೆ ಒಂದೇ ಪದಕ್ಕೆ ವಿವಿಧ ಅರ್ಥವಾಗುವುದು - ''ಧ್ವನಿಗುಡುವುದು ಕವನದ ಚಾಳಿ'' ಎಂದು ಹೇಳಿದ್ದಾರೆ ಅಂಬಿಕಾತನಯದತ್ತರು.

ಪರಾ, ಪಶ್ಯಂತಿ, ಮಧ್ಯಮಾ ಮತ್ತು ವೈಖರಿ ಎಂದು ವಾಣಿಯ ನಾಲ್ಕು ಬಗೆಗಳಿವೆ. ನಾವು ಆಡುವ ಮಾತು, ಬರೆಯುವ ಮಾತು ವೈಖರಿ. ಮಾತು ವೈಖರಿಗೆ ಬರುವ ಮೊದಲು ಅದು ಪರಾ, ಪಶ್ಯಂತಿ, ಮಧ್ಯಮಾ ಮಾರ್ಗಗಳನ್ನು ದಾಟಿ ಬರಬಹುದು. ಪರಾ, ಪಶ್ಯಂತಿ, ಮಧ್ಯಮಾದಲ್ಲಿ ಚಿಂತನೆಯನ್ನು, ಅನುಸಂಧಾನವನ್ನು ಮಾಡಿ, ಮಾತು ಪಕ್ವವಾದಾಗ ಕವಿಯು ಅವುಗಳನ್ನು ನುಡಿಸುತ್ತಾನೆ- 'ಹದಾ ಇಲ್ಲದ ಪದಾ ಬರೋದಿಲ್ಲಾ-ಕದಾ ತಗ್ಯೊದಿಲ್ಲಾ ಅಂತಃಕರಣ'.

ಕವಿ, ವಾಣಿಯ ಆರಾಧಕನಾಗಿರುತ್ತಾನೆ. ಕವಿಯ 'ಸ್ವ' ಕ್ಕೆ ಹೇಳಲ್ಪಟ್ಟದ್ದನ್ನು ಅವನು ಭಾಷೆಯಲ್ಲಿ ಅಭಿವ್ಯಕ್ತಪಡಿಸುತ್ತಾನೆ. ಅದನ್ನು ರಸಿಕನು, ಓದುಗನು ತೆರೆದ ಹೃದಯದಿಂದ ಓದಿ ತನ್ನ 'ಸ್ವ'ದಿಂದ ಅರ್ಥ ಮಾಡಿಕೊಳ್ಳಬೇಕು. ಹೃದಯದಲ್ಲಿ ಅರ್ಥದ ಉದ್ಭವವಾಗುತ್ತದೆ. 'ಸ್ವಯಂಭುವಿನ ಸ್ವಾರಸ್ಯವಿರದ ಭವಭೂತಿಗೆತ್ತ ಭಾವ', 'ವಿರಸನು ಶುಂಠನು ಅಲ್ಲವೆ, ತಿಳಿವನೆ ರಸಹೀನ.?

ದ. ರಾ. ಬೇಂದ್ರೆಯವರ 'ಸ್ವ' ಕ್ಕೆ ಒಬ್ಬ ಸ್ವಾಮಿ ಉಂಟು ಎಂದು ಅವರು ಒಪ್ಪುತ್ತಾರೆ. 'ಆತ್ರೇಯ-ದತ್ತ', 'ಅಭಂಗ ವಿಟ್ಠಲ', 'ಮಂಗಲ ಮೂರ್ತಿ'ಈ ಕವನಗಳಲ್ಲಿ ಆ ದೈವತಗಳ, ಸ್ವಾಮಿಯ ಚಿಂತನವು ರೂಪಗೊಂಡಿದೆ.

ಹೊಂದಿಕೆ ಬೇಕು, ಒಡೆಯುವಿಕೆ ಬೇಡ ಎಂಬುದು ಅಂಬಿಕಾತನಯದತ್ತರ ಒಂದು ಕಾವ್ಯ ತತ್ತ್ವವಾಗಿದೆ . ಛಳಿಗಾಲ, ಬೇಸಿಗೆ ಹಾಗೂ ಮಳೆಗಾಲ ಇವುಗಳಲ್ಲಿ ಹೊಂದಿಕೆ ಬೇಕು - ಮಹಾನುಭಾವರು; ದೇಶ ದೇಶದಲ್ಲಿ ಹೊಂದಿಕೆ ಬೇಕು. 'ನಾನೋ ಮಹೀದಾಸ; ಮನುಷ್ಯ ಮನುಷ್ಯನಲ್ಲಿ ಹೊಂದಿಕೆಯಾಗಬೇಕು -

ಅಭಯಸ್ಪಷ್ಟಿ': ಹೇಳುವವ, ಕೇಳುವವ, ಆಡುವ ಮಾತು, ತಿಳಿದು ಕೊಳ್ಳುವ ಮಾತು ಒಂದಾಗಬೇಕು - 'ಇದು ನಭೋವಾಣಿ': ಮನುಷ್ಯನಿಗೆ ಮಾತು ಕೊಟ್ಟದ್ದು ಹೊಂದಿಕೆ ಮಾಡಿಕೊಳ್ಳಲಿಕ್ಕೇ ಹೊರತು ಜಗಳಕ್ಕಾಗಿ ಅಲ್ಲ. ವಾಣಿಯ ಚಾತುರ್ಯದಿಂದ ಹೊಂದಿಕೆಯನ್ನು ಸಾಧಿಸಿದರೆ ಅದು ಚತುರವಾಣಿಯಾಗುತ್ತದೆ. 'ಕತ್ತರಿಗೆ ಈಡು ಮಾಡದಿರು ನಿನ್ನ ಹೊಲಿಗೆಯ ಕಸುಬು' ಎಂಬಲ್ಲಿ ಅಂಬಿಕಾತನಯದತ್ತರ ಐಕ್ಯತತ್ತ್ವವು ವಿವಿಧವಾಗಿ ಪ್ರಕಟಗೊಂಡಿದೆ.

ವಿಳುಕ್-ಹಿಳುಕ್-ಪಿಳುಕ್ ಎಂಬುದು ಬೆಳುಕ್ - ಬೆಳಕು ಆಗಿರಬೇಕು ಎಂದು ಒಂದು ಉತ್ಪತ್ತಿಯನ್ನು 'ವಿಳಕ್ ಐತಿ ಬೆಳಕು ಇದೆ. ಇದೇ ಬೆಳಕು' ಎಂಬಲ್ಲಿ ಕವಿಗಳು ಕೊಟ್ಟಿದ್ದಾರೆ. ಕಣ್ಣು ಪಿಳುಕಿಸಿ ತೆಗೆಯುವ ಕ್ರಿಯೆ, ಬೆಳಕು ಕಾಣುವ ಕ್ರಿಯೆ, ಅದರ ಅರ್ಥವಾಗುವ ಕ್ರಿಯೆ ಒಂದು ಕ್ಷಣಾರ್ಧದಲ್ಲಿ ನಡೆದು ಹೋಗುತ್ತದೆ. ಇದೊಂದು ಚಮತ್ಕಾರ. ಈ ಚಮತ್ಕಾರದ ನಿಜವಾದ ಅರ್ಥವಾದವನ ಎದೆಯೊಳಗೆ ಆನಂದವರ್ಷವಾಗುತ್ತದೆ. ಇದರ ಅರ್ಥವಾಗದವನ ಎದೆ ಎಂದರೆ -ಚುಚ್ಚುವಮೋಳೀ, ಬರಡಾದ ಮೊಲೀ, ನೀರು ಇಲ್ಲದ ಗುಡ್ಡ-ಇದ್ದಂತೆ ಎಂದು ಅಂಬಿಕಾತನಯದತ್ತರು ಹೇಳಿದ್ದಾರೆ.

'ಶಾಂತೀರಸವೇ ಪ್ರೀತಿಯಿಂದಾ ಮೈದೋರಿತಣ್ಣಾ
ಇದು ಬರೀ - ಬೆಳಗಲ್ಲೋ ಅಣ್ಣಾ'

ಎಂಬ ಪದ್ಯದಲ್ಲಿಯೂ ಬೆಳಕಿನ ಸರಿಯಾದ ಅರ್ಥವನ್ನು ಮಾಡಿಕೊಳ್ಳಬೇಕು ಎಂಬ ಸೂಚನೆ ಇದೆ. ಸತ್ಯ, ಧರ್ಮ, ಪ್ರಕಾಶವು ಶಾಂತೀರಸದ ಪ್ರೀತಿಯಿಂದ ಅರ್ಥವಾಗುತ್ತದೆ.

ಹರ ಎಂದರೆ ಗುಡ್ಡ, ಹರಿ ಎಂದರೆ ಅಲ್ಲಿಯ ಜಲಹರಿ. ಗುಡ್ಡದ ಮೇಲಿಂದ ಹರಿದು ಬರುತ್ತದೆ ನೀರು. ಮನಷ್ಯನಿಗೆ ಗುಡ್ಡ ಮತ್ತು ನೀರು ಎರಡೂಬೇಕು. ವಾಸಸ್ಥಾನಕ್ಕೆ ಗುಡ್ಡ, ಉಪಜೀವನಕ್ಕೆ ನೀರು ಹೇಗೆ ಅವಶ್ಯವೋ ಹಾಗೆ ಹರಿ-ಹರ ಸಾಮರಸ್ಯವು ಅವಶ್ಯ . ಹರ - ಹರಿ ಪಾರಮ್ಯ ವಾದವು ವಿನಾಶಕಾರಿ ಎಂಬ ಭಾವವು 'ಹರಿಹರ ಸಾಮರಸ್ಯ' ಮತ್ತು 'ಅ ಉ ಮ ಸಂವಾದ' ಪದ್ಯಗಳಲ್ಲಿ ವ್ಯಕ್ತವಾಗಿದೆ. 'ಓಂ ಪ್ರಾರ್ಥನಾಗೀತ' ದಲ್ಲಿ 'ದೇವನೊಬ್ಬನೆ, ನಾಮ ಹಲವು' ಎಂಬ ಭಾವವು ಇನ್ನೊಂದು ಬಗೆಯಿಂದ ರೂಪಗೊಂಡಿದೆ.

'ಹುಂಜ ಹೂ', 'ಕದಳಿಗೆ ಪ್ರಶ್ನೆ', 'ಜೇಡನ ಹೂ' ಮತ್ತು 'ಸೃಷ್ಟಿ - ಸ್ಥಿತಿ - ಲಯ' ಈ ನಾಲ್ಕು ಪದ್ಯಗಳಿಗೆ ಹೂವಿನ ಚಿತ್ರಗಳು ಪ್ರೇರಣೆಯನ್ನು ಕೊಟ್ಟಿವೆ. ಜೇಡ ನೆಯ್ದ ಜಾಲವು ಹೂವಿನಂತೆ ಕವಿ ದೃಷ್ಟಿಗೆ ಕಂಡಿದೆ. ಅದರಂತೆಯೆ ಒಂದು ಕೆಂಪಾದ ಹೂ ಹುಂಜದಂತೆ ಕಂಡಿದೆ. ಪುಷ್ಪದಲ್ಲಿ ಗಂಧ ಬರಲು ಕಾರಣವೇನು ಎಂದು ಚಿಂತಿಸುತ್ತಾನೆ ಕವಿ. ಸೃಷ್ಟಿ ಸ್ಥಿತಿ, ಲಯ ದಲ್ಲಿ ಮಣ್ಣು, ಮಲ ಹೌದು. ಆದರೆ ಅದಕ್ಕೆ ಗಂಧವತಿ ಎಂದು ಕರೆಯುವಲ್ಲಿ ಆ ಮಣ್ಣು ದುರ್ಗಂಧವನ್ನು ತನ್ನಲ್ಲಿ ಅಡಗಿಸಿಕೊಂಡು, ತನ್ನ ಮಕ್ಕಳು, ಮೊಮ್ಮಕ್ಕಳಾದ ಹೂವಿಗೆ ಸುಗಂಧವನ್ನು ದಯಪಾಲಿಸಿದೆ. ಇದು ಮಣ್ಣಿನ ಮಹಾತ್ಮ್ಯೆ. ಈ ಮಹಾತ್ಮ್ಯವನ್ನು ಅರಿತ ಪುಷ್ಪಗಳು ಬೆಳಗಾಗುವುದರಲ್ಲಿ ಗಿಡದಿಂದ ಭೂಮಿಗೆ ಧುಮುಕುವುದು ಕೃತಜ್ಞತೆಯ ಸಂಕೇತವೆಂದು ಕವಿಗಳ ಭಾವಕ್ಕೆ ತೋಚಿದೆ. ಒಣಗಿದರೂ ಸುವಾಸನೆಯನ್ನು ಕೊಡುವಲ್ಲಿ ಬಕುಲ ಪುಷ್ಪದ ಹಿರಿಮೆ ಇದೆ.

ಹೂವಿನ ಕವಿತೆಗಳಿಗೆ ಹೂವಿನ ಚಿತ್ರಗಳು ಹೇಗೆ ನಿಮಿತ್ತವೊ ಹಾಗೆ 'ಇದು ನಭೋವಾಣಿ'ಗೆ -ಧಾರವಾಡ ಆಕಾಶವಾಣಿ ಕೇಂದ್ರದ ಪ್ರಸಾರ ಶಕ್ತಿ-ವರ್ಧನ-ನಿಮಿತ್ತ; 'ನಾನು ಕಂಡಂತೆ'ಗೆ- ಡಾ|| ವಿ. ಕೃ ಗೋಕಾಕ ಷಷ್ಟ್ಯಬ್ದಿ ಸಂಚಿಕೆ ನಿಮಿತ್ತ.-'ಬಾಬಾ ಭಗವಾನ್' 'ಪಾಂಡು-ರಂಗ-ಸ್ಥಲ' ಇವುಗಳಿಗೆ ಸತ್ಯಸಾಯಿ ಬಾಬಾ ಇವರಿಂದ ಪ್ರತಿಷ್ಠೆಗೊಂಡ ಕಾಲೇಜಿನ ಆರಂಭದಲ್ಲಿ ಆದ ಕವಿ ಸಮ್ಮೇಳನ ನಿಮಿತ್ತವಾಗಿವೆ. ಹೊರಗೆ ಪ್ರೀತಿ ತೋರಿಸಿದಂತೆ ಮಾಡಿ, ಒಳಗೆ ಹೊಟ್ಟೆಕಿಚ್ಚು ಇರುವ ಜನಸಮೂಹದ ಏಳಿಗೆ ಎಂದಿಗೂ ಆಗುವದಿಲ್ಲ ಎಂಬ ಆಶಯವು 'ಬಾಬಾ ಭಗವಾನ್'ದಲ್ಲಿ ರೂಪಗೊಂಡಿದ್ದರೆ; ಗುರು ಶಿಷ್ಯರಲ್ಲಿ ಯುದ್ಧ ಕುರುಕ್ಷೇತ್ರವಿರಬಾರದು; ಅವರಲ್ಲಿ ಮೈತ್ರಿಯ ಆದಾನ ಪ್ರದಾನವಾಗಲಿ ಎಂಬ ಆಶಯಯವು 'ಪಾಂಡು-ರಂಗ-ಸ್ಥಲ' ದಲ್ಲಿ ವ್ಯಕ್ತವಾಗಿದೆ. ಸತ್ಯ ಸಾಯಿಬಾಬಾ ಎಂದರೆ ನಿರ್ವ್ಯಾಜ ಪ್ರೇಮ ಪ್ರವಾಹವು. ಸತ್ಯ ಸಾಯಿಬಾಬಾ ಕಾರ್ಯ ಕ್ಷೇತ್ರವು 'ಅನಸೂಯಾ ಬೀಜಾವಾಪನ ಕ್ಷೇತ್ರ' ಎಂಬ ಅನುಭವ ಉಕ್ತಿಗಳನ್ನೂ ನಾವು ಈ ಪದ್ಯಗಳಲ್ಲಿ ಕಾಣಬಹುದು.

ಬನ್ನಿ ಬಂಗಾರ ಒಂದು ವಿಚಿತ್ರ ಕಥೆ. 'ಅತಿಥಿ ದೇವೋಭವ' ದಂತೆ ಬಂದ ಭಿಕ್ಷುಕನು ಮದುವೆಯಾದ ಕನ್ಯೆಯನ್ನು - ಪರಪತ್ನಿಯನ್ನು ಬಯಸಿದ್ದು ಸೀಮೋಲ್ಲಂಘನವೇ ಸರಿ. ಆದರೆ ಈ ಸೀಮೋಲ್ಲಂಘನದಿಂದ ಆ ಭಿಕ್ಷುಕನ ಮರಣವಾಗಿ, ಮರುಪುರುಷ ಆ ಗೃಹದ ಯಜಮಾನಿಗೆ ಮಗುವಾಗಿ ಗೃಹಿಣಿಯ ಬಾಳು ಬಂಗಾರವಾಗುತ್ತದೆ.

'ನೂರು ವರ್ಷಾತು', 'ಪೂತಾತ್ಮ - ಹೂತಾತ್ಮ - ಹುತಾತ್ಮ - ಮಹಾತ್ಮ', 'ಗಾಂಧಿ ಸತ್ಯ' ಮತ್ತು 'ಧ್ರುವತಾರೆ' ಈ ನಾಲ್ಕು ಕವನಗಳನ್ನು ಗಾಂಧೀ ಶತಾಬ್ದಿಯ ನಿಮಿತ್ತವಾಗಿ ಬರೆಯಲಾಗಿವೆ. ವಸ್ತು ಒಂದೇ, ಅಭಿವ್ಯಕ್ತಿ ಹಲವು ಆಗುವಲ್ಲಿ ಕವಿತಾಶಕ್ತಿಯ ಮೇಲ್ಮೆ ಇದೆ.

'ನೂರು ವರ್ಷಾತು' ಈ ಪದ್ಯದಲ್ಲಿ ನೂರು ವರುಷಗಳಾದರೂ ಇತಿಹಾಸ ಬದಲಾಗಲಿಲ್ಲ ಎಂಬ ಚಿತ್ರವು-

'ಹರಿಶ್ಚಂದ್ರನ ಮಸಣ
ಸಾಕ್ರೇಟೀಸನ ಜೇಲು-ವಿಷ
ಜೀಸಸ್ಸನ ಶಿಲಬಿ
ಮಾಯದ ಗಾಯದ ಮ್ಯಾಲೆ ಹೊಸಾ ಬರೀ
ಮಾರ್ಟಿನ್ ಲುಥರ್ ಕಿಂಗ್'

ಎಂಬುದಾಗಿ ವ್ಯಕ್ತವಾಗಿದೆ. 'ಆಡೋದು ವೇದಾಂತ, ಮಾಡೋದು ವ್ಯವಹಾರ'ವಾಗಿ ನಡೆ - ನುಡಿಯಲ್ಲಿ ಅಂತರ ಬೀಳುತ್ತಿದೆ. ಹೀಗೆ ಅಂತರ ಬೀಳುತ್ತ ಹೋದರೆ, ಮಾನವನ ಉನ್ನತಿ ಆಗುವುದು ಅಸಾಧ್ಯ. ಕನಕನ - ಕನಕದಾಸರ ಗುಣ ನಮ್ಮಲ್ಲಿ ಬಂದದ್ದಾದರೆ- 'ನಾ (ಅಹಂಕಾರ) ಸತ್ತರೆ ನಮಗೂ ಸ್ವರ್ಗ ಸಿಕ್ಕೀತು'. ಇಲ್ಲದಿದ್ದರೆ, ಕದ್ದು ಬಾಳೇಹಣ್ಣು ತಿಂದ ವೇದಾಂತಿಗಳಂತೆ ನಾವೂ ನಮಗೆ ತಿಳಿದಿದ್ದನ್ನೂ, ತಿಳಿಯದಿದ್ದದ್ದನ್ನೂ ಆಡುತ್ತ ವ್ಯರ್ಥವಾಗಿ ಕಾಲಹರಣ ಮಾಡುತ್ತೇವೆ. ಹೀಗೆ ಆಗಬಾರದು ಎಂಬುದೇ ಅಂಬಿಕಾತನಯದತ್ತರ ಆಶಯವಾಗಿದೆ.

'ಪೂತಾತ್ಮ-ಹೂತಾತ್ಮ-ಹುತಾತ್ಮ-ಮಹಾತ್ಮ' ಈ ಪದ್ಯದಲ್ಲಿ ಗಾಂಧೀಯವರ ಸಫಲ, ವಿಫಲ ಜೀವನದ ದರ್ಶನವನ್ನು ಕವಿಗಳು ಕಂಡಿದ್ದಾರೆ.-

''ಹಿಂಸೆ ಮಹಾತ್ಮರ ಮುಂಚೆಯೇ ಹುಟ್ಟಿತ್ತು
ಅಹಿಂಸೆ ಅವರ ಮುಂಚೆಯೆ ಅರೆ ಸತ್ತಿತ್ತು
ಅವರು ಊದಿದ ಮಂತ್ರದಿಂದ
ಅಹಿಂಸೆಗೆ ಬಹಳಷ್ಟು ತ್ರಾಣ ಬರಲಿಲ್ಲ
ಹಿಂಸೆಗಂತೂ ಲಂಗೂ ಲಗಾಮು ಇರಲಿಲ್ಲ''

ಎಂಬುದು ಗಾಂಧೀಯವರ ಸ್ಥಿತಿಯಾದರೆ,

''ಅಹಿಂಸೆ ಎಂಬುದು ಗೋಡೆ
ಹಿಂಸೆ ಎಂಬುದು ಚಿತ್ರ
ಮತ್ತೆ ಮತ್ತೆ ಜನ ಓದುವುದು-ಅದೇ ವಿಚಿತ್ರ''

ಎಂಬುದು ಅವರ ಅನಂತರದ ಅಹಿಂಸಾ ತತ್ತ್ವಪ್ರತಿಪಾದಕರ ನಡತೆಯಾಗಿದೆ.

'ಗಾಂಧೀ ಸತ್ಯ' ಮತ್ತು 'ಧ್ರುವತಾರೆ'ಯಲ್ಲಿ ಗಾಂಧೀಜಿಯವರ ಶ್ರೇಷ್ಠ ಜೀವನವನ್ನು ಕುರಿತು ಕವಿಗಳು ಹಾಡಿದ್ದಾರೆ. ಗಾಂಧೀಜಿಯವರು ಪ್ರಾಜ್ಞರಾಗಿದ್ದರು. ಅವರು ತೇಜ ಸ್ತಂಭ, ದೀಪಮಾಲೆಯ ಕಂಭ, ಧ್ರುವತಾರೆ ಇದ್ದಂತೆ. ಆದುದರಿಂದಲೇ 'ಧ್ರುವವು ಮುಳುಗಿದ್ದುಂಟೇ' ಎಂದು ಕವಿಗಳು ಪ್ರಶ್ನಿಸಿದ್ದಾರೆ.

ಗಾಂಧೀಜಿಯವರು ಶ್ರೇಷ್ಠ ರಾಮ ಭಕ್ತರು. ಅವರು ಆಡಿದ ಮಾತಿಗೆ ನಡತೆಯ ಜೊತೆ ಇತ್ತು. ಆದುದರಿಂದ ಆ 'ಕರ್ಮಯೋಗಿಯ ವಚನ-ನಕ್ಷತ್ರಮಾಲೆ'ಯಂತೆ ಗಾಂಧೀಭಕ್ತರ ಚಿತ್ತಾಕಾಶವನ್ನು ವ್ಯಾಪಿಸಿ ನಿಂತಿದೆ. ಭಾರತದಲ್ಲಿ ಭಕ್ತರ ಸಂಖ್ಯೆ ಕಡಿಮೆ ಇಲ್ಲ. ಹಿಂದಿನಿಂದ ಇಂದೂ ಮುಂದೂ ಹರಿಯುವ ಜೀವಂತ ಪ್ರವಾಹ ಭಕ್ತರ ಮಾಲಿಕೆ. ಅದು -

'ಶ್ರೀ ಶೈಲ ಮಾಲತಿಗು; ತಿರುಮಲೆಯ ಪದ್ಮಿನಿಗು
ಹೂ ಮಲ್ಲಿಗೆಯ ಭಕ್ತಿ ಅಂಟಿಗಂಟು'

ಎಂಬಂತೆ ಬೆಳೆಯುತ್ತ ಹೋಗುವ ಬಳ್ಳಿ. ಅಂಥ ಬಳ್ಳಿಯ ಒಂದು ಹೂ ನಮ್ಮ ಗಾಂಧೀ. ಅವರ ತಪಸ್ಸಿನ ಕ್ಷೇತ್ರ-ನಮ್ಮ ಈ ಭಾರತ.

''ನಾವು ಏನ ಮರತರೂ
ನೀನು ಬಾಳಿದೀ ಅಂತ ನಾವು ಬದುಕಿದ್ದಿವಿ
ಇದನ್ನ ಮರಯೋ ಹಾಂಗಿಲ್ಲ''

ಎಂದಿದ್ದಾರೆ ಅಂಬಿಕಾತನಯದತ್ತರು.

'ಮಹಾತ್ಮಾ', ಈ ಕವನವನ್ನು ಬ್ರಾಝಿಲ್ ಕವಿಯಿತ್ರಿ ಶ್ರೀಮತಿ ಸೆಸಿಲಿಯಾ ಮಿರೆಲೆಸ್ ಎಂಬವಳು ರಚಿಸಿದ್ದು ಅದರ ಇಂಗ್ಲೀಷ ಅನುವಾದದ ಕನ್ನಡ ಅನುವಾದವಿದು. ೩೧-೧-೭೦ ಕ್ಕೆ ಈ ಕವನವು ಆಕಾಶವಾಣಿಯಿಂದ ಪ್ರಸಾರಗೊಂಡುಬಿಟ್ಟದ್ದರಿಂದ ಇದನ್ನೂ 'ಇದು ನಭೋವಾಣಿ'ಯಲ್ಲಿ ಸೇರಿಸಿದೆವು.

'ಮಹಾತ್ಮಾ' ಈ ಕವನದಲ್ಲಿ ಖೇದ, ನಿರಾಶೆ ಕೂಡಿಕೊಂಡಿವೆ.

''ಆ ಗುಂಪಿನಲಿ, ಸತ್ಯವಾಗಿ ನಿನ್ನ ಹತ್ತಿರಮಾತ್ರ 'ಗನ್ನು' ಇರಲಿಲ್ಲ
ಬಚ್ಚಿಡಲು ಕಳ್ಳ ಕಿಸೆ ಇಲ್ಲ, ಸುಳ್ಳಿಲ್ಲ
ನಿನಗೆ ಮುಸುಕೇ ಇಲ್ಲ''

ಇಂಥ ಮಹಾತ್ಮನಿಗೆ ಗುಂಡು ಹೊಡೆದ ಸುದ್ದಿಯನ್ನು ಕೇಳುತ್ತಿದ್ದವರ ಕೈಯಲ್ಲಿ ಕಪ್ಪು ಚಹವೂ ಕೂಡ ನಿಟ್ಟುಸಿರು ಬಿಟ್ಟಿತಂತೆ? ಇದಕ್ಕಿಂತ ದಾರುಣವಾದ ವ್ಯಥೆ ಇನ್ನೊಂದುಂಟೆ!

ಹೀಗಿದ್ದೂ ''ದೇವರೇ ಕ್ಷಮೆ ಮಾಡು, ಕೊಲೆಗಡಕರಾರೇ ಇರಲಿ, ಸರ್ವೇ ಜನರು ಸುಖವಾಗಿರಲಿ'' ಎಂದು ರಾಮನಲ್ಲಿ ಮೊರೆಯಿಟ್ಟು ಪ್ರಾಣ ಬಿಟ್ಟರು'' ಮಹಾತ್ಮಾ ಗಾಂಧೀಯವರು. ಅವರ ಮಹಾತ್ಮ್ಯವು ಇದು. ಇಂಥ ಮಹಾತ್ಮರು ಅನೇಕರಾಗಿ ಹೋದರೂ, ಜನರ ಬುದ್ಧಿ ಬದಲಾಗಲಿಲ್ಲ ಎಂಬುದು ದೇವರ ವ್ಯಥೆಗೂ ಕಾರಣವಾಗುತ್ತದೆ. ದೇವರು ನಿಷ್ಠುರವಾಗಿ ಹೇಳುತ್ತಾನೆ-'ಈ ಜನ, ದನ ತಾಯಿ' ಎಂದು. ಜನರು ಕಷ್ಟದಲ್ಲಿ ಬಿದ್ದು ಬಳಲಿ, ಪಶ್ಚಾತ್ತಾಪದಿಂದ ದಗ್ದರಾಗಿ ಯಾವ ದಿವಸ 'ದೇವರೇ! ಕಣ್ತೆರಯೋ, ಕಳಿಸು ನಿನ್ನ ಮಹಾತ್ಮಾ' ಎಂದು ಬೇಡಿಕೊಳ್ಳುವವರೆಗೆ ಮಹಾತ್ಮನನ್ನು ಭೂಭಾಗಕ್ಕೆ ಕಳಿಸುವದಿಲ್ಲ ಎಂಬ ನಿರ್ಣಯವನ್ನು ದೇವರು ಈ ಕವನದ ಕೊನೆಗೆ ತಿಳಿಸಿದ್ದಾನೆ. ''ಸಣ್ಣ ಕಣ್ಣಿಗೆ ಸೂರ್ಯ ಕಂಡಾನು; ಆದರೆ ಸಣ್ಣ ಮನಸ್ಸಿನವರಿಗೆ ದೊಡ್ಡವರ ಮಹಾತ್ಮ್ಯ ಕಾಣುವಂತಿಲ್ಲ'' ಎಂಬುದೆ ಇತಿಹಾಸವಾಗಿದೆ.

ಭಾಷೆಗೆ ಭಾವವೇ ಮೂಲ ಎಂಬುದು 'ಭಾವವಿದ್ದಲ್ಲಿ ದೇವ' ಎಂಬ ಉಕ್ತಿಯಂತಿದೆ ಮಾತು. ಮನುಷ್ಯನು ಮೂಕನಿರಲಿ ಕಿವುಡನಿರಲಿ, ಅವನು ತನಗೆ ಅನಿಸಿದ್ದನ್ನು ಬರೆಯಲಿ, ಬರೆಯದಿರಲಿ, ಮೌನವಾಗಿರಲಿ; ಆದರೆ ಅವನು ಭಾವಶೂನ್ಯನಾಗಿರುವುದು ಬೇಡ. ಭಾಷೆಯು ಜಗಳವನ್ನು ತಂದೀತು, ಆದರೆ ಶುದ್ಧ ಭಾವವು ಸಾಮರಸ್ಯದ ಹಾದಿ. ಆದುದರಿಂದ ಪ್ರತಿಯೊಬ್ಬನ ಭಾವವು ಶುದ್ಧವಾಗಿ, ಜ್ಞಾನಿಯ ಇರುವು ಆಗಿದ್ದಾದರೆ, ಅವನ ಭಾಷೆಯು ಸ್ನೇಹಕ್ಕೆ ಹಾದಿಯನ್ನು ಮಾಡಿಕೊಡುತ್ತದೆ ಎಂಬುದು 'ಭಾವ ಭಾಷೆ'ಯ ಆಶಯವಾಗಿದೆ.

'ವಾಸನಿ' ಈ ಪದ್ಯವು ಬೀಜ ವೃಕ್ಷ ನ್ಯಾಯದಿಂದ ಪ್ರಾರಂಭವಾಗುತ್ತದೆ. ಬೀಜದಂತೆ ಫಲವಿದೆ; ಹೂವಿನಂತೆ ವಾಸನಿ ಇದೆ ಎಂಬುದು ಸತ್ಯ. ಹೂ ಇದ್ದಲ್ಲೇ ಇರುತ್ತದೆ, ವಾಸನಿ ಅದರೊಡನೆ ಇರುತ್ತದೆ, ಮನಷ್ಯನ ಮೂಗೂ ಇರುತ್ತದೆ. ಆದರೆ ಅವನಿಗೆ ವಾಸನಿ ಬರುವ ಕ್ರಿಯೆ ಮಾತ್ರ ವಿಶಿಷ್ಟವಾದುದು. ''ಗುದ್ದಲಿಯ ಮೊನೆಗೆ ನೀರಿನ ಸೆಲಿ ಹತ್ತಿದಂತೆ, ಮರತು ಹೋದ ಕನಸು ಫಕ್ಕನೆ ನೆನಪಾದಂತೆ; ಹೂವಿನಿಂದ ವಾಸನೆ ಅಘ್ರಾಣಿಸುವ ಕ್ರಿಯೆಯಾಗಿದೆ ಎಂದು ಅಂಬಿಕಾತನಯದತ್ತರು ವಿವರಿಸಿದ್ದಾರೆ. ವಾಸನೆ ಎಂಬುದು ಒಂದು ನಿಧಿ ಇದ್ದಂತೆ. ಯಾವನಿಗೆ ಸುವಾಸನೆಯನ್ನು ಅನುಭವಿಸಿ ಸುಖಪಡುವ ಸಾಮರ್ಥ್ಯವಿದೆಯೊ ಅವನಿಗೆ ಹೂವಿನ ವಾಸನೆ ಒಂದು ನಿಧಿಯಂತೆ -

ಗುಪ್ತ ದ್ರವ್ಯದಂತೆ ತೋರುತ್ತದೆ. ಯಾವನಿಗೆ ಸುವಾಸನೆಯು ಬರುವದಿಲ್ಲವೊ ದು ಅವನ ವಿಧಿ - ಪೂರ್ವಕರ್ಮ ಎಂದು ಕವಿಗಳು ಸಾರಿದ್ದಾರೆ. ಬೇಂದ್ರೆಯವರ ತಾಯಿ-ಅಂಬಿಕೆಗೆ ಧಾರವಾಡದಲ್ಲಿದ್ದೇ ಪಂಢರಪುರದ ವಿಟ್ಠಲನ ಕೊರಳೊಳಗಿನ ತುಳಸಿಯ ಸುಗಂಧ ಬರುತ್ತಿತ್ತಂತೆ. ಇದು ಅವರ ಪುಣ್ಯಫಲ!

'ಇದು ನಭೋವಾಣಿ' ಈ ಸಂಗ್ರಹದಲ್ಲಿ ಅಂಬಿಕಾತನಯರು ಕಂಡ ಗಾಂಧೀಜಿ; ಅಂಬಿಕಾತನಯರ ದೃಷ್ಟಿಯಲ್ಲಿ ಹೂ. ನಾಡು, ಜನ ಒಂದಾಗಿ ಮುಂದಾಗಬೇಕು ಎಂಬ ಅಂಬಿಕಾತನಯದತ್ತರ ಆಶಯ ಮತ್ತು ಅವರ ದೈವತಗಳಾದ ದತ್ತ, ವಿಟ್ಠಲ, ಮಂಗಲಮೂರ್ತಿಗಳಿಗೆತ್ತಿದ ಆರತಿ ಸೇರಿಕೊಂಡಿವೆ. ಇಲ್ಲಿಯ ಕವನಗಳ ಬಗ್ಗೆಯೂ ಅಂಬಿಕಾತನಯದತ್ತರ ಭಾವವು ಹೀಗಿದ್ದಂತೆ ತೋರುತ್ತೆ -

"ಹಿಡಿದಾವ್ರಿಗೆ ಹಿಡಿಸ್ತಾವ
ಬಿಟ್ಟಾವ್ರಿಗೆ ಬಿಡಸ್ತಾವ
ಎಲ್ಲಾ ಬಿಟ್ಟಾವ್ರಿಗೆ ಏನು ಹಿಡಸ್ತಾವ"?

ಡಾ|| ವಾಮನ ಬೇಂದ್ರೆ
ಸಹ ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

"ಬೇಂದ್ರೆ ಕುಟೀರ", ಹುಬ್ಬಳ್ಳಿ - ೩೦
೧೧-೧೧-೨೦೦೪
ಡಾ|| ದ. ರಾ. ಬೇಂದ್ರೆಯವರ ೨೪ನೇ ವಾರ್ಷಿಕ ದಿನ

ಕಾರ್ಯಸ್ಥಳ : "ಬೇಂದ್ರೆ ಕುಟೀರ", ವಿಶ್ರಮ ಚೇತನ, ಗೋಕುಲ ರಸ್ತೆ ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦೪೬೬

ಕೃತಜ್ಞತಾರ್ಪಣೆ

ಈ ಸಂಕಲನವನ್ನು ಹೊರತರುವಲ್ಲಿ ನಮಗೆ ಪ್ರಾಂಜಲ ಮನಸ್ಸಿನಿಂದ ಸಹಾಯಮಾಡಿದ ಈ "ಬೇಂದ್ರೆ ಅಭಿಮಾನಿ ಬಳಗ"ಕ್ಕೆ ನಮ್ಮ ಸಂಸ್ಥೆಯ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಕೃತಿಯ ಸಂಪಾದನೆ ಹಾಗೂ ಪಾಂಡಿತ್ಯಪೂರ್ಣ ಭೂಮಿಕೆ	: ಡಾ|| ವಾಮನ ಬೇಂದ್ರೆ, ಬೇಂದ್ರೆ ಸಂಶೋಧನ ಸಂಸ್ಥೆಯ ಸಹ ನಿರ್ದೇಶಕರು
ಹೊರಹೊದಿಕೆ ಹಾಗೂ ಕವನಗಳಿಗೆ ಚಿತ್ರವಿನ್ಯಾಸ	: ಶ್ರೀ ಸುರೇಶ ಕುಲಕರ್ಣಿ
ಹೊರಹೊದಿಕೆ ವಿನ್ಯಾಸ	: ಶ್ರೀ ರವೀಂದ್ರ ವಿಶ್ವಜ್ಞ
ಡಿ. ಟಿ. ಪಿ. ಹಾಗೂ ಪುಟ ವಿನ್ಯಾಸ	: ಶ್ರೀ ಈರಣ್ಣ ನೂಲ್ವಿ
ಮುದ್ರಣ ವಿನ್ಯಾಸ	: ಶ್ರೀ ಶಾಂತಕುಮಾರ
ಪ್ರಕಾಶನದಲ್ಲಿ ಸಹಾಯ ಹಾಗೂ ಸಹಕಾರ	: ಶ್ರೀ ರವೀಂದ್ರ ಶಿರೋಳಕರ್

ಕನ್ನಡ ರಸಿಕರಿಗೆ ಹೊಸ ರಸದೌತಣ ಈ ಆವೃತ್ತಿ; ಎಂದಿನಂತೆ ತಮ್ಮ ಆದರವೇ ನಮ್ಮ ಬಲ.
ಆ ಬಲವನ್ನು ಈ ಆವೃತ್ತಿಗೂ ತೋರಬೇಕೆಂದು ಕೋರುತ್ತೇನೆ.

- ಪ್ರಕಾಶಕರು

ಪ್ರಕಾಶಕರ ಸ್ಪಂದನ

"ಓ ಶ್ರೋತ್ರಿಯನೆ, ಶ್ರೋತಾರಾ, ಕೇಳು
ಇದು ನಭೋವಾಣಿ
ನಾನು ಬಾಯಿ; ನೀನು ಕಿವಿ
ಬಾನ ಕಡಲಲಿ ತೇಲಿಬಿಟ್ಟ ಈ ನುಡಿ ದೋಣಿ
ನಿನ್ನ ಬುದ್ಧಿಯ ಮನೆಯ ಕಟ್ಟೇತು
ನೀನೆಲ್ಲೇ ಇರು. ಕೇಳುವ ಸೂತ್ರ ಸರಿ ಇರಲಿ
ಹೃದಯ ತೆರೆದಿರಲಿ"

- (ಇದು ನಭೋವಾಣಿ, ಪುಟ.೩)

ಇದು ವರಕವಿ ಅಂಬಿಕಾತನಯದತ್ತರ "ನಭೋವಾಣಿ". ಬಾನ ಕಡಲಲ್ಲಿ ಅವರು ತೇಲಿಬಿಟ್ಟ ನುಡಿ ದೋಣಿ. ರಸಿಕರು ಈ ನುಡಿ ದೋಣಿಯನ್ನು ತಮ್ಮ ಹೃದಯ ಬಂದರವನ್ನು ತೆರೆದು ಬರಮಾಡಿಕೊಳ್ಳಬೇಕಾಗಿದೆ.

"ಇದು ನಭೋವಾಣಿ" - ೩೪ ಕವನಗಳನ್ನೊಳಗೊಂಡ ಒಂದು ಪುಟ್ಟ ಕವನ ಸಂಕಲನ. ಆದರೆ ಇದರಲ್ಲಿ ಮಹಾಕವಿ ಬೇಂದ್ರೆಯವರು ಮಹಾನ್ ವಿಚಾರಗಳನ್ನು ಮಂಡಿಸಿದ್ದಾರೆ. ಇದು ಹೊಸ ಹೊಸ ಹೊಸ ಕವನಗಳ ಸಂಗ್ರಹವಾಗಿದೆ. ಇದರಲ್ಲಿಯ ಕೆಲವು ಕವನಗಳ ಮಹತ್ವವನ್ನು ಮಾತ್ರ ಈ "ಸ್ಪಂದನ"ದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಈ ಕವನ ಸಂಕಲನದಲ್ಲಿಯ "ನಭೋವಾಣಿ" ಕವನ ಅಧ್ಯಯನಾರ್ಹವಾಗಿದೆ. ನೂರಾಹದಿನಾರು ಸಾಲುಗಳ ಸುದೀರ್ಘ ಕವನ ಇದಾಗಿದ್ದು ಇದರಲ್ಲಿಯ ಕೆಲವೇ ಭಾಗಗಳನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ.

"ಓ ಹೃದಯವಂತ, ಓ ಬುದ್ಧಿವಂತ, ಜೀವಂತ !
ಮೂಡಲವ ಪಡುವಲವ ಸುತ್ತುಹಾಕಿ ಬರುತಿದೆ
ನಭೋವಾಣಿ, ಸಾರ್ವಭೌಮ ಮಧುರಾಣಿ, ಜೇನಹುಟ್ಟು
ಕಟ್ಟಲಿಂಬುಗೊಡು ನಿನ್ನ ಹೃದಯದ ಗೂಡು".

"ರುಚಿ ನೋಡು-ವೈಷಮ್ಯ ಹರಿಸಿ
ಸಮರಸ ಬೆರಿಸಬಂದೀತು; ಕತ್ತಲೆ ಹರೆದು
ಬೆಳಕು ತೆರೆತರೆದು ಬಂದೀತು; ಮೃತ್ಯುವನು ಕತ್ತರಿಸಿ
ಬಾಳಿನಲೆಯಲೆಯಾಗಿ ಅಮೃತ ತಂದೀತು".

"ಹೊಸ ಹೊಸ ಹೊಸ ಹಾಡು
ಒಂದಾಗಿದೆ ನಾಡು, ಹೊಂದಿಕೊಂಡು ನೋಡು"

- (ನಭೋವಾಣಿ - ಪುಟ.೩, ೪, ೬)

ಬೇಂದ್ರೆಯವರು ಈ ಕವನದ ಮೂಲಕ ವೈಷಮ್ಯರಹಿತ ಸಮರಸದ ಬದುಕಿಗೆ, ಕತ್ತಲೆ ಹರೆದು ಬೆಳಕು ತೆರೆದು ಬಂದು, ಮೃತ್ಯುವನ್ನು ಕತ್ತರಿಸಿ ಅಮೃತತ್ವವನ್ನು ತರುವ ಬಾಳಿಗೆ ಹಾದಿ ಮಾಡಿದ್ದಾರೆ. ಮಾನವತೆಯ ಮಂತ್ರವನ್ನು ಪಸರಿಸುವ "ಹೊಸ ಹೊಸ ಹೊಸ ಹಾಡು" ಮೂಡಿಸಿದ್ದಾರೆ.

ಈ ಕವನ ಸಂಕಲನದಲ್ಲಿ ಬೇಂದ್ರೆಯವರು ಗಾಂಧಿಜೀ ಬಗ್ಗೆ ಬರೆದ ಐದು ಕವನಗಳು ಸೇರ್ಪಡೆಯಾಗಿವೆ. "ಶಕಪುರುಷನ ಶತಮಾನ", ಪೂತಾತ್ಮ-ಹೂತಾತ್ಮ-ಹುತಾತ್ಮ-ಮಹಾತ್ಮ", "ಗಾಂಧಿ-ಸತ್ಯ", "ಧ್ರುವತಾರೆ" ಹಾಗೂ "ಮಹಾತ್ಮ". ಇವು ಮಹಾತ್ಮಾ ಗಾಂಧಿಯವರ ವ್ಯಕ್ತಿತ್ವ-ಸಾಧನೆಗಳ ವಿವಿಧ ಮುಖಗಳ ದರ್ಶನವನ್ನು ಮಾಡಿಸುವುದರೊಡನೆ, ಅವರು ಹುತಾತ್ಮರಾದ ನಂತರ ಅವರ ಆಚಾರ-ವಿಚಾರಗಳು ವಿಕೃತಿಗೊಳಿಸಲ್ಪಟ್ಟು ಸ್ವಾರ್ಥ ರಾಜಕಾರಣಿಗಳ ವ್ಯಾಪಾರದ ವಸ್ತುವಾಗಿದೆ ಎಂಬ ವಾಸ್ತವಿಕತೆಯನ್ನು ಬಿಂಬಿಸುತ್ತವೆ. ಕವಿವಾಣಿಯಲ್ಲೇ ಈ ಅಂಶಗಳ ದರ್ಶನವನ್ನು ಪಡೆಯೋಣ :

"ಓ ಮಹಾತ್ಮ! ಶತಸಾಂವತ್ಸರಿಕಕ್ಕೆ
ಸತ್ಯ ವರದಿ ಮಾಡೋಣ
ನೀನು ಹೋದ ಮೇಲೆ, ನಾವು
ತಿನ್ನುವ ಭಿಕ್ಷೆ ಅನ್ನ, ಪರದೇಶಿ
ಬಳಸುವ ಕಳ್ಳ ಹೊನ್ನು, ಪರದೇಶಿ
ಸಿಂಗರಿಸುವ ಮಳ್ಳ ಹೆಣ್ಣು, ಪರದೇಶಿ
ಕಲಿಸುವ ಮಂತ್ರ, ಯಂತ್ರ, ತಂತ್ರ, ವಿದ್ಯೆ, ಪರದೇಶಿ."
- (ಪೂತಾತ್ಮ-ಹೂತಾತ್ಮ-ಹುತಾತ್ಮ-ಮಹಾತ್ಮ - ಪುಟ.೨೮)

ಎಂದು ಅತ್ಯಂತ ಖಾರವಾಗಿ ಸತ್ಯವನ್ನು ನುಡಿದಿದ್ದಾರೆ.

ಈ ಕವನದಲ್ಲಿ ಬೇಂದ್ರೆಯವರು "ಯಾರು ಹುಟ್ಟಿಸಿದರೋ ಈ ಅವಳಿ-ಜವಳಿ ಮಾತು, ಹಿಂಸೆ-ಅಹಿಂಸೆ" ಎನ್ನುತ್ತಾರೆ. ಅಂತೆಯೇ ಎಲ್ಲಿಯವರೆಗೆ ಮಾನವರು ದಾಯಾದಿಗಳಾಗಿ, ದೈತ್ಯರು ಪಾಲಿನ ನ್ಯಾಯ ಬಗೆಹರಿಯುವದಿಲ್ಲವೋ ಅಲ್ಲಿಯವರೆಗೆ "ಅಹಿಂಸೆಯು ಸತ್ಯದ ತಪಸ್ಸಾದರೆ, ಹಿಂಸೆ ಅನಿವಾರ್ಯ ತಾಪ" ಆಗುತ್ತದೆ ಎಂದು ಹೇಳುತ್ತಾರೆ. ಇಂಥ ಸಾರ್ವತ್ರಿಕ ಸತ್ಯವನ್ನು ಬೇಂದ್ರೆ "ಪೂತಾತ್ಮ-ಹೂತಾತ್ಮ-ಹುತಾತ್ಮ-ಮಹಾತ್ಮ" ಕವನದಲ್ಲಿ ಬಿಂಬಿಸಿದ್ದಾರೆ.

ಕಾವ್ಯೋತ್ಪತ್ತಿ, ಕಾವ್ಯಮೀಮಾಂಸೆ ಕುರಿತು ಕೆಲವು ಕವನಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಗಮನಿಸೋಣ. "ಸೃಷ್ಟಿ-ಸ್ಥಿತಿ-ಲಯ" ಕವನದ ಈ ಸಾಲುಗಳನ್ನು ವೀಕ್ಷಿಸೋಣ :

"ಬಕುಲಕ್ಕೆ ಇಲ್ಲ ವ್ಯಾಕುಲತೆ ಲಯಕಾಲದಲಿ
ಒಣಗಿದರು ಕಂಪಿಸುತ ನಡೆಯುತಿಹವು"

ಬಕುಲ ಪುಷ್ಪ ಹುಟ್ಟಿದಾಗ, ಅರಳಿದಾಗ ಮತ್ತು ಉರುಳಿದಾಗಲೂ ಸುಗಂಧ ತಾಳಿರುವಂತೆ, ಕವನದ ಸೃಷ್ಟಿ ಸ್ಥಿತಿ ಹಾಗೂ ಲಯದ ಅವಸ್ಥೆಯಲ್ಲಿಯೂ ಅದರ ಸತ್ತ್ವಕ್ಕೆ ಹಾನಿಯಾಗುವದಿಲ್ಲ. ಉತ್ತಮ ಕವನಕ್ಕೆ ಮರಣವಿಲ್ಲ ಅದು ವಾಚಕರ ಸ್ಮರಣೆಯಲ್ಲಿ ಚಿಗುರುತ್ತ ಅವನಿಗೆ ಆಹ್ಲಾದಕೊಡುತ್ತದೆ. "ಕೃತಕೃತ್ಯ" ಕವನದಲ್ಲಿ "ನಾದಿಗೆ ಅನಾದಿಯೇ ಶ್ರುತಿಯು; ಬೇರುಗೊಳ್ಳುವುದು ಕೃತಿ, ಮೂಡುವುದು ಆಕೃತಿಯು" ಎಂದು ಹೇಳುವುದಲ್ಲದೆ :

"ಈ ತಂತಿ ಆ ತಂತಿ ಊತಂತಿ ಮಿಡಿಯದೇ
ಚಿಂತನದ ಚಿಂತಿಕಾ ತಂತ್ರ ಕರಣ ಭ್ರಾಂತಿ
ಯಾವ ಓಜಸ್ಸು ಮಾಧುರ್ಯ ಯಾವುದೋ ಕಾಂತಿ
ಮಿಂಚು ಮಸೆದಾಟದಲಿ-ನಕ್ಷತ್ರ ವಿಶ್ರಾಂತಿ"

ಎನ್ನುತ್ತಾರೆ. ಕಾವ್ಯಗುಣಗಳ ಪ್ರಕಾಶ ಕಂಡ ಕವಿ ತಾನು ಕಂಡದ್ದನ್ನು ತನ್ನ ಕವನಗಳಲ್ಲಿ ಹೇಗೆ ಅಭಿವ್ಯಕ್ತಪಡಿಸುತ್ತಾನೆ ಎನ್ನುವುದು ವ್ಯಕ್ತವಾಗುತ್ತದೆ.

ಭಾಷೆಗಿಂತ ಭಾವ ಶ್ರೇಷ್ಠ ಎನ್ನುವುದನ್ನು "ಭಾವ-ಭಾಷೆ" ಕವನದಲ್ಲಿ ಬಿಂಬಿಸಿದ್ದಾರೆ.

"ಭಾವ ಭಾಷೆಗೆ ಮೂಲ; ಭಾಷೆ ವೇಷಾವೇಶ
ನಾಡಿಗಳ ಬಡಿತದಲು ಭಯವುಂಟು ನಯ ಉಂಟು
ವಿನಯ ಅನಯದ ಜತಿಗೆ ಲಯ ವಿಲಯ ಗತಿಯುಂಟು"

ಎಂದು ನುಡಿದ ಬೇಂದ್ರೆಯವರು ಮುಂದುವರಿದು -

"ಮಾತಿಗೂ ಮೌನಕ್ಕೂ ಜಾತಿ ವೈರವು ಇಲ್ಲ
ಮೂಕನಲು ಕಿವುಡನಲು ಮೌನಿಯಲು ನಾದವಿದೆ"

ಎನ್ನುತ್ತಾರೆ.

"ಚತುರ-ವಾಣಿ" ಕವನದಲ್ಲಿ ಕಾವ್ಯ ಮೀಮಾಂಸೆಯ ನಿಪುಣ ಅಭಿನವಗುಪ್ತ ಮತ್ತು ಅಂದತ್ತ (ಅಂಬಿಕಾತನಯದತ್ತ) ಇವರ ಕಾವ್ಯ ಚಿಂತನೆಯಲ್ಲಿರುವ ಸಾದೃಶ್ಯವನ್ನು ಬೇಂದ್ರೆ ಕಂಡುಕೊಳ್ಳುತ್ತಾರೆ.

''ನೂಲಾಯ್ತು ಬತ್ತಿ ಬತ್ತಿ! ಸುಟ್ಟು ಅಂಗಾರ-ಈಬತ್ತಿ
ಇದು ಯಾವ ಆನಂದ? ಯಾವ ಪ್ರೀತಿ?
ಪರಮ ಪ್ರೇಮಾಸ್ಪದತ್ತ್ವ?, ಆನಂದತ್ತ್ವ?
ಅಂದ-ಅಭಿನವಗುಪ್ತ
ಅಂದತ್ತ''

ಎಂದು ಹೇಳುವುದರೊಡನೆ :

''ಪದಪದಕೆ ಅಂಕಿ-ಅಂಕಿ
ಇದು ತಿಳಿಯಲಾರದ ಬೆಂಕಿ-
ಚತ್ವಾರಿ ವಾಕ್ ಪರಿಮಿತಾ''

ಎನ್ನುತ್ತಾರೆ. ನಾಕು ಎಷ್ಟು ಮಹತ್ವ ಎಂಬುದನ್ನು ಪ್ರತಿಪಾದಿಸಲು ಪದಕ್ಕೂ ಅಂಕಿಗೂ ಇರುವ ಸಂಬಂಧವ
ಸೂಚಿಸುತ್ತಾರೆ. ಈ ಕವನ ಪ್ರಾರಂಭವಾಗುವ ರೀತಿ ಇದಕ್ಕೆ ಸಾಕ್ಷಿಯಾಗಿದೆ.

''ಚತ್ವಾ-ರಿ ಶೃಂಗಾಃ । ನಾಕು ಕೋಡು
ಇದು ನಮ್ಮ ಧನ
ದನದಂತೆ ದಿನದಂತೆ
ಜನಕೆ ಜನನದ ಕೋಡು-ನಾಕ
ಮುದ್ದು ನಾಕು
ಅಷ್ಟೇ ಸಾಕು''

ಎಂದು ಹೇಳುವುದರ ಮೂಲಕ ಜನೆಟಿಕ್ ಕೋಡ್‌ಗೂ ನಾಕಕ್ಕೂ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತಾ
ಜೀವ ಪ್ರಪಂಚದಲ್ಲಿ ಡಿ.ಎನ್.ಎ. ಹಾಗೂ ಆರ್.ಎನ್.ಎ.ಗಳು ಮನುಷ್ಯನ ಗುಣಲಕ್ಷಣಗಳನ್ನು ನಿರ್ಣಯಿಸು
ಎಂಬ ವೈಜ್ಞಾನಿಕ ಸತ್ಯವನ್ನು ಈ ಮೂಲಕ ಮಂಡಿಸುತ್ತಾರೆ.

ಈ ಕವನ ಸಂಕಲನದ ಕೊನೆಯ ಕವನ ''ನವ ವಿಸರ್ಗ'' ಧ್ವನಿಕಾವ್ಯ ಸೃಷ್ಟಿ ಹೇಗೆ ಒಂದು ವಿಶಿಷ್ಟ ಹ
ಸೃಷ್ಟಿ ಎನ್ನುವುದನ್ನು ಇದು ನಿರೂಪಿಸುವುದರೊಡನೆ, ನವ ವಿಸರ್ಗದ ವಿವಿಧ ಆಯಾಮಗಳನ್ನು ಚಿತ್ರಿಸುತ್ತದೆ.

''ಕವಿಯ ಆತ್ಮ ಧ್ವನಿಕಾವ್ಯದಲ್ಲಿ ಬುಧ ಬುಧ ನಿವೇದಿಸಿದನು''
....
....

''ಭಾಷೆ ಏಕೆ ಬರಿ ಧನಿಯು ಸಾಕು, ಆ ಅಲಂಕಾರ ನೂಕು
ರೀತಿಗೀತಿ ಕೊಂಡಾಟ ಬೇಡ, ಗುಣಗಣದ ಷೋಕಿ ಝೇಂಕು
ಭಾವವೇನು ಎಣಿಸಾಟ ಉಂಟೆ? ಆಧಂದ ಗತ್ತುಗಿತ್ತು
ಒಂದೆ ನಾಮದಲಿ ಪ್ರಣವಧಾಮ ಅಡಗಿತ್ತು ಇಲ್ಲಾ ಇತ್ತು''

ಹೀಗಾಗಿ ''ಇದು ನಭೋವಾಣಿ'' ಬೇಂದ್ರೆಯವರ ಅಂತರ್ವಾಣಿಯ ಅಭಿವ್ಯಕ್ತಿಯಾಗಿ 'ನವವಿಸ
ಸೃಷ್ಟಿಯನ್ನು ಮಾಡುತ್ತದೆ. ಅಂತೆಯೇ ಈ ಸಂಕಲನಕ್ಕೆ ವಿಶೇಷತೆಯಿದೆ.

ಡಾ|| ಕೆ. ಎಸ್. ಶರ್ಮಾ
ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾ

''ಬೇಂದ್ರೆ ಕುಟೀರ'', ಹುಬ್ಬಳ್ಳಿ - ೩೦
೧೧-೧೧-೨೦೦೪
ಡಾ|| ದ. ರಾ. ಬೇಂದ್ರೆಯವರ ೨೪ನೇ ವಾರ್ಷಿಕ ದಿನ

ಕಾರ್ಯಸ್ಥಳ : ''ಬೇಂದ್ರೆ ಕುಟೀರ'', ವಿಶ್ವಶ್ರಮ ಚೇತನ, ಗೋಕುಲ ರಸ್ತೆ ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦


೧ ಮಹಾನುಭಾವರು

೧

ಈ ಮಹಾನುಭಾವರೂ। ಮೂವರೂ। ಈವರೂ।
ಹಿಮ್ಮಡಿ ಜಡಿಯುವರೂ। ಮೂಗಡಿಯುವರೂ।
ಮೂವರೂ। ಕಾವರೂ।
ಬಿಸಿಯುವರೂ। ಹಸಿಯುವರೂ। ಚಳಿಚಳೀ।
ಚಿಳಿಚಿಳಿ। ನಡುಗುವರೂ।
ಮರಾ ಗಿಡಾ।
ಉಡುಗುವರು। ಚಿಗುರುವರು। ನಿಗುರುವರು।
ಹನ್ನೆರಡೂ ಕಾಲಾ। ಸುತ್ತುವರು। ಬಿತ್ತುವರು
ಒಬ್ಬರೂ। ಬೆಳಕs ಸೂಸೀ। ಎತ್ತೂ। ಮುತ್ತುವರೂ।
ಒಬ್ಬರೂ। ಮೈಗೆ ಸಿಕ್ಕರೂ। ಕೈಗೆ ಕಣ್ಗೆ ಸಿಗರು। ಆ ಪೊಗರು
ಒಬ್ಬರೂ ಹತ್ತಿದ್ದೂ। ಹತ್ತಿರಿದ್ದೂ। ಒಬ್ಬರನೊಬ್ಬರು ತಬ್ಬರೂ।
ಅತ್ತತ್ತ ದಬ್ಬರೂ।
ಇಬ್ಬರೂ। ಇಬ್ಬರೂ। ಅವರಿಗೆ ಇವರೂ। ಗೊಬ್ಬರೂ।
ಬೆಳೆಗೊಡದಂತೆ। ಹಬ್ಬರೂ
ಮಾರ್ಗವs ಹಿಡಿದರೂ। ದೇಸಿಯಾ ನುಡಿವರೂ.

೨
ಯಾರಿವರು ಮೂವರು ?
ನಮಗೆ ಈವರು । ನಮ್ಮ ಕಾವರು । ನಮ್ಮ ಪ್ರಾಣಾ ಜೀವರು ।
ಅ-ತ್ರಿಭಾವರೂ । ದ್ಯೈದೀಪ್ಯ ದೇವರೂ ।
ಸೇವಕರೂ । ಸೇವ್ಯರೂ ।
ಸಂಭಾವ್ಯರೂ । ಒಬ್ಬರೇ ಮೂವರೂ ।
ಐವರೂ । ಎಳ್ಪರೂ । ನಮ್ಮನ್ನಾಳ್ವರೂ ।
ಪಡೆಸೀ ಪಡೆಯರೂ । ನಡೆಸೀ ನಡೆಯರೂ ।
ನುಡಿಸಿ ನುಡಿಯರೂ ।
ಓಂಕಾರ ಕಹಳೇ ಹಿಡಿವರೂ ।
ಮರ್ಮಾ ಮರ್ಮಾ ಮಿಡಿವರೂ
ಒಡಲS । ಒಡೆಯರು
ಈ ಮಹಾನುಭಾವರು.

ಭಾವ : ಋತುಮಾನಗಳ ಮೂರು ಕಾಲಗಳ ಚಿಂತನೆಯಾಗಬೇಕು ಎಂಬ ಸೂಚನೆ, ಯಾರಿವರು ಮೂವರು ಎಂಬ ಪ್ರಶ್ನೆ ಇಲ್ಲಿದೆ.



---

೨ ಇದು ನಭೋವಾಣಿ - ಕವನ ಸಂಕಲನ : ಲೇ : ದ. ರಾ. ಬೇಂದ್ರೆ (ಅಂಬಿಕಾತನಯದತ್ತ)

೨ ಇದು ನಭೋವಾಣಿ

೧
ಓ! ಶ್ರೋತ್ರಿಯನೆ, ಶ್ರೋತಾರಾ, ಕೇಳು
ಇದು ನಭೋವಾಣಿ.
ನಾನು ಬಾಯಿ; ನೀನು ಕಿವಿ
ಬಾನ ಕಡಲಲಿ ತೇಲಿಬಿಟ್ಟ ಈ ನುಡಿ ಡೋಣಿ
ನಿನ್ನ ಹೃದಯದ ಬಂದರವ ಮುಟ್ಟೀತು
ನಿನ್ನ ಬುದ್ಧಿಯ ಮನೆಯ ಕಟ್ಟೀತು
ನೀನೆಲ್ಲೇ ಇರು. ಕೇಳುವ ಸೂತ್ರ ಸರಿ ಇರಲಿ
ಹೃದಯ ತೆರೆದಿರಲಿ.
೨
ಕನ್ನಡದ ಹಾಗೆ ಕೇಳಿಸಬಹುದು ಈ ಮಾತು
ಆದರೂ ಇದು ಮಾನವ್ಯ ಜೀವದಿಂ ಜೀವಕ್ಕೆ
ಕಟ್ಟಿದ ಸೇತು. ಬಾಂಧವ್ಯಜಾತ ಜೀವಾತು.
ದಾಯಾದಿ ಕದನಕೌತೂಹಲದ ವ್ಯಥೆಯ ಕಥೆಯಲ್ಲ
ಹೊನ್ನೆಂಬ, ಹೆಣ್ಣೆಂಬ, ಮಣ್ಣೆಂಬ ಬೆದೆಯ ದಬದಬೆಯಲ್ಲ.
ಭಾವವೇ ಹೂತು, ಭಾವವೇ ನೂತು, ಮಾಲೆಯಾತು
ಬಂದಿಹುದು ತೆಕ್ಕೆಬೀಳಲು ಕೊರಳು ಕೊರಳಿಗೆ ಜೋತು
ಮನಸೋತು. ತೆರೆ ಎದೆಯನೆದೆಗೆ ವಾಸನಾಜಾಲಗಳ
ಮುಸುಕನೋಸರಿಸಿ, ಹಸುಗೂಸು ಹಡೆದ ತೊಡೆಗೆ
ತೋಳಿಗೆ ಬಂದು, ಎದೆಯ ತೊರೆಹರಿಸುವಂತೆ, ತಟ್ಟೀತು
ಓ ಹೃದಯವಂತ, ಓ ಬುದ್ಧಿವಂತ, ಜೀವಂತ !
ಮೂಡಲವ ಪಡುವಲವ ಸುತ್ತುಹಾಕಿ ಬರುತಿದೆ
ನಭೋವಾಣಿ, ಸಾರ್ವಭೌಮ ಮಧುರಾಣಿ, ಜೇನಹುಟ್ಟು
ಕಟ್ಟಲಿಂಬುಗೊಡು ನಿನ್ನ ಹೃದಯದ ಗೂಡು.

೩
ರುಚಿ ನೋಡು-ವೈಷಮ್ಯ ಹರಿಸಿ
ಸಮರಸ ಬೆರಿಸಬಂದೀತು; ಕತ್ತಲೆ ಹರಿದು
ಬೆಳಕು ತೆರೆತೆರೆದು ಬಂದೀತು; ಮೃತ್ಯುವನು ಕತ್ತರಿಸಿ
ಬಾಳಿನಲೆಯಲೆಯಾಗಿ ಅಮೃತ ತಂದೀತು.
ಸವಿದು ನೋಡು ರಸಕೆ ರಸ ಬೆರಿಸಿ ಸುರಿಸಿ
ಹರಿಸಿ ನೋಡು, ಹಿಗ್ಗಿ ನೋಡು. ಶಿವಸಂಕಲ್ಪ
ರೂಪಿಸುವ ಶಕ್ತಿವಾಣಿ, ತುಲಸೀ ಗಂಧ
ಪಸರಿಸುವ ಭಕ್ತಿವಾಣಿ, ಯೇಸುವಿನ
ಪರ್ವತವಾಣಿ, ರಸೂಲರ ಗುಹಾವಾಣಿ
ದೇವ ಹೃದಯದ ನಾಡಿ ನಡೆಯಿಸುವ ಚುಕ್ಕಾಣಿ
ನರನಾರಿವೃಂದ ಸಿಂಘನಿ ಮುತ್ತು ಮಣಿ ಜೇನುಹನಿ
ಆನಂದದಾನಿ.
೪
ನವ ಬಂಧದ ಈ ತಂತ್ರಾ
ಈ ವಿದ್ಯುತ್ ಯಂತ್ರಾ
ಬಿತ್ತರಿಸುವದೆತ್ತೆತ್ತೂ
ಮಾನವತೆಯ ಮಂತ್ರಾ.
೫
ದುರ್ವಾಸನೆಗಳ ಹೊಲಿಗೆಯ, ಆ ಭೀತಿಯ ಈ ಭೀತಿಯ
ಭಿತ್ತಿಯ ಚುಚ್ಚಿ ಽಽ
ಗುರು-ಲಗು-ಬಿಗು ಬಿಚ್ಚಿ
ಭೂಮಾತೆಯ ವಾತ್ಸಲ್ಯದ ಹೊಸ ಸೆರಗನು ಹೊಚ್ಚಿ
ಒಂದರ ಮುಂದೊಂದಾಗದೇ, ಚೆಂದಾದೀತೆ ಪಾಡು ?
ಒಂದಾಗಿದೆ ನಾಡು.
೬
ದಶಮಾನದ ಶಕ್ತಿಯಾಗಿ
ಶತಮಾನದ ಹಾಡು
ಸಾವಿರದೀ ಪಾಡು
ಎಲ್ಲರ ಲಕ್ಷ್ಯವ ಸೆಳೆಯುವ ಈ ದೇವಕೋಟ
ಆಬ್ದದ ಮಾನ ದಾಟ
ಬರುತಿದೆ ಹೊಸ ಹಾಡು, ಕೇಳಣ್ಣಾ ಕಿವಿಗೊಟ್ಟು
ಇದು ಅಲ್ಲವೊ ಹಾರಸುದ್ದಿ, ಹೊಂದಿಕೊಂಡು ನೋಡು
ಎಲ್ಲಿದ್ದೀ? ಅಲ್ಲಿಂದಲೆ ಕೇಳು.

---

೪ ಇದು ನಭೋವಾಣಿ - ಕವನ ಸಂಕಲನ : ಲೇ : ದ. ರಾ. ಬೇಂದ್ರೆ (ಅಂಬಿಕಾತನಯದತ್ತ)

೭

ಇಲ್ಲೇ ಇರು, ಎಲ್ಲೇ ಇರು ಬರುತಿದೆ ಕಿವಿಮುಟ್ಟಾ
ಶ್ರೀಽಽಗುರುದತ್ತನ ಸಂಚಾರಾ, ಸ್ಮೃತಿಗೋಚರಾ
ಸ್ವಯಂಗೋಚರಾ, ಆ ಭೌಮಾ ಸಂವಿತ್ತಿಗೆ
ಹೃದಯ ತೆರೆದಳು ಸರಸ್ವತಿ ಈ ಸತ್ತಿಗೆ.
ಸರ್ವರ ಸುಖದುಃಖಾ ಜೀವನದಾ, ದಿನದಿನದಾ
ಹೊಸ, ಹೊಸ, ಹೊಸ ಲೆಕ್ಕಾ
ಅಕ್ಕಾ, ಕೇಳವ್ವಾ; ಕೇಳೋ ತಮ್ಮಾ
ಬಾನುಲಿ ಸ್ಪಂದಿಸುತಿದೆ ಆಕಾಶವಾಣಿ
ದೈವದ ಚುಕ್ಕಾಣಿ-ಈ ಹಾಡಿನ ಡೋಣಿ.

೮

ಯಾಕೋ ಬಿಗುವಿನ ಮೂರ್ಛೆ?
ಆ ಚರ್ಚೆ, ಈ ಚರ್ಚೆ ಎಲ್ಲಾ ಹೃದಯದ ದೇವನ ಅರ್ಚೆ.
ಬಾಬಾ ಬುಡ್ಡನಗಿರಿ ಮಲೆ ಹತ್ತಿರಕಿರು
ತಿರುಪತಿ ಶ್ರೀಶೈಲದ ಎತ್ತರಕಿರು
ಹಿಮಾಲಯದ ಉತ್ತರಕಿರು
ಗೋಕರ್ಣದ, ಆ ಉಡುಪಿಯ ಪಡುಗಡಲಿನ ಹತ್ತಿರಕಿರು
ನೀನಿರು ಎಲ್ಲೆಲ್ಲೂ; ಏರೀತೀ ಹಾಡು
ಈ ಘಟ್ಟದ ಹಾಡು.

೯

ಎಲ್ಲೇ ಇರು ಅಲ್ಲಲ್ಲೇ ಅಲೆ ಅಲೆಯಾಗಿ
ಸಾರ್ವಭೌಮ: ಮಾನವತೆಯ ನೆಲೆನೆಲೆಯಾಗಿ
ಬರುತಿದೇಽಽ ಬರುತಿದೇಽಽಽಽ ಎಲ್ಲಿದ್ದೀ?

೧೦

ಕ್ಷಣಕೆ ಭೂಽಪ್ರದಕ್ಷಿಣೆ
ಕ್ಷಣಕ್ಷಣಕೂ ರಕ್ಷಣೆ
ಇಲ್ಲಿಂದಲೆ ನಾ ಹಾಡುವೆ, ಎಲ್ಲಿಂದಲು ಕೇಳು
ನಿದ್ದೆಯ ತೊರೆದೇಳು.
ಘಟ್ಟ ಘಟ್ಟ ಇಳಿದು ಹತ್ತಿ
ಬರಲೇಕೋ ಸುತ್ತಿಸುತ್ತಿ ?
ಹೃದಯದ ಬಯಕೆಯ ಹಿಂಗಿಸಿ,
ಭೂಮಿಯನ್ನು ಈ ಮಾತೇ ಆಲಿಂಗಿಸಿ
ಬರುತಿದೇಽಽ ಬರುತಿದೇಽಽ ಬರುತಲಿದೆ.

೧೧
ಬಗೆ ಹರಿದೂ, ಎದೆ ತೆರೆದೂ,
ಬೇರೆ ಬೇರೆ ಬೇರೆ ಎಂಬ
ಮೇರೆಯ ತೂರೆದೂ, ಬರುತಿದೆ ಈ ಹಾಡು.
ಎರಡಲ್ಲವೊ ನಾ, ನೀನೂ
ಒಂದಾಗಿದೆ ನಾಡು.
೧೨
ಇದೋ ನಾನು, ಅದು ನೀನು
seen ಉ, unseen ಉ
ಇಗೋ ನೀನು, ಅಗೋ ನಾನು
ಯೋಗಧಾರಿ, ಕ್ಷೇಮಕಾರಿ
ಈ ಎರಡೂ ಸೀನು.
ನಾನಾರೋ? ನೀನಾರೋ?
ಎನಬೇಡವೊ ಮೂರ್ತಿ
೧೨
ನಾ ನೀನು; ನೀ ನಾನು
ಇದು ಕನ್ನಡ ಕೀರ್ತಿ
ಇದು ಆಶಾಪೂರ್ತಿ
ಈ ಬಾಯಿಗೆ ಕವಿಯಾಗು
ದೈವಕ್ಕೆ ಹವಿಯಾಗು
ಎದೆ ಎದೆಗೂ ಸವಿಯಾಗು.
೧೩
ಆ ಮೀರಾ ಹಾಡಿದಳೋ?
ಜನಾಬಾಯಿ ತೋಡಿದಳೋ?
ಮಹಾದೇವಿಯೆ ಬೇಡಿದಳೋ?
ನೀಲಾಂಬಿಕೆ ಮಾಡುವಳೋ?
ಗಂಗಾಂಬಿಕೆ ನೀಡುವಳೋ?
ಹೊಸ ಹೊಸ ಹೊಸ ಹಾಡು
ಒಂದಾಗಿದೆ ನಾಡು; ಹೊಂದಿಕೊಂಡು ನೋಡು.

೧೪

ಯಾರೋ ಮಣ, ತೊಲೆ
ಯಾರೋ ಗುಂಜಿ
ಅಂವ ಕುಡಿಯಲಿ ಅಮೃತಾ
ನಾ ಕುಡಿಯುವೆ ಗಂಜಿ
ಅವರವರಿಗೆ ಅವರೂಟಾ
ಹಿಡಿ ಅಮೃತಾ, ಕುಡಿ ಗಂಜಿ.
ವೃಂದಾವನ ಕಾರಂಜಿ
ನೋಡುವದೇತಕೆ ಅಂಜಿ?
ಕೇಳಿಸದೇ ಕೃಷ್ಣನ ಕೊಳಲೂ ಗೆಜ್ಜಿ?
ಎಂದಿನ ಆಶೆಗೆ ಬಂದಿದೆ ಇಂದಿನ ಈ ಹೆಜ್ಜಿ.

ಭಾವ : ಧಾರವಾಡ ಆಕಾಶವಾಣಿಯ ಪ್ರಸಾರಶಕ್ತಿ ಬೆಳವಣಿಗೆಯಾದ ನಿಮಿತ್ತದಿಂದ ಬರೆದ ಕವನ.

ಶಬ್ದಾರ್ಥ : ಜೀವಾತು=ಪ್ರಾಣವನ್ನು ಉಳಿಸುವ ಔಷಧ, ಸಂಜೀವನ ಜೀವ ಸತ್ತ್ವ ಸಿಂಫನಿ=ಸ್ವರಮೇಳ ಸಾಮರಸ್ಯ. ಹವಿ=ಹೋಮಕ್ಕೆ ಹಾಕುವ ವಸ್ತು

ವಿಶೇಷ : ಈ ಕವನವು ವರಕವಿ ಬೇಂದ್ರೆಯವರ ಹೊಸ ಸಂದೇಶವನ್ನು ಹೊತ್ತು ತಂದಿದೆ. 'ಕನ್ನಡದ ಹಾಗೆ ಕೇಳಿಸಬಹುದು ಈ ಮಾತು, ಆದರೂ ಇದು ಮಾನವ್ಯ ಜೀವದಿಂದ ಜೀವಕ್ಕೆ ಕಟ್ಟಿದ ಸೇತು. 'ಬಾಂಧವ್ಯ ಜೀವಾತು'-ಇದು ಸಂದೇಶ. ಭಾಷೆಗಿಂತಲೂ ಭಾವ ಮುಖ್ಯ, ಜೀವದಿಂ ಜೀವಕ್ಕೆ ಕಟ್ಟಿದ ಭಾವ ಸೇತುವೆಯು ಬಾಂಧವ್ಯದಲ್ಲಿ ಪರ್ಯವಸಾನಗೊಂಡಾಗ, ಅದು ಸಂಜೀವಿನಿಯಾಗುತ್ತದೆ ಎಂಬುದು ಈ ಕವನದ ಹೃದಯ. ಇದು ವೈಶ್ವಿಕ ಪ್ರಜ್ಞೆಯಾಗಬೇಕು ಎಂಬುದು ಕವಿಯ ಪ್ರಮುಖ ಆಶಯ.

೩ ಬಾ, ಬಾ, ಭಗವಾನ್ !

“ಮತ್ಸ್ಯಮೂರ್ತಿಂ ಹರಿಂ ವಂದೇ
ಶಿರಸಾ ಸೌಮ್ಯ ಸಂಜ್ಞಕಂ
ಶಂಖ ಚಕ್ರೋಜ್ಜ್ವಲಕರಂ
ಭಕ್ತಾಭೀಷ್ಟಪ್ರದಾಯಕಂ”-ಆಗಮ

೧

ವೇದಾ ಅನಂತಾ
ದೇವಾ ಅನಾದಿ
ಕವಿಗಣ ದರ್ಶನ ವರ್ಣನಕಿದೆ
ಮಧ್ಯದ ಹಾದಿ.
ಅವ್ಯಕ್ತಾವ್ಯಕ್ತದ ಅಭಿವ್ಯಕ್ತಿಗೆ
ಧ್ವನಿ ಸಂಧಿ ಸನಾದಿ.

೨

ದೇಹವೊ ಯಂತ್ರಾಗಾರಾ
ಮನ ಮಂತ್ರಾಕಾರಾ
ದೇವಪ್ರೀಣನವೇ ಪ್ರಾಣನವಾಗಿರೆ
ಸ್ವಾತಂತ್ರ್ಯದ ಸಾರಾ.

೩

ದ್ವಾವಿಂಶತಿ ಶ್ರುತಿಕಾರಿಣೀ ಸಪ್ತಸ್ವರ ಸಂಚಾರಿಣೀ
ಸಾಮಾವೇದ-ಸಂವೇದಿ-ಸಂವಾದಿ
ಇದು ಮತ್ಸರೀ ಕೃತ ಮೂರ್ಛನಾ
ಆ ದನಿ ಈ ದನಿ ಊದನಿ ಆಗಲಿ ಸನಿ-ಸನಿ
ಓ ಮತ್ಸರೀ ಸರಿ ದೂರಾ ಅಂತರಾ ಸರಿಗಮಪಧನಿ

೪

ಇದು ಅನಸೂಯಾ ಬೀಜಾವಾಪನ ಕ್ಷೇತ್ರಾ
ಇಲ್ಲೀ ಪರ್ಜನ್ಯ, ಬಿಂದು, ಅತ್ರಿಯ ಮೈತ್ರಿ
ಸೋಮಾಧಾರಾ ಸೂತ್ರಾ
ತುರೀಯ ನೇತ್ರಾ
ಸೂರ್ಯಾ ಚಂದ್ರರಿಗೆ ಹತ್ತದು ಗ್ರಹಣಾ
ದಿವಾ ನಿಶಿ ಪೃಥ್ವಿಯ ಸಂಕ್ರಮಣಾ
ಕಾಳಿಕಾ, ರಾಹುಗ್ರಾಸಾ, ಛಾಯಾಭಾಸಾ.

೫

ಕೋಣಾ ಕೋಣಾ ಇದಿರಾದರೆ ಒಂದೇ ದಾರಿ
ನಡುವೆ ಸಿಕ್ಕಾ ವೃಕ್ಷಕ್ಕೆ ಮೃತ್ಯು ಮಾರಿ
ಒಂದೇ ಮೃಗಕ್ಕೆ ಇಬ್ಬರು ಭಿಲ್ಲರು ಗುರಿ ಇಟ್ಟರೆ
ಮೂವರಿಗೂ ಪರಲೋಕವೆ ಜಾರೀ

೬

ಜಾಣಾ ಜಾಣರಿಗೆ ಮೂರೂ ದಾರಿ
ಮೀಮಾಂಸಕ ಮುರಾರಿ, ಚತುರಾಚಾರಿ
ಚಂದ್ರಾ, ಶುಕ್ರಾ ಮಂಗಳಾ ತ್ರಿಪುರಾಸುರ ಸಂಹಾರಿ
ತ್ರೈಲೋಕ್ಯ ಸಂಗ್ರಹಕಾರಿ
ತ್ರಿಪುರಾಸುಂದರೀ ಲಲಿತಾಗೌರೀ
ದುರ್ವಾಸನ ಹೃದಯಸ್ಥಾಯಿ
ಸೋಮಧಾರೆ ಗುರುದತ್ತನ ದಾನದ ಧಾರೆ.

೭

ಬಾರೆ ಬಾಬಾರೆ
ಹ್ರೀಂ ಲವಕುಶಾಕಾರೆ, ನಿಮಿಷೋನ್ಮೇಶಕ್ಕೈಸಾರೆ
ಮಿನ ಮಿಂಚುವ ತಾರೆ
ಧರೆಗವತರಿಸು ಭಗವಂತನ
ಪ್ರತಿಭೆಯ ಬೀರೆ.

ಭಾವ : ಪುಟಪರ್ತಿಯ ಶ್ರೀ ಸತ್ಯಸಾಯಿ ಬಾಬಾ ಅವರ ಪ್ರತ್ಯಕ್ಷ ದರ್ಶನವು ಬೇಂದ್ರೆ ಕಂಡ ಕನಸಿನ ಫಲ. ಅದರ ಪರಿಣಾಮದ ಅಭಿವ್ಯಕ್ತಿ ಈ ಕವನ.

ಶಬ್ದಾರ್ಥ : ಪ್ರೀಣನ=ಸಂತುಷ್ಟಗೊಳಿಸುವ ಕ್ರಿಯೆ. ದ್ವಾವಿಂಶತಿ=ಇಪ್ಪತ್ತೆರಡು-ಶ್ರುತಿಗಳ ಸಂಖ್ಯೆ. ಊದನಿ=ಮಧ್ಯದ ಸ್ವರ. ಮತ್ಸರಿ=ಸಂಗೀತದ ಪರಿಭಾಷೆ. ತುರೀಯ=ನಾಲ್ಕನೆಯ ಅವಸ್ಥೆ. ಜಾರೀ=ಅಧಿಕಾರ ಚಲಾಯಿಸು, ಕಾರ್ಯಗತ ಮಾಡು.

ವಿಶೇಷ : ಶ್ರೀ ಸತ್ಯಸಾಯಿ ಬಾಬಾ ಹುಟ್ಟಿದ್ದು ೧೯೨೬ರಲ್ಲಿ. ಬೇಂದ್ರೆ ಕರ್ನಾಟಕದಲ್ಲಿ ಗೆಳೆಯರ ಗುಂಪಿನಿಂದ ನಾಡಹಬ್ಬ ಆಚರಣೆ ಪ್ರಾರಂಭಿಸಿದ್ದೂ ೧೯೨೬. ಈ ಸಾಮ್ಯ ಅವರಿಬ್ಬರ ಸಾಮಿಪ್ಯಕ್ಕೆ ಕಾರಣ ಎಂಬುದು ಬೇಂದ್ರೆ ಶ್ರದ್ಧೆ.

೪ ಪಾಂಡು-ರಂಗ-ಸ್ಥಲ

೧

ತಾನಿನ ತಂತಿಗೆ ಆನುವ ಸರಕು
ನಾನು ನೀನಿಗೇ ತಂದಿದೆ ಘರಕು
'ಬಿಡು ಬಿಂಕಾ ಕೊಡು ಸುಂಕಾ'
ಎನ್ನುತ್ತಿದೆ ಗಾಳಿ.

೨

'ಕವಿಯಲ್ಲವೊ ವಾಚಾಳಿ
ನಿರುಕ್ತ ನಿರ್ವಚನದ ಹಾಳಿ!
ಧ್ವನಿಗುಡುವದು ಕವನದ ಚಾಳಿ'
'ಹಿಡಿದಷ್ಟನು ಹಿಡಿ' ಎನುತಿದೆ
ಗಂಧದ ಸಂಗೀತ, ಮೂಗೇ ಭಯಭೀತಾ!
ಬುದ್ಧಿಯ ವ್ಯೂಹವ ಭೇದಿಸಿ
ಭಾವದ ಗತಿ ಬಂತು
ಪಲಕಿಸುತಿದೆ, ಪುಲಕಿಸುತಿದೆ
ಲವಲವಿಕೆಯ ಕಂತು
ಜೀವಾಳದ ಜಂತು.
'ಸರ್ವೇ ಜನಾಃ ಸುಖಿನಃ ಸಂತು
ನಿರಾಮಯಾಃ ಸಂತು'

೩

ತಿಳಿದದ್ದೇ ತಿಳಿಯದಿದೇ
ಬಾಳಾಗಿದೆ ಕುಂಟಾ
ಪ್ರಜ್ಞಾವಾದಿಯ ಸರಣಿಯು
ತಾ ಹುಟ್ಟಾ ತುಂಟಾ.
'ಓಂ' ಗೊಡುತಿದೆ ಎಂದೆಂದಿಗು
ಘನ ಘನ ಘನ ಘಂಟಾ
ಯಾವುದು ಈ ಕಂಠಾ
ಆಹಾ ಶ್ರೀಕಂಠಾ!


೪
ಪಾಂಡವ ಪಂಚಪ್ರಾಣಕೆ
ಇದೆ ಧರ್ಮದ ಉರುಳು
ಬದುಕಿಗೆ ಸಾಯಲು ಸಿದ್ಧ
ನೂರ್ ಕುರುಗಳ ಕರುಳು!
ಕೃಷ್ಣಾರ್ಜುನ ಸಂವಾದಕೆ। ಸಾಲದು ಹಗಲಿರುಳು
ಶ್ರುತಿಕವಲವೆ ಅರಳು। ಮನ ಕನ್ನಡಿ ಹರಳು!
೫
ತೆರಿ ತೆರಿ ತೆರಿ ಓ ತೆರೆಯೇ
ಶಿವ ಸಿಂಪಿನ ಬಾಯಿ
ಸತ್ಯಪ್ರೇಮದ ಸ್ವಾಮಿಯೆ
ಕರುಣೆಯ ತಲೆಗಾಯಿ
ಸ್ವಾತಿಯ ಹನಿ ಹನಿಸುತ ಬಾ
ಬಾ ತಾ ತಾ ತಾಯಿ।
ಇರು ಹೃದಯ ಸನಾಯಿ
ಇದು ಹೃದಯಸ್ಥಾಯಿ
೬
ಆಪಾನಕೆ ವೈಮಾನಿಕ
ಸೋಪಾನದ ಜಾಲ
ಅರಿವು ಇರವೂ ಹರಿವೂ
ಹಿಗ್ಗಲು ಸಮತಾಲ
ಚಂದ್ರೋದಯ, ಶುಕ್ರೋದಯ
ಮಂಗಲಮಯ ಕಾಲ
ಜಾಗೃತ ಗೋಪಾಲ
ಜಾಗೋ ಗೋಪಾಲ।

೭

ವಿಟ್ಠಲನೋ ಉತ್ಸುಕನವ
ತಾನಿಹ ಕಟಿಬದ್ಧ
ಆ ಪಾಂಡುರಂಗಸ್ಥಲ
ವಿದ್ಯಾರ್ಥಿಗೆ ಸಿದ್ಧ
ಜ್ಞಾನವೆ ತೆರೆ! ಜ್ಞಾನವೆ ಮರೆ
ಗುರುತರವೀ ಯುದ್ಧ
ಶುದ್ಧೋತ್ತರ ಶುದ್ಧ
ಉತ್ತಮ ತಾ ಗೆದ್ದಾ
ಉತ್ ತಮ ಆಗೆದ್ದಾ.

ಭಾವ : ಪಾಂಡುರಂಗನ ಉದ್ಧಾರ ಶಕ್ತಿಯ ವಿವರಣೆ. ಅರಿವು=ಸತ್, ಇರವು=ಚಿತ್ ಮತ್ತು ಹರಿವು=ಆನಂದ. ಇವುಗಳನ್ನು ಅಹಂಕಾರ ತೊರೆದು ಗ್ರಹಿಸುವ ಬಗೆಯನ್ನು ವಿವರಿಸಲಾಗಿದೆ. ಈ ಭಗವತ್‌ಶಕ್ತಿ 'ತಾನು' ಎಂಬ ನಾಕನೇ ತಂತಿ ಎಂಬುದಾಗಿ ಸೂಚಿಸಲಾಗಿದೆ.

ಶಬ್ದಾರ್ಥ : ಆನು=ಆನಿಕೆ=ಆಧಾರ. ಸರಕು=ಸಾಮಗ್ರಿ, ಸಾಮಾನು, ಉಪಕರಣ, ಗೌರವ, ಮನ್ನಣೆ. ಫರಕು (ಅರಬ್ಬಿ ಶಬ್ದ)=ಅಂತರ, ವಿಶೇಷ ವೈಶಿಷ್ಟ್ಯ. ಸುಂಕ=ತೆರಿಗೆ. ಸಂತು=ಇರಲಿ. ಉರುಳು-ಉರುಲು-ಉರಿಲ್=ಪಾಶ, ಜೀರು ಕುಣಿಕೆಯ ಹಗ್ಗ, ಪ್ರಾಣ ಸಂಹಾರಕ, ಆತ್ಮಹತ್ಯೆಯ ವಿಧಾನ. ಸನಾಯಿ=ಸನಾದಿ=ಶಹನಾಯಿಯಂಥ ಒಂದು ವಾದ್ಯವಿಶೇಷ. ಜಾಗೋ=ಜಾಗೃತ ಆಗೋ.



೫ 'ಎಳುಕ್' ಐತಿ; ಬೆಳಕು ಇದೆ; ಇದೇ ಬೆಳಕು

೧

ಚಂ ಚಂ ಚಮತ್ತು-ಚಂ ಚಂ ಚಮತ್ತು
ಚಂಚಲ ಅನ್ನಬ್ಯಾಡಾ
ನಿಶ್ಚಲನಾಗಿ ನೋಡು
ಮಿಂಚಿನ ಗೊಂಚಲದಾಚ
'ಎಳುಕ್'; ಐತಿ.

೨

ಪಿಳುಕ್, ಪಿಳುಕ್ ಅಂತ
ಪಿಳಕಿಸತೀ ಕಣ್ಣು
ಹಿಳುಕ್ ಹೀಲಿಯೊಳಗ ಬಣ್ಣೈತಿ

೩

ನವಿಲೀನ ಮ್ಯಾಲೇರಿ
ನವಿರಾಗಿ ಬರ್ತಾಳ
ಸರಸೋತಿ -ಸರಸೋತಿ ರಸ ಐತಿ.

೪

ಸೋತಿ ಅಂದ್ರ ನೀ ಗೋತಿ ಹೊಡೀತಿ
ಈ ಸಣ್ಣನ ಹಾದಿ ಸಣ್ಣೈತಿ.

೫

ಕೃಷ್ಣನ ಕಣ್ಣಿನ್ಯಾಗ ತುರು ಐತಿ
ಅರ್ಜುನನ ಕಣ್ಣಿನ್ಯಾಗ ಕರು ಐತಿ.

೬

ಪ್ರಶ್ನೀಮ್ಯಾಲೆ ಪ್ರಶ್ನಿ
ನಿಲುವಿನ ಮ್ಯಾಲೆ ನಿಲುವು
ನೆಲವಿನೊಳಗss ಮೊಸರು, ಬೆಣ್ಣೈತಿ.

೭

ಪೇಂದ್ಯಾನ ಹೆಗಲೇರಿ
ಕೃಷ್ಣನ ಜಿಗಿದಾಟ
ಮನಿತುಂಬ ಮೈತುಂಬ ಹೊಳಿ ಐತಿ
ತಿಳಿದವನ ಎದಿಯೊಳಗ ಮಳಿ ಐತಿ

೮
ಚುಚ್ಚೊ ಮೊಳೀ ಐತಿ, ಬರಡಾದ ಮೊಲೀ ಐತಿ
ಮಲೆ-ಹರೀಬಿಟ್ಟು ಮಲೆ ಐತಿ.

೯
ಮಲೆಯ ತಲೆಯಮ್ಯಾಲೆ
ಮಲ್ಲಿನಾಥನ ಗುಡಿ
ತಿರುಮಲೀ ತಲೀಮ್ಯಾಲೆ-ಮುಡಿ ಐತಿ.

೧೦
ಇಮ್ಮಡಿ, ಮುಮ್ಮಡಿ
ನಾಲ್ಮಡಿ, ಐಮಡಿ
ಏಳ್ಮಡಿ ಮಲೀಮ್ಯಾಲೇನೈತಿ ?
ತಲಿ ಕೆಳಗ, ಮ್ಯಾಲೆ ಕಾಲೈತಿ !

೧೧
ಸವನಾಗಿ ನೋಡಬೇಕು
ಚಂ ಚಂ ಚಮತ್ತು
ಚಮತ್ಕಾರದಾಗ ಬೇರೈತಿ

ಭಾವಸಂದರ್ಭ : ಶ್ರೀಕೃಷ್ಣನ ಜ್ಞಾನ ಅರ್ಜುನನಿಗೆ ಬೆಳಕಾದಂತೆ, ನಮಗೂ ನಿಮಗೂ ಆಗಲಿ ಎಂಬ ಹಾರೈಕೆ ಇಲ್ಲಿದೆ. ಇದೇ ಒಂದು ಪ್ರಮುಖ ಚಮತ್ಕಾರವಾದೀತು.



೬ ಅಭಂಗ ವಿಟ್ಠಲ

೧

ಟೊಂಕದ ಮ್ಯಾಲೆ ಕೈ ಇಟ್ಟಾನ
ಭಕ್ತೀ ಸುಂಕಾ ಬೇಡತಾನ
ಡೊಂಕ ಇಲ್ಲಾ, ಬಿಂಕ ಇಲ್ಲಾ
ಅಭಂಗ ಪದದವನ॥
ಅಭಂಗ ಪದದವನ.

೨

ಭೀಮ ಭಯಂಕರ ದಂಡೀಮ್ಯಾಲೆ
ಎದಿಮ್ಯಾಲಿರಸಿ ಅಭಯದ ಮಾಲೆ
ತಲೀಲೆ ಹೊತ್ತು ಸೀಮಾಲಿಂಗ
ಅಭಂಗನಸ್ತಾನ
ಅಭಂಗನಸ್ತಾನ

೩

ಅಂಗದಾಗ ಅನಂತ ಲೀಲಾ
ಸಂಗದಾಗ ಸಂತರ ಜಾಲಾ
ಯೋಗಕ್ಷೇಮಾ ನಡಸ್ತಾನ
ಭಂಗ ಆಗಧಾಂಗ
ಭಂಗ ಆಗಧಾಂಗ

೪

ಇಟ್ಟಿಗಿಮ್ಯಾಲೆ ಕಾಲಿಟ್ಟಾನ
ಕಾಲ ಸಂದಿಗೆ ಕೋಲಿಟ್ಟಾನ
ನೆನಿಸಿದಲ್ಲೇ ಕಣ್ಣಿಟ್ಟಾನ
ಪುಂಡರೀಕ ವರದಾ
ಅಂಬಿಕಾತನಯನನ್ನ ಕರದಾ.

ಭಾವ : ಹರಿಹರ ಐಕ್ಯದ ಸಂಕೇತವಾದ ಪಾವನಮೂರ್ತಿ ಪಂಢರಪುರದ ವಿಟ್ಠಲ. ಪತಿತರನ್ನು ಉದ್ಧಾರಗೊಳಿಸಲು ಅವತರಿಸಿದ ಈ ಕೃಷ್ಣ ಶಕ್ತಿ ಬೇಂದ್ರೆಯವರನ್ನು ಆಕರ್ಷಿಸಿದ ಬಗೆ ಈ ಕವನಕ್ಕೆ ಕಾರಣ.

ವಿಶೇಷ : 'ಪಾಡು' ಕವನಕ್ಕೆ ಕಾರಣವಾದ ಬೇಂದ್ರೆಯವರ ರಾಮು ಎಂಬ ಮಗನ ಚಿತಾಭಸ್ಮ ಮತ್ತು ಅಸ್ತಿ ವಿಸರ್ಜನೆ ಮಾಡಲು ಪಂಢರಪುರಕ್ಕೆ ಹೋಗಲು ಅಡ್ಡಿಯಾದ ಘಟನೆ ೧೯೪೬ ರಲ್ಲಿ ನಡೆಯಿತು. ಅಂದಿನಿಂದ ಕೊನೆಯವರೆಗೂ ಬೇಂದ್ರೆ ವಿಟ್ಠಲಭಕ್ತಿ ಬೆಳೆಯುತ್ತ ಹೋಯಿತು. ಅನೇಕ ಕವನಗಳನ್ನು ಮರಾಠಿಯಲ್ಲಿಯೂ ವಿಟ್ಠಲನನ್ನು ಕುರಿತು ರಚಿಸಿದ್ದಾರೆ. ಅವು ಅವರ ಮರಣೋತ್ತರ ಮರಾಠಿ ಕವನ ಸಂಕಲನ "ಉಮಾಳಾ" ದಲ್ಲಿ ೧೯೯೧ರಲ್ಲಿ ಪ್ರಕಟವಾಗಿವೆ.

೭ ನೆನಿಸಿದವರ ಮನಸಿನ್ಯಾಗ

೧
ನೆನಿಸಿದವರ ಮನಸಿನ್ಯಾಗ
ಕನವರಿಕೀಯ ಕನಸಿನ್ಯಾಗ
ಮೂರರಾಚೀ ಜನಿಸಿದಾಗ
'ದತ್ತ!' ಅನತ ಬಂದಾ.

೨
ತಿರುಗೋ ಕಾಲಾ ತಿರುಗಬೇಕು
ಹರಗೋ ಹೃದಯ ಹರಗಬೇಕು
'ಅಲಖ್ ನಿರಂಜನ' ಕರಗಬೇಕು
ಅತ್ರಿಯಽ ಕಂದಾ.

೩
ಯುಗ ಯುಗದಾಗ ಪಾಕಮಾಡಿ
ಹೂವಿನ ಪಕಳಿ ನಾಕ ಮಾಡಿ
ಹೂತದ್ದನ್ನಽ ಹಾಡಸ್ತಾನಽ
ಅಂದತ್ತಾನಂದಾ.

೪
ದಾನ ಇಲ್ಲದ ದತ್ತ ಇಲ್ಲಾ
ಧ್ಯಾನ ಇಲ್ಲದ ಗತ್ತಽ ಇಲ್ಲಾ
ನಿನ್ನ ಬಿಟ್ಟು ಮತ್ತ ಇಲ್ಲಾ
ಬಾ ಹೊಕ್ಕಳದಿಂದಾ, ಹೀಂಗ
ಬಂದದ್ದೇ ಚೆಂದಾ.

- 'ಆತ್ರೇಯ-ದತ್ತ' ಎಂಬ ಶೀರ್ಷಿಕೆ ಇತ್ತು

ಭಾವ : ಬೇಂದ್ರೆಯವರು ತಮ್ಮ ಕಾವ್ಯಶಕ್ತಿ ಹಾಗೂ ಜೀವನದ ಧ್ಯಾನ, ದರ್ಶನ ಕುರಿತು ಬರೆದ ಕವನ.

ಶಬ್ದಾರ್ಥ : ಮೂರರಾಚೆ=ಜಾಗೃತ, ಸ್ವಪ್ನ, ನಿದ್ದೆಯ ಆಚೆಗಿನ ನಾಕನೇ ಸ್ಥಿತಿ-ತುರೀಯ ಸ್ಥಿತಿ.

೮ ಸಂಕಷ್ಟ ಹರಣಾಷ್ಟಕ ಮುಕ್ತಾವಲಿ

೧

ಕಡೆಗೋಲು, ಕಡೆ-ಧಾರ-ಹಿಡಿದ ಸಿದ್ಧನೆ! ಕೃಷ್ಣ!
ಕಡಲು ದೂರಿಲ್ಲವೋ ಕಡೆಯ ಬಾ ಮತ್ತೆ
ಮಂಥನ ಮುಹೂರ್ತವನೆ ಚಿಂತಿಸುತ ನಿಂತೆಯೋ?
ಕ್ಷೀರಸಾಗರದಲ್ಲಿ ಉಪ್ಪು ಇತ್ತೇ?

೨

ಒಡೆದ ಸಾಗರದಲ್ಲಿ, ಸಿಡಿದ ಸಾಗರದಲ್ಲಿ
ಸುಡಿವ ಸಾಗರದಲ್ಲಿ ಕೋಟಿ ಮೀನ
ಉಣಿಸುವವ ಉಪಕಾರಿ ಬಲೆಯ ಬಾಯಿಗೆ ತುತ್ತು
ಉಣಿಸುವವನು ಇಂದಿಗೂ ಕೊಂಗ ದೀನ.

೩

ಸ್ಮರಣೆಯಲಿ ಸ್ಮರನು ರುಚಿ, ಕರುಣೆಯಲಿ ಗಂಗೆ ಶುಚಿ
ಕಡಲು ವಡವಾನಲದ ಪಾಲುಗಾರ.
ಆಲದೆಲೆ ಬಾಲನೇ ಉಂಗುಟದ ಹಾಲನೇ
ಪ್ರಳಯ ಜಳಧಿಯ ಕಡೆದು, ಎತ್ತಿ ತೋರ

೪

ಶ್ರೀ ಚರಣಗಳಿಗೆ ನೆಲೆ, ಮಾಬಲಿಯ ಎತ್ತುತಲೆ
ಅವನ ಪಾದಕೆ ಕಲಿಯ ಚಿಂಡುಹೂವು
ಸಿರಿಯ ತೊಡೆ ಕಾಲಿನೆಡೆ, ಹಾಲ್ಗಡಲು ಜೋಗುಳವು
ಯೋಗನಿದ್ರೆಗನಂತಶಯನ ಹಾವು

೫

ಆನಂದ ತೀರ್ಥದಲಿ ಆಚೆ-ಈಚೆಗೆ ವೀಚಿ
ಸಂಬಂಧ ಐಕ್ಯವೇ ವೇದ್ಯ, ಸಾಧ್ಯ
ವೇದವಾಣಿಯ ಮನೆಗು ಆದಿವಾಣಿಯ ಧ್ವನಿಗು
ಊರ್ಧ್ವಕ್ಕು ಅಧ್ವಕ್ಕು ಮಧ್ವ-ಮಧ್ಯ!

೬


ರಾಮ ಕೃಷ್ಣ ಹರೀ ವಿಟ್ಠಲ, ಪತಿತೋದ್ಧಾರಿ
ಅಹಮೆಂಬಹಂಕಾರ ಪಾತಕಕೆ ಮುಖ್ಯ
ನೀನೇ ಶರಣ್ಯನೈ, ನಾನು ಅಶರಣ ಭಕ್ತ
ಇಲ್ಲೆ ಕೂಡಿದೆ ನಿಮ್ಮ-ನಮ್ಮ ಸಖ್ಯ.

೭
ಕಾಲಿನಿಂದಲೆ ಮೆಟ್ಟಿ ಕೈಯಿಂದಲೇ ಮುಟ್ಟಿ
ನಿನ್ನ ಸ್ಪರ್ಶದ ಬೆಲೆಯ ತೆತ್ತಲಾರೆ
ಕಾಲಿಂದಿ ಮಡುವಿನಲಿ ಕಾಳಿಂಗನಿರಲುಂಟು
ಆ ಕಾಲ ನೆಲೆಗೆ ತಲೆ ಎತ್ತಲಾರೆ

೮
ನೀನಾಗು ಅವತಾರಿ, ನಾನು ಗುಡ್ಡದ ಏರಿ
ಮಲೆಮಲೆಗೆ ಅಭಿಷೇಕ ನಿನ್ನ ಝಾರಿ
ಮುತ್ತುರುಳಿದಂತೆ ನಾ ಮತ್ತುರಳಿ, ಚಿತ್ತರಳಿ
ಶರಣು ಶರಣೆನ್ನುವೆನು ಲಕ್ಷ ಬಾರಿ.

ಭಾವ : ಬೇಂದ್ರೆಯವರ ಸರ್ವಾರ್ಪಣ ಸಿದ್ಧ ಕೃಷ್ಣ ಭಕ್ತಿಯ ಪ್ರತೀಕ ಈ ಕವನ.

ಶಬ್ದಾರ್ಥ : ಕೊಂಗ=ಕೊಯಿಮುತ್ತೂರ ಸುತ್ತಲಿನ ಕೊಂಗದೇಶದವ. ವಡವಾನಲ=ಬಾಡಬ=ಕಡಲ್ಗಿಚ್ಚು ಪ್ರಲಯಾಗ್ನಿ ವೀಚಿ=ತೆರೆ, ಅಲೆ, ಕಿರಣ. ಅಧ್ವ=ದಾರಿ, ಮಾರ್ಗ. ಮಧ್ವ=ಮಧ್ವಾಚಾರ್ಯ. ಅಧ್ವ+ಮಧ್ವ+ಊರ್ಧ್ವ=ಅ+ಉ+ಮ=ಓಂ=ಮೂರು ಮಾರ್ಗ, ಒಂದೇ ಶಿಖರ.



೯ ಅ-ಉ-ಮ-ಸಂವಾದ

೧

'ಅಧ್ವ'-ಅಂದರೂ
ಮಧ್ವ-ಅಂದರೂ
ಊರ್ಧ್ವ-ಅಂದರೂ
ಬರೀ ಧ್ವನಿ ಭೇದಾ
ಅಧ್ವಾನವಲ್ಲ.

೨

ಹರ ಪ್ರಸ್ತರ ಗುಡ್ಡಾ
ನಿಂತಿರತsದ - ಹಿಮಾಲಯ!
ಹರಿ-ನೀರು-ಹೊಳೀ-ಹೋಳ ಹೋಳು
ನಡೆದಿರತsದ-ಗಂಗಾ ಯಮುನಾ.

೩

ಅಗ-ಹರಾ 'ನಾ ಬಲೀ' ಅಂದಾ
ಆಗ-ಹರಿ 'ನಾ ವಾಮನಾ' ಅಂದಾ
ಬಲಿ-ಮುಂದ ಇಂದ್ರ ಆದಾ
ಹರಿ-ಉಪೇಂದ್ರ ಇದ್ದಾ;
'ನೀಜಾನೀ' ಇಬ್ಬರೂ ತಿರುವಾ ಮುರವಾ ಅಂದರು,
ಕೊನೀಗೆ ಒಂದೆ ತಡಿಗೆ ಬಂದರು.
ಭಪ್ಪರೆ! ಅಂದಾ ಬುದ್ಧಾ-ಮಂದ್ಯಾಗ ಬಿದ್ದಾ
'ಜನಾ-ತಾ ಯಾರು?' ಕೇಳಿದಾ, ದಿವ್ಯಧ್ವನೀಲೆ -
ಬೋರಕಲ್ ಬ್ರಹ್ಮಾ ಎಣ್ಣೀ ಜಿಡ್ಡಿನ್ಯಾಗ ಸುಮ್ಮನೆ ಇದ್ದಾ
ಇದು ಆಯತಾ! ಸಿದ್ಧ!
ಯಾ ಅಲ್ಲಾ! ಮಾಯ್‌ಗಾಡ್! ಯವ್ವ ಜಿಹೋವಾ!


೪

ಶಬ್ದ ಮೂಡಿ ಮುಳುಗಿದವು
ಮಾತು ಮೌನದಾಗ
ಆಗ ಮುಳುಗಿತು ಎಂದ
ಮತ್ತ ತಲೀ ಎತ್ತತ್ತದೋ ನೋಡೋಣು !!!
ಕಾಲಾ ನಿರವಧಿ, ಭೂಮಿ ವಿಪುಲಾ
ಅಂದತ್ತ.

ಭಾವ : ಬೇಂದ್ರೆಯವರ ಸರ್ವಧರ್ಮ ಸಮನ್ವಯ ದೃಷ್ಟಿಗೆ ಈ ಕವನ ಒಂದು ಸಾಕ್ಷಿ. ಸಮನ್ವಯ ತತ್ವಕ್ಕೂ ಮೂಡು, ಮುಳುಗು, ಪ್ರಳಯ, ಸೃಷ್ಟಿ ಇದ್ದೇ ಇದೆ. ಇದರ ಛಂದಸ್ಸು ನವ್ಯ.

ಶಬ್ದಾರ್ಥ : ಅಧ್ವಾನ=ಕಷ್ಟ, ಯಹ್ವ ಜಿಹೋವಾ=ಹಿಬ್ರೂ ದೇವತೆ.

ವಿಶೇಷ : 'ಅಂಪತ್ತ' ಇದು ಅಂಬಿಕಾತನಯದತ್ತ ಎಂಬ ಕಾವ್ಯನಾಮದ ಸಂಕ್ಷಿಪ್ತ ರೂಪ. ಈ ಕವನ 'ತಾ ಲೆಕ್ಕಣಿಕೆ ತಾ ದೌತಿ' ಎಂಬ ಕವನ ಸಂಗ್ರಹದಲ್ಲಿ ೨೮ನೆಯ ಕವನವಾಗಿ ಪುನರ್ ಮುದ್ರಣಗೊಂಡಿದೆ.



೧೦ ಮಂಗಲಮೂರ್ತಿ

೧

ಹಿಗ್ಗುಂಟು-ಹಿಗ್ಗಂಟು
ಅದನೇ ಹಿಗ್ಗಾಮುಗ್ಗಾ ಎಳೆಯುವದೂ ಉಂಟು ;
ಆದರೆ, ಅಲ್ಲವೊ ಅದು ಕೈಗಂಟು,
ಅದು ಮಲ್ಲಿಗೆಯಂಟು ;
ಅದು ನನ್ನಲ್ಲುಂಟು, ನಿನ್ನಲ್ಲುಂಟು

೨

ಅರಳೊಳಗೇ ಕಾಳುಂಟು
ಕಾಳೂ ಅರಳುವದುಂಟು
ಬರಿ ಗೊಬ್ಬರಕೆಳೆಯಲು ಬೇಡಾ
ಹಬ್ಬದ ರಸದೂಟಾ
ಕಾಂತಿಯ ಕಂತಿಯ ಹಾರಿಸಿ
ಹೊರಬರಲಾ ನೋಟಾ.


೩

ಮಲ್ಲಿಗೆಯಲಿ ಮಲ್ಲಿನಾಥ
ಅಲ್ಲವನೋ ಕಲ್ಲಿನಾಥ
ಎಲ್ಲೆಲ್ಲೂ ಜೀವನದಲಿ
ಶಿವಶಿವಿಸುವ ಭಾವ
ಮಂಗಲಮೂರ್ತಿಯು ಆಗಲಿ
ಹೊಸ ಹೊಸ ಮುಂಜಾವ.

ಭಾವ : ಜೀವನದ ಪ್ರತಿದಿವಸದ ಉದಯವು ಶುಭ ವಿಚಾರ ಮತ್ತು ಶುಭ ಆಚಾರಗಳಿಂದ ತುಂಬಿ ಭಾವವು ಶುದ್ಧಗೊಳ್ಳಲಿ. ಆನಂದವನ್ನು ಎಳೆದಾಡಬಾರದು ಎಂಬ ಎಚ್ಚರಿಕೆ ಕೊಡಲಾಗಿದೆ.

ಶಬ್ದಾರ್ಥ : ಶಿವಶಿವಿಸುವ (ಮರಾಠಿ ಮೂಲ)=ಚಿಕ್ಕಮಕ್ಕಳಿಗೆ ಹಲ್ಲು ಬರುವಾಗಿನ ಗುಜುಗುಜು ಸ್ಥಿತಿ.

೧೧ ಹರಿಹರ ಸಾಮರಸ್ಯ



೧
'ಹರಿ' ಎನ್ನುತ್ತಿದೆ ಹೃದಯದ ಒಲವು
'ಪ್ರಸ್ತರ' ಆಗಿದೆ ಗುಡ್ಡದ ನಿಲವು
೨
ಹೊಳೆ ತುಂಬುತ್ತಿದೆ ಕಡಲಿನ ಒಡಲು
ಗುಡ್ಡವನೆರೆವುದು ಇಳಿಮಳೆ ಸಿಡಿಲು
೩
ಎಲ್ಲಿಂದುಗಮವೊ ಅಲ್ಲಿಗೆ ಗಮನ
ಸುಮನ ಶಮನ-ನರುಗಂಪಿನ ನಮನ
೪
ಎಲ್ಲೆಲ್ಲಿದೆ ಎದೆ, ಅಲ್ಲಿದೆ ಭಕ್ತಿ
ವೈಶಾಖದ ಮಾಧವನನುರಕ್ತಿ
೫
ವೈಕುಂಠದ ಅವಗುಂಠನ ತೆರೆದು
ರಾಧಾಧರವಿದೆ ಎಳೆನಗೆ ಮೆರೆದು.

ಭಾವ : ಹರಿ ಮತ್ತು ಹರ ದೈವತಗಳ ಉಪಾಸಕರಲ್ಲಿ, ಹರಿಯುವ ನೀರಿನ ಸಂಕೇತ-ಶ್ರೀಹರಿ ಮತ್ತು ಗುಡ್ಡದ ನಿಶ್ಚಲತೆಯ ಸಂಕೇತ-ಶ್ರೀಹರ ಎಂಬ ತಿಳುವಳಿಕೆಯ ಉಗಮವಾಗಲಿ, ಆಗ ಭೂ-ವೈಕುಂಠ ಹಾಗೂ ಭೂಕೈಲಾಸ ಎಂಬವುಗಳಿಗೆ ಅರ್ಥ ಬಂದೀತು ಎಂಬ ವಿಚಾರವಿದೆ. ಎರಡೂ ದೈವತಗಳಲ್ಲಿ ಸರಿಸಮಾನತೆಯ ಭಕ್ತಿಯ ಆವಿರ್ಭಾವವಾಗಲಿ ಎಂಬ ಆಶಯ ಇಲ್ಲಿದೆ.

ಶಬ್ದಾರ್ಥ : ಪ್ರಸ್ತರ=ಕಲ್ಲುಬಂಡೆ. ನೆರೆ=ಕೂಡು, ಸೇರು.

ವಿಶೇಷ : ಹರಿ ಮತ್ತು ಹರ ಎರಡರ ಸಂಖ್ಯೆ ಒಂದೇ. ಹ=೮, ರಿ=೨. ಹ=೮, ರ=೨. ಸಂಖ್ಯೆಗಳು ಐಕ್ಯ ತತ್ತ್ವ ಸಾರುತ್ತವೆ. ಶಬ್ದ, ವಿರೋಧ ತತ್ತ್ವ ಪ್ರಚಾರ ಮಾಡುತ್ತವೆ. ೮+೨=೧೦. ಇದು ಹತ್ತಗಡೆಯ ಸಂಕೇತ.

೧೨ ಶಕಪುರುಷನ ಶತಮಾನ

೧

ಅರ್ಥಕಾಮುಕರ ಬದುಕಿನೊಳಗ
ಮುಕ್ತ-ಭಕ್ತಿಯ ಬಾಳು ಬೆಳಕಾಗಿ ಬಂತು
ಅದು ನವಯುಗ ಧರ್ಮ
ಆದರ ಅಗಿಸೀ ಬಾಗಿಲ ತೆರೆದ
ಜೀವ ನೀನು.

೨

ಅಲ್ಪಾತ್ಮರಾದ ಮಂದೀಯೊಳಗ
ಮಹಾತ್ಮನಾಗೋದು, ಅಷ್ಟು ಕಷ್ಟೇನೂ ಅಲ್ಲಾ!
ಹಿಂಸಾ ವೀರರ ಸಂದೀಯೊಳಗ
ಅಮರನಾಗೋದು, ಅಷ್ಟು ಸುಲಭನೂ ಅಲ್ಲಾ!
ನಿನ್ನ ಮಹಾತ್ಮ್ಯ ಒಪ್ಪಿಕೊಂಡು
ಸಣ್ಣವರು ದೊಡ್ಡವರಾದರು
ಹಿಂಜರ್ಯೋ ಅವರು, ಮುಂದಾಳಾದರು
ನೀನು ರಾಮನ್ನ ನೆನಿಸಿ, ರವಿ ಆದಿ.
ನಾವು ರಾಮಾಯಣ ನೆನಿಸಿ, ಕವಿ ಆದಿವಿ
ಇದು ಪವಾಡ, ಮನಮೋಹನದಾಸ! ಶಕಪುರುಷ ನೀನು.

೩

ಬಾಳು ಸುಲಿದವರಿಗೆ ಬಾಳೀಹಣ್ಣು
ಬದುಕು ಸುಲಿದವರಿಗೆ ಬಂಗಾರ ರುಂಡ
ಹಿರಣ್ಯಗರ್ಭ!
ಬಂಗಾರ ಮುಟ್ಟಿದ್ರ ಮೈಲಿಗಿ, ಶೃಂಗಾರ ಕೆಟ್ಟರ ಸೂತಕ
ಅಸ್ಪೃಶ್ಯತಾ ಇರೋವರಿಗೂ ನಿನ್ನ ಹೆಸರು ಮರೀಲಾರರು ಜನ
ಶುದ್ಧಿ ಅಂಬೋದು ಬುದ್ಧೀ ಬಯಲಾಟಲ್ಲಾ
ಭಾವದ ಒದ್ದಾಟಲ್ಲಾ
ಅಸ್ಪೃಶ್ಯರ ಉದ್ಧಾರಕ್ಕಿಂತ, ಅಸ್ಪೃಶ್ಯತೆಯ ಉಪಸಂಹಾರ ಬೇಕು
ಹೊಸಾ ಸೃಷ್ಟಿಗೆ!

೪

ಮನಸಸು ಹೊಲಸೋ, ಮನುಷ್ಯಾ ಹೊಲಸು !
ಹಳೇ ಮುಚ್ಚಾಟ ಮುಗಿದು
ಹೊಸಾ ಹುಚ್ಚಾಟ ಸುರೂ ಆಗಲಿ
ನಿನ್ನ ನೂರರ ನೆನಪಿನ ಈ ಶತಮಾನಕ್ಕ.
ಹೊಲಸು ಇರೋವರಿಗೆ ಹೊಲೆತನಾ
ಹ್ಯಾಂಗ ಹೋದೀತು ?
ನಿನ್ನ ನೆನಪು ಪ್ರಾಯಶ್ಚಿತ್ತದ ಜಳಕ
ಪೂರ್ವ ತಾಪ, ಪಶ್ಚಾತ್ತಾಪ
ಏನು ಅತ್ತಾವು,
ಶಿವಾ ಅರಿಯದ ಶವದ ಮುಂದ ?

೫

ಮಸಣದಾಗ ಮನೀ ಕಟ್ಟಿದಮ್ಯಾಲೆ
ಮತಾ ಬ್ಯಾರೆ ಬೇಕಾಗಿಲ್ಲ.
ಭಾಳ ಹಡಿಯೋದು ಕಾನೂನಿಗೆ ಹೊರ್ತು
ತುರ್ತಿಗೆ ಪಡಿಯೋದು ಮಹಾ ಕಸರತ್ತು
ಹತ್ತರ ಜೋಡಿಗೆ ಒಂದು ಮುತ್ತು ಹಡೆದಳು
ಭಾರತಮಾತಾ, ಹಿಗ್ಗಿಕೊಂಡಳು
ಹೂವು ಬಿದ್ದಲ್ಲೇ ಬಾಡಿತು, ಗಂಧಾ ದಿಗ್ದೇಶಕ್ಕ ಹರಡಿತು
ಭಾರತಾ ಜೀವಂತಾ ಅನಿಸಿಕೊಂಡಿತು.

೬

ನಾವು ಏನ ಮರತರೂ
ನೀನು ಬಾಳಿದೀ ಅಂತ ನಾವು ಬದುಕಿದ್ದೀವಿ
ಇದನ್ನ ಮರಿಯೋಹಾಂಗಿಲ್ಲಾ.
ಜಡಹಿಡಿದವರು ಹಿಂಸಾದ ಬಾಂಬು ಹಾರಿಸಿದರು
ಚೆತನ್ಯ ಮಿಡಿದವರು ಅಹಿಂಸಾದ ಬಾಂಬು ಹಾರಿಸಿದರು
ಇನ್ನೂ ಅದರದ ಹೊಗೀ ಹಾರಿಲ್ಲಾ
ಬೆಂಕಿ ಆರಿಲ್ಲಾ
ಉಳಿದ ಬೂದಿಯೊಳಗ ಏನೇನದನೋ
ಯಾರು ಬಲ್ಲರು ?

೭

ಹೊಸಾ ರೋಗ ಹೊಸಾ ಔಷಧ
ಹೊಸಾ ವೈದ್ಯರು ಬಂದಽ ಬರ್‍ತಾರ.
ಸತ್ತಾವ್ರ ಸಾಕ್ಷೀ ತಗ್ಯೋದು ಹ್ಯಾಂಗ?
ಕೋಟಿ ಕೋಟಿ ಮರೀತಾವ
ಲಕ್ಷದಾಗ ಉಳಿಯೋವು ನಾಕಾರು ಹೆಸರು
ರಾಮಾ-ಧರ್ಮಾ ಮತ್ತ ನೆನಪಾದರು
ಬುದ್ಧಾ, ಜಿನಾ, ಬಳಕಿಗೆ ಬಂದರು.
ಹಿಂದಿನ ಇತಿಹಾಸ, ಇಂದಿನ ಇತಿಹಾಸ
ಒಂದಽ ಸೂತ್ರಾ ಆತು.

೮

ಹರಿಶ್ಚಂದ್ರನ ಮಸಣ,
ಸಾಕ್ರೇಟೀಸನ ಜೇಲು-ವಿಷ,
ಜೀಸಸ್ಸನ ಶಿಲಬಿ
ಮಾಯದ ಗಾಯದ ಮ್ಯಾಲೆ ಹೊಸಾ ಬರೀ
ಮಾರ್ಟಿನ್ ಲುಥರ್ ಕಿಂಗ.
ನಿಮ್ಮ ಎಲ್ಲಾರ ಸಮಾಧಿ
ಮಹಾತ್ಮ್ಯದ ಸ್ಮಾರಕಾದವು.
ಎಲ್ಲಾರೂ ಅಲ್ಲೇ
ತಲೀ ಮಣಸ್ತಾರ
ಹೂ ಏರಸ್ತಾರ
ಕೃತಾರ್ಥರಾಗ್ತಾರ.
ಡಾಯರೀ ಒಳಗ ಬರಕೋತಾರ
ಬಂಗಾರ ದಿನಾ-ಅಂತ
ಮಣ್ಣಿನ ಹೊಟ್ಟೀಯೊಳಗಽ
ಚಿನ್ನದ ಸಮಾಧಿ!
ಮಹಾತ್ಮರು ಮುಟ್ಟಿದ್ದೆಲ್ಲಾ ಚಿನ್ನಾ
ಅಲ್ಪಾತ್ಮರು ಮುಟ್ಟಿದ್ದೆಲ್ಲಾ ಮಣ್ಣು
ಆದರಽ ನೀ ಬಂದು, ಇವರಿಗೆ
ಕರುಣಿಸಿ ಹೋಗೀ ಕಣ್ಣು-
ಅದಽ ಬಂದಽದ ಪೇಚು!
ಕುರುಡರು ಎಡವಿದರೂ ನಡೆದೀತು
ಕಣ್ಣು ತೆರೆದಮ್ಯಾಲೆ, ಧೈರ್ಯದ ಹೆಜ್ಜೆನೂ
ತತ್ತರಸತಽ ಇರತಽದ

೯

ಆದರಽ ನಿನ್ನ ಹೆಸರು ಬಾನುಲಿ ಬಿತ್ತರಸತಽ ಇರತಽದ
ಅದನ್ನ ಕೇಳಿದವರ ಕಣ್ಣಮುಂದ ಚಿತ್ತರಸತಽ ಇರತಽದ
ಹೊತ್ತ ಸೂರ್ಯಾ ಎಂದಾರೆ ತಣ್ಣಗಾದಾನು
ಹೊತ್ತ ಜ್ಯೋತಿ ಬಿಸೀ ಉರೀದಽ ಬೆಳಕಽ ನೀಡ್ತಽದ.
ಭಾರತದ ಭಾರ ನೀ ಇಳಿಸಿದೀ
ನಮಗ ನಿನ್ನ ನೆನಪಿನ ಭಾರ
ತಪಾ ಅನಸ್ತಽದ; ತಾಪ ಅನಸ್ತಽದ
ಎರಡೂ ತಪ್ಪಿಸಿಕೊಳ್ಳಲಾರಿವಿ.

೧೦

ಗಾಂಧೀ ಯುಗದಾಗ ಉಸಿರಾಡಿಸಿದ ಮಂದಿ ನಾವು
ಬಾಳಿದ್ದು ಪುರಾಣಾತು, ಬದಕೋದು ಇತಿಹಾಸ ಆತು
ಕುಂಟಿಗ್ಯೋ ಕೂರಿಗ್ಯೋ ನಡದಽ ಅದಽ.
ಭಾವೈಕ್ಯ ನಮ್ಮ ಘೋಷ
ರಾಷ್ಟ್ರೈಕ್ಯ ನಮ್ಮ ವತನು
ಮಾನವೈಕ್ಯ ನಮ್ಮ ಮತ
ಮಿದುಳು ಮಿದ್ದಿ, ಒದ್ದಿ, ಮುದ್ದಿ ಆಗ್ತಽದ
ಬುದ್ಧಿ ಶುದ್ಧಿ ಇರದಽ ಖಬರತಪ್ಪಿ ಚೀರ್ತಽದ
ಎಲ್ಲಿಗೆ ಬಂತೋ ಸಂಗಯ್ಯಾ?
ಇತಿಹಾಸ ಸಾರತಽದ ನೂರು ವರ್ಷಾತು ಮಗನಽ ಅಂತ.

೧೧
ಸಣ್ಣ ಕಣ್ಣಿಗೆ ದೊಡ್ಡ ಸೂರ್ಯ ಕಂಡಾನು
ಸಣ್ಣ ಮನಸ್ಸಿಗೆ ಮಹಾತ್ಮ್ಯ ಒಪ್ಪಿಗಾಗೋದಿಲ್ಲ.
ಆಡೋದು ವೇದಾಂತ, ಮಾಡೋದು ವ್ಯವಹಾರ
ಈ ತಿರುವು ಮುರುವು ಬುದ್ಧಿಗೆ ಮಂಟ-ಮುಂಡಿಗೆ.
ಕನಕನ ಮುಂಡಿಗಿ
ಕನಕಾ! ಸಿಕ್ಕವರಿಗೆ ಶಿವಲಿಂಗ!
ಮಿಕ್ಕವರಿಗೆ ಸಿಪ್ಪಿ-ಬಾಳೀಹಣ್ಣು.

- 'ನೂರು ವರ್ಷಾತು (ಶಕಪುರುಷನ ಶತಮಾನ)' ಎಂಬ ಶೀರ್ಷಿಕೆ ಇತ್ತು.

ಭಾವ : ೧೯೬೯ ಮಹಾತ್ಮ ಗಾಂಧಿ ಜನ್ಮ ಶತಾಬ್ದಿಯ ಸ್ಮರಣೆಯ ಕವನ.

ಶಬ್ದಾರ್ಥ : ಅಗಸೀಬಾಗಿಲ=ಪ್ರವೇಶದ್ವಾರ. ವತನ=ವಂಶಪರಂಪರೆಯಾಗಿ ಬಂದ ಭೂಮಿ, ಸರ್ಕಾರದಿಂದ ಇನಾಮು ಆಗಿ ಪಡೆದ ಭೂಮಿ, ಜಹಾಗೀರು. ಖಬರ=ಅರಿವು, ಎಚ್ಚರಿಕೆ. ಮುಂಡಿಗೆ=ಬೆಡಗು=ಚಮತ್ಕಾರದ, ಕೌಶಲ್ಯದ ರಹಸ್ಯ ಅರ್ಥದ ರಚನೆ. ಕನಕ=ಬಂಗಾರ, ಕನಕದಾಸ.

ವಿಶೇಷ : ಈ ಕವನದ ರಚನೆ ನವ್ಯಕಾವ್ಯದ ಛಂದಸ್ಸಿನಲ್ಲಾಗಿದೆ.



೧೩ ಪೂತಾತ್ಮ-ಹೂತಾತ್ಮ ಹುತಾತ್ಮ-ಮಹಾತ್ಮ

೧

ಓ ಮಹಾತ್ಮ! ಶತಸಾಂವತ್ಸರಿಕಕ್ಕೆ
ಸತ್ಯ ವರದಿ ಮಾಡೋಣ
ನೀನು ಹೋದ ಮೇಲೆ, ನಾವು
ತಿನ್ನುವ ಭಿಕ್ಷೆ ಅನ್ನ, ಪರದೇಶಿ
ಬಳಸುವ ಕಳ್ಳ ಹೊನ್ನು, ಪರದೇಶಿ
ಸಿಂಗರಿಸುವ ಮಳ್ಳ ಹೆಣ್ಣು, ಪರದೇಶಿ
ಕಲಿಸುವ ಮಂತ್ರ, ಯಂತ್ರ, ತಂತ್ರ, ವಿದ್ಯೆ, ಪರದೇಶಿ.

೨

ಅಹಿಂಸಾ ಯಜ್ಞದಂತೆ, ಪರ್ಜನ್ಯ ಮಳೆ
ಮಳೆಯಂತೆ ಬೆಳೆ
ಅನ್ನದಂತೆ ಪ್ರಜೆ
ಪ್ರಜೆಯಂತೆ ರಾಜ್ಯ

೩


ಪಶುಯಜ್ಞ ಅಡಗಿ, ನರಯಜ್ಞ ದಿನದ ಪಾಕವಾಗಿದೆ
ನೀನು ಅಮರ ನಿಜ! ನಿನಗೆ ಗೊತ್ತಿಲ್ಲದ್ದೇನು?
ನಿನ್ನ ಕಣ್ಣಿಗೆ ಇದೆಲ್ಲಾ ಬಿದ್ದಿಲ್ಲಾ-ಎಂದಲ್ಲಾ
ಊದೋ ಶಂಖ ಊದಬೇಕು!

೪

ಭಾರತದ ಅಪೂರ್ವ ಪುಣ್ಯಪುಂಜ
ಎಂದಿನಿಂದಲೋ ಹುದುಗಿತ್ತು ಎಲ್ಲೋ ಹೂಳಿ ಹೋಗಿತ್ತು
ಮೋಹನದಾಸ ಹೂತನು, ಪರಮ ಪೂತನು
"ಬೆಂಕಿ ಬೇರೆ! ಬೆಳಕು ಬೇರೆ! ಬಣ್ಣ ಬೇರೆ!"
ಬಿಡಿಬಿಡಿಸಿ, ತಿಳಿತಿಳಿಸಿ ಹೇಳಿದ ಮಹಾತ್ಮ.

೫

ಹಸಿವು, ಕಸಿವಿಸಿ, ಕಿಚ್ಚು
ಒಂದರಿಂದೊಂದು ದೂರ ಇಲ್ಲ
ಒಂದನ್ನು ಹೊತ್ತಿಸಿ, ಇನ್ನೊಂದನ್ನು ನಂದಿಸುವುದು
ತೂಕದ ಕೆಲಸ.



೬

ಯಜ್ಞವೇ ಹಿಂಸೆ ಆಗುತ್ತದೆ
ಹಿಂಸೆ ನುಂಗಿದರೆ, ಅಹಿಂಸೆ ಹುಟ್ಟುವದಿಲ್ಲ
ಮಾನವರು ದಾಯಾದಿಗಳು, ದೈತ್ಯರು
ಪಾಲಿನ ನ್ಯಾಯ ಇನ್ನೂ ತೀರಿಯೇ ಇಲ್ಲ
ಅಹಿಂಸೆಯು ಸತ್ಯದ ತಪಸ್ಸು!
ಹಿಂಸೆ ಅನಿವಾರ್ಯ ತಾಪ.
ಹೊತ್ತಿದ ಬೆಂಕಿ ಹೊತ್ತಿಸದವನನ್ನೂ ನೆಕ್ಕುವುದು
ಹೊತ್ತಿಸಿದವರನ್ನೂ ಮುಕ್ಕುವುದು.
ಯಾರು ಹುಟ್ಟಿಸಿದರೋ ಈ ಅವಳಿ-ಜವಳಿ ಮಾತು
ಹಿಂಸೆ-ಅಹಿಂಸೆ.

೭

ಈ ಅದಲು-ಬದಲು-ತೊದಲು ಮಾತು
ಪಂಜು ಹೊತ್ತಿಸಿ ಹಿಲಾಲು ಹಿಡಿದವರೆಲ್ಲಾ
ಶಾಂತಿಃ ಶಾಂತಿಃ! ಅಹಿಂಸೆಗೆ ಜಯ ಜಯಕಾರ!
ಕೂಗಿದ್ದೇ ಕೂಗಿದ್ದು,
ಕೊನೆಗೆ ಊರೆಲ್ಲಾ ಬೂದಿ.
ಹೇಳಿದ್ದು ಅಹಿಂಸಾ-ಪುರಾಣ ;
ತಿಂದದ್ದು ಹಿಂಸೆಯ ಯಮ-ಬದನೆಕಾಯಿ !
ಅಹಿಂಸೆ ಹುಸಿ ಹೋಗುತ್ತದೆ
ಹಿಂಸೆ ಹೇಸಿಗೆಗೆ ಹೇಸುವದಿಲ್ಲ
'ದಯಾ ಧರ್ಮಕಾ ಮೂಲ ಹೈ'
ಎಂದು ಡಂಗುರ ಸಾರಿಸುವುದು
ಮತ್ತೆ ಏನೂ ಮಾಡದವರಂತೆ. ಗಪ್ಚಗದದ್ದು
ಹೊಸ ಲೆಕ್ಕ, ಹೊಸ ಲೆಕ್ಚರು !

೮

'ಹಿಂಸೆ' ಮಹಾತ್ಮರ ಮುಂಚೆಯೇ ಹುಟ್ಟಿತ್ತು
ಅಹಿಂಸೆ ಅವರ ಮುಂಚೆಯೇ ಅರೆ ಸತ್ತಿತ್ತು.
ಅವರು ಊದಿದ ಮಂತ್ರದಿಂದ
ಅಹಿಂಸೆಗೆ ಬಹಳಷ್ಟು ತ್ರಾಣ ಬರಲಿಲ್ಲ
ಹಿಂಸೆಗಂತೂ ಲಂಗೂ ಲಗಾಮು ಇರಲೇ ಇಲ್ಲ.
ದಯೆಯಿಲ್ಲದ ನಿರ್ದಯರೂ
ಇನ್ನೊಬ್ಬರಿಂದ ದಯೆ ಅಪೇಕ್ಷಿಸುತ್ತಾರೆ !

೯

ಬುದ್ಧಿಗೇಡಿಗೂ ಆಗ್ರಹ ಗೊತ್ತಿದೆ
ಎಂಥ ಬುದ್ಧಿವಂತನಿಗೂ ಸತ್ಯ ಸರಿಯಾಗಿ ತಿಳಿದಿಲ್ಲ.
ಸತ್ಯಾಗ್ರಹದಲ್ಲಿ ಸತ್ಯ ಕಡಿಮೆಯಾಗಿ
ಆಗ್ರಹ ಹೆಚ್ಚಾಗುತ್ತಲೆ,
ಅಹಿಂಸೆಯ ಹಚ್ಚಿದ ಬಣ್ಣ ಉದರಿ,
ಹಿಂಸೆಯ ಉಗ್ರರೂಪ ಉರಿದೇಳುತ್ತದೆ.

೧೦

ತಗಲು, ತಂಟೆ, ಉಪವಾಸ! ಮೋಸಂಬಿ ರಸ!
ಮೋಸ, ದೋಷ, ಉಪದೇಶ!
ದೇಶದ ತುಂಬೆಲ್ಲಾ ಸುದ್ದಿ
ಯಾವುದು ನಿಜವೋ?
ಯಾವುದು ಸುಳ್ಳೋ?
ವರ್ತಮಾನ ಪತ್ರಕ್ಕೆ ಹೊಟ್ಟೆತುಂಬ ಸುದ್ದಿ!
ನಮಗೆ ಬೇಕಾಗಿದ್ದುದು ಶುದ್ಧಿ.
ಓಹೋ ಹೂತಾತ್ಮ! ಹಾಹಾ ಹುತಾತ್ಮ!

೧೧

ಹೂವಿಗೆ ಬೇಗೆ ಹಚ್ಚಿದರು
ಅದರ ಸೌಂದರ್ಯ ಮೆಚ್ಚಿದರು
ಸಂಸ್ಕೃತಿಯ ಜಂಭ ಕೊಚ್ಚಿದರು
ಕೊನೆಗೆ ಸುಟ್ಟವನ ಬೂದಿ
ಹಣೆಗೆ ಹಚ್ಚಿಕೊಂಡರು.
ಮತ್ತೆ ಹಣೆಬರಹದ ಹಣೆ, ಬರಿದೋ ಬರಿದು.
ಮಾರ್ಟಿನ್ ಲೂಥರ ಕಿಂಗ್!
ಅದೇ ಹಾದಿ ಹಿಡಿಸಿದರು ಹಿಂಸಾ ಭಕ್ತರು,
ಅಹಿಂಸೆ ಎಂಬುದು ಗೋಡೆ
ಹಿಂಸೆ ಎಂಬುದು ಚಿತ್ರ
ಮತ್ತೆ ಮತ್ತೆ ಜನ ಓದುವುದು-ಅದೇ ವಿಚಿತ್ರ!!

ಭಾವ : ನೂರು ವರ್ಷ ಕಳೆದರೂ ಗಾಂಧಿ ಎಂಬುದು ಹಳೆ ಕಥೆ ಹಾಗೂ ಹೊಸ ಕಥೆಗಳ ಕೊಂಡಿ. ವ್ಯಥೆಯ ಕವನ.

ಶಬ್ದಾರ್ಥ : ಪೂತಾತ್ಮ=ಪವಿತ್ರ ಆತ್ಮ. ಹೂತಾತ್ಮ=ಹುಗಿದು ಹೋದ ಆತ್ಮ, ಮುಚ್ಚಿದ ಆತ್ಮ; ಹೂವಾಗಿ ಅರಳಿದ ಆತ್ಮ. ಹುತಾತ್ಮ=ಒಳ್ಳೆಯ ಕೆಲಸಕ್ಕಾಗಿ ತನ್ನ ಪ್ರಾಣವನ್ನು ಅರ್ಪಿಸಿದ ಆತ್ಮ. ಪರ್ಜನ್ಯ=ಮಳೆ. ಹಿಲ್ಲಾಲು-ಹಿಲಾಲು=ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಉರಿಸುವ ಕೈ ದೀಪ. ಲೆಕ್ಚರು=Lecture=ಪಾಠಪ್ರವಚನ. ಲಂಗುಲಾಗಾಮು=ಸ್ವಾಧೀನತೆ, ಸ್ವವಶತೆ.

ವಿಶೇಷ : ಈ ಕವನ ನವ್ಯಕಾವ್ಯದ ಛಂದಸ್ಸಿನಲ್ಲಿದೆ.

೧೪ ಗಾಂಧಿ-ಸತ್ಯ

೧

ಸತ್ಯವಂತರು ಎಂದೂ ಸತ್ತರೆಂದೆನಬೇಡ
ಏಳುವುದು ಬೀಳುವುದು ತೆರೆಯ ಆಟ
ಇರುವವರ ಚರಿತೆಯಲಿ ನಾಟಕದ ಕಲೆ ಗತ್ತು
ಸಾಕ್ಷಿ ನಂದಾದೀಪ ತಂತ್ರ ಮಾಟ.

೨

ಭೂತಕಾಲದ ಮಾತು, ವರ್ತಮಾನದ ಸುದ್ದಿ
ಏನೋ ಭವಿಷ್ಯವೇ ಸತ್ಯಪ್ರೇಮ ?
ತುಷ್ಟಿ ಪುಟ ಪಾಕದಲಿ ದೃಷ್ಟಿ ದಿಟವಾಗುವುದು
ಸೃಷ್ಟಿ ಸಟೆಯಲ್ಲಣ್ಣ ನಿತ್ಯನೇಮ.

೩

ಹುಟ್ಟು ಸಾವಿಗು ಗಂಟು; ಬದುಕು ಬಾಳಿನ ನಂಟು
ಅಂದಿಗಿಂದಿಗು ಜ್ಯೋತಿ ಉಂಟೆ ಉಂಟು
ಶ್ರೀಶೈಲ ಮಾಲತಿಗು; ತಿರುಮಲೆಯ ಪದ್ಮಿನಿಗು
ಹೂ ಮಲ್ಲಿಗೆಯ ಭಕ್ತಿ ಅಂಟಿಗಂಟು.

೪

ಸಾಯುವುದೆ ಕೊನೆಯಲ್ಲ, ಬಾಳಿಗಿದು ಗೊನೆಯಲ್ಲ
ಪುದು ಬಾಳು, ಹದ ಬಾಳು, ವಿಶ್ವಭೋಜ್ಯ
ಪ್ರಾಜ್ಞ ತೇಜಸ್ತಂಭ, ದೀಪಮಾಲೆಯ ಕಂಭ
ಕಡಲ ಸುತ್ತಿನ ಭೂಮಿ ಲೋಕರಾಜ್ಯ.

೫

ಎತ್ತಲೂ ತುಂಬಿದವ, ಸುತ್ತಲೂ ಹರುಹಿದವ
ನನ್ನಲ್ಲು ನಿನ್ನಲ್ಲು ಒಳಗೆ ಇರನೇ ?
ಒಳದನಿಯ ಶ್ರುತಿಹಿಡಿದು ಉಸಿರಾಟ ಕುಸಿರಿಸಿರೆ
ತೆರೆದೆದೆಗೆ, ತೆರೆಗಿವಿಗೆ ತಾನು ಬರನೇ ?

೬

ಸಂಸ್ಕೃತಿಗೆ ಅಧಿಕಾರ, ಆಕೃತಿಗೆ ಗುಣಾಕಾರ
ಅತ್ರಿಗುಣ ಮೈತ್ರಿ ಸಂಜೀವನನ ಶಾಲೆ
ಸತ್ಯೋಕ್ತಿಗಿದೆ ಚೆಂದ ; ಪ್ರೇಮೋಕ್ತಿಗಿದೆ ಗಂಧ
ಕರ್ಮಯೋಗಿಯ ವಚನ ನಕ್ಷತ್ರಮಾಲೆ.

 ಇದು ನಭೋವಾಣಿ – ಕವನ ಸಂಕಲನ : ಲೇ : ದ. ರಾ. ಬೇಂದ್ರೆ (ಅಂಬಿಕಾತನಯದತ್ತ)

೭
ಅವನಿಲ್ಲ ಇವನಿಲ್ಲ ಅವನಿ ಜವನಿಕೆಯಲ್ಲ
ಭವನಿಲ್ಲ ಎನಬಹುದೆ ಶಿವಶಕ್ತಿಯಲ್ಲಿ?
ಶ್ರೀಕೃಷ್ಣನೇ ಸ್ವಾಮಿ, ಪಾಂಡುರಂಗವೆ ಭೂಮಿ
ಪಾತ್ರ ಗಾತ್ರದ ವರ್ಣ ಸಮುಭಕ್ತಿಯಲ್ಲಿ.
೮
ದೇವರೇ ಗತಿ! ತಮ್ಮ ಬೆಳಕು ಮಂಕಾದಾಗ
ಅತಿಗೆ ಅತಿ ಮುಟ್ಟೀತೆ ತನ್ನ ಗುರಿಯ?
ಜತಿಗೆ ಜತಿ ಸೋದರಿಕೆ ಆದರದ ನಡತೆಯಲಿ
ಭಂಡಾಟ ಹೊತ್ತಿಸುವದಣ್ಣ ಉರಿಯ.
೯
ಕಾಮಾರ್ಥ ದಿನದ, ತೊಂಡು ವಾದದ ಜಲ್ಪ
ಹೃದಯಾರ್ಥ ಲೀಲೆಗೋ ಬೇಕು ಕಲ್ಪ
ಯುಗಯುಗದ ಅವತಾರ ಮಾನವ್ಯ ನವ ಶಿಲ್ಪ
ವಾಸುದೇವಗನಂತ ಶೇಷ ತಲ್ಪ.
೧೦
ಪಕ್ಷ ಕಟ್ಟಡ ಕಟ್ಟು, ನಯ ನೀತಿ ನುಡಿಗಟ್ಟು
ಜನ ಜಾತ್ರೆ ಘೋಷಣೆಯ ಧೂಮಕೇತು
ವ್ಯಕ್ತಿ ವ್ಯಕ್ತಿಯ ಸ್ವತ್ವ ಹಾದಿ ತೆರೆಯುವ ಸತ್ತ್ವ
ಅದು ತಪಸ್ವಿನ ಸಿದ್ಧಿ ಕ್ಷೇತ್ರ ಸೇತು.
೧೧
ಸಾವಿನಾ ದಂಡೆಯಲಿ ಬಾಳ ಹೊಳೆ ಹರಿಯುವುದು
ಅನೃತ ರಂಗದ ಮೇಲೆ ಸತ್ಯನೃತ್ಯ
ಕತ್ತಲೆಯ ಬಯಲಲ್ಲಿ ಬೆತ್ತಲೆಯ ಬೆಳಕೆ ಇದೆ
ಬದುಕಿನಲೆ ಬೆಳೆಯಲಿದೆ ಗಾಂಧಿ ಸತ್ಯ.

ಭಾವ : ಗಾಂಧಿ ಚಾರಿತ್ರ್ಯ ಬಾಳಿನಲ್ಲಿ ಅನುಕರಣೀಯ ಸತ್ತ್ವ. ಅದು ಹಾಗೆ ಆಗದೆ ಗಾಂಧಿ ಎಂಬ ಹೆಸರು ಅನೇಕರ ಬದುಕಿಗೆ-ವ್ಯಾವಹಾರಿಕ ಜೀವನಕ್ಕೆ ಲಾಭ ಮಾಡಿಕೊಡುತ್ತಿದೆ ಎಂಬ ವ್ಯಥೆಯಿಂದ ಕವನದ ರಚನೆ ಆಗಿದೆ.

ಶಬ್ದಾರ್ಥ : ಸಟೆ=ಸುಳ್ಳು. ಪುದುಬಾಳು=ಹೊಸಬಾಳು. ಜಲ್ಪ=ಅಸಂಬದ್ಧವಾದ ಮಾತು.

೧೫ ಧ್ರುವತಾರೆ

೧
ಇಲ್ಲಿ ರವಿ, ಅಲ್ಲಿ ಅರವಿಂದ, ಎಲ್ಲಾ ಕಡೆಗೆ
ಮೋಹನನು: ಸ್ವಾತಂತ್ರ್ಯ ಸೂತ್ರ-ಜಾಣೋ ? ನೇಣೊ ?
ಬೆಳಕಿನಿದಿರಿಗು ಬೆಳಕು ಬೆಳಗಬಲ್ಲದು ಕಾಣೊ !
ಸಂಕಲ್ಪ ಪಾಕಕ್ಕೆ ಬೇಕು ಧೀರರ ಸಡಿಗೆ.

೨
ಬುದ್ಧಿ-ಭಾವೈಕ್ಯ ಹಾರ್ದಿಕ ಮೈತ್ರಿಗೇ ಯೋಗ್ಯ.
ಬಿಳಿದು ಕರಿದೆಂದು ಏತಕ್ಕೆ ಕಲಹದ ವರ್ಗ ?
ಇರುವುದೇ ನರಕವಾದಾಗ, ಸಾವೇ ಸ್ವರ್ಗ ;
ಸತ್ಯಕ್ಕೆ ಪ್ರೀತಿಯೇ ದಾಂಪತ್ಯ ಸೌಭಾಗ್ಯ.

೩
ಗೀತೆ ಮುನ್ನುಡಿಯಾಗೆ, ಯಾಕಾ ಕುರುಕ್ಷೇತ್ರ ?
ಸುಕ್ಷೇತ್ರದಲ್ಲಿ ಸುವಿವೇಕ ಬೀಜವ ನೆಡುವ ;
ಕೊಲ್ಲುವವ ಸಾವಿಗೇ ತಾನೆ ಔತಣ ಕೊಡುವ ;
ಧೃತರಾಷ್ಟ್ರ ಸಂತತಿಗೆ ಇಲ್ಲ ಸಾವ್ಯದ ನೇತ್ರ.

೪
ಆ ದಿವ್ಯ ನಾಲಗೆಗೆ ತೊಂಟು, ತಡೆ, ಎಡೆ, ಕುಂಟೆ ?
ಗಾಢಾಂಧಕಾರದಲಿ ಧ್ರುವವು ಮುಳಗಿದ್ದುಂಟೆ ?

ಭಾವ : ಗಾಂಧಿಯವರ ಚಾರಿತ್ರ್ಯವು ಭಾರತದ ಇತಿಹಾಸದಲ್ಲಿ ಧ್ರುವ ನಕ್ಷತ್ರದಂತೆ ಸ್ಥಿರ.

ಶಬ್ದಾರ್ಥ : ತೊಂಟು-ತೊಂಡು=ವೃಥಾಲಾಪ, ವ್ಯರ್ಥ ಮಾತು.



೧೬ ಸೃಷ್ಟಿ-ಸ್ಥಿತಿ-ಲಯ

೧

ಮಣ್ಣಿನಲಿ ತಲೆಯನೆತ್ತುತ್ತಲಿವೆ ಹೂವು
ಗಂಧವನು ದುರ್ಗಂಧದಿಂದ ಬಿಡಿಸಿ
ಕಾಲನನು ತಾಲದಲಿ ಕುಣಿಸಿ ಯಮ ನಿಯತಿಯಲಿ
ಜೋಗುಳವ ಋತುಮಾನದಿಂದ ನುಡಿಸಿ.

೨

ಮೊಮ್ಮಕ್ಕಳನು ಕಂಡು ಮುತ್ತಯ್ಯ ನಗುವಂತೆ
ಮಣ್ಣಿಗೇ ಹೂ ಮುಡಿಸಿ, ಮುಡಿಯುತಿಹವು
ಬಕುಲಕ್ಕೆ ಇಲ್ಲ ವ್ಯಾಕುಲತೆ ಲಯಕಾಲದಲಿ
ಒಣಗಿದರು ಕಂಪಿಸುತ ನಡೆಯುತಿಹವು.

- ರಚನೆ : ೨೪-೧-೬೬.

ಭಾವ : ಕವನ ಸೃಷ್ಟಿ, ಬಕುಲ ಪುಷ್ಪದಂತೆ. ಸುಗಂಧ ಸಂಚಯ. ಬಕುಲ ಪುಷ್ಪ ಹುಟ್ಟಿದಾಗ, ಅರಳಿದಾಗ ಮತ್ತು ಉರುಳಿದಾಗಲೂ ಸುಗಂಧ ತಾಳಿರುವಂತೆ ಕವನದ ಸೃಷ್ಟಿ, ಸ್ಥಿತಿ ಹಾಗೂ ಲಯದ ಅವಸ್ಥೆಯಲ್ಲಿಯೂ ಅದರ ಸತ್ವಕ್ಕೆ ಹಾನಿ ಆಗುವದಿಲ್ಲ. ಉತ್ತಮ ಕವನಕ್ಕೆ ಮರಣವಿಲ್ಲ. ಅದು ವಾಚಕರ ಸ್ಮರಣೆಯಲ್ಲಿ ಸತತವಾಗಿ ಚಿಗರುತ್ತ ಅವನಿಗೆ ಆಹ್ಲಾದ ಕೊಡುತ್ತದೆ.

೧೭ ಹುಂಜ-ಹೂ

೧
ಎದೆಗೆಂಪು, ಎದೆಗಂಪು, ಎದೆ ಕಂಪನಂಗಳಲಿ
ತೆರೆಯನರಿಯದ ಹೃದಯ ತೆರೆಯುತಿಹುದು
ಎಲರಿನಲೆ ಅಲರುತಲೆ ಕೊಡಹಿ ಕೊಡಕೊಡ ತುಂಬಿ
ನೀರಿನೊಲು ನೀರಾಗಿ ಬೆರೆಯುತಿಹುದು.

೨
ಯಾವ ಬೇಗೆಯು ಇಲ್ಲಿ ಕಾಗೆಗಳ ಚದುರಿಸುತ
ಎಂಥ ನಿಗಿನಿಗಿ ಕೆಂಡ ಪುಂಜವಾಗಿ
ಕಾದಾದದೇ ನೀಲಿ ಮುಗಿಲನಡರಡರಿಕೆಂ-
ಜೆಡೆ ಪಸರಿಸುತ್ತಿಹುದೊ ಹುಂಜವಾಗಿ.

೩
ಓಹೊ! ಹುಂಜದ ಪುಂಜ ಪೂಜೆ ಬಾನ್ ಹೂಜೆಯಲಿ
ನೀಡುವದು ಕೆನ್ನೀರ ಹೂವ ಮುಡಿ
ಹಸುರೆಲೆಯ ಬಿಸಿಯುಸಿರು ಜೀವ ತಣಿಸುತ್ತಿಹುದು
ಬಯಲ ಭಾವದ ಬಸಿಗೆ ಭಾವ ಮೂಡಿ.

ಭಾವ : ಬೆಳಗಿನ ಸಮಯದ ಕೆಂಪು ಆಕಾಶ-ಹುಂಜಗಳ ಗುಂಪಿನಂತೆ ಆಕರ್ಷಕವಾಗಿದೆ ಎಂಬ ರೂಪಕ ಮನೋಜ್ಞವಾಗಿದೆ.



೧೮ ಕದಳಿಗೆ ಪ್ರಶ್ನೆ

೧

ಯಾವ ಲಾಜಾ ಹೋಮ-
ದೀ ಲಜ್ಜೆ ದರುಶನವೊ?
ತಿರುಪು ತಿರುಪಣೆ ತುಂಬ
ಕುಂಕುಮವು ಅರಿಷಿಣವೊ!

೨

ರಾಯ ಕದಳಿಯ ಬಾಳೆ-ಕಾಬಾಳೆ
ಕಾಬಾಳೆ, ನಿಶೆಯು ಮಸಿ
ಬೆಳಗು ಬೆಳಕೇ ಹಾಳೆ
ಯಾವ ಹಗಲು ಯಾವ ಶಶಿ
ಯಾವ ಮಾತರಳುವುದೊ
ಇಲ್ಲಿ ಮೌನದಿ ಹೂತು.
ಯಾವ ಕಂಬನಿಯ ಕೆಂ-
ಬನಿಯ ದಳದಳ ಸುರುಳಿ
ಉರುಳುರುಳಿ ಏರಾಟ
ಮಾಡುತಿದೆ ಮರುಮರುಳಿ?

೩

ಯಾವ ಸಂಧ್ಯಾ ಭಾಷ್ಯ
ಈ ರಂಗು ತೋಡಿತ್ತು?
ಯಾವ ಗಿಳಿ ಗೆಳೆತನದ
ಶಿವ-ಶಕ್ತಿ ಮೂಡಿತ್ತು?

೪

ಈ ಬಾಳೆ ಮುಡುಪಿಡುವೆ
ನಿನ್ನನೆ ಮೆಚ್ಚಿ
ಈ ಬಿಚ್ಚು ಮೊಗ್ಗಿಯಲಿ
ಇಡಲೇನು ನಾ ಮುಚ್ಚಿ?

ಭಾವ : ಬೇಂದ್ರೆ ತನ್ನ ಬಾಳಿಗೆ ಮತ್ತು ಶ್ರೀಶೈಲದ ಕದಳಿ ಬಾಳೆಗೂ ಹಾಗೂ ಸಾಮಾನ್ಯವಾದ ಕೆಂಪು, ಹಳದಿ ತುರಾಯಿ ಬಿಡುವ ಕಲ್‌ಬಾಳೆಗೂ ಹೋಲಿಸಿರುವ ಕವನ.

ಶಬ್ದಾರ್ಥ : ಲಜಾ-ಲಜ್ಜಾ-ಲಾಜ=ಅರಳು. ರಾಯಕದಳಿ=ರಾಜಕದಳಿ, ಬಾಳೆಯ ಗೊನೆಕೊಡುವ ಬಾಳೆ. ಕಾಬಾಳೆ-ಕಲ್‌ಬಾಳೆ, ಕಣ್ಣಿಗೆ ಸುಂದರ.

೧೯ ಜೇಡನ ಹೂ

೧
ಎಳೆ ಸೆಳೆ ಹೂವಿನ ತಿಳಿ ಬಿಳಿ ಬಣ್ಣ
ಇದು ಯಾ ಲೋಕದ ನವ ಪುಷ್ಪ?
ಆಕೂತಿಗೆ ಕೇಸರಿಸಿದ ಕಣ್ಣ
ಆನಂದದ ಸುಂದರ ಬಾಷ್ಪ
೨
ತವಕದ ಮರ್ಮದ ಶರ್ಮದ ದಳವೇ
ದಳದಳ ವಿಕಸಿತ ಅವಿರತವು
ಯುವಕನ ಮುಖದಲಿ ಶಿಶುವಿನ ಕಳೆ ಬರೆ
ವಿಸ್ಮಿತ ಕುತುಕಕೆ ಸ್ವಾಗತವು.
೩
ಕೃಪಾ ಪ್ರಸಾದದ ತುಂತುರು ಕಣಕಣ
ತೂರಿ ಹಿಡಿಯುವೊಲು ಊರ್ಣಿಸಿದೆ
ತಂತುವಾಯದಾ ಉಪಾಯ ಕ್ಷಣಗಣ
ಪೋಣಿಸಿದೊಲು ಅವತೀರ್ಣಿಸಿದೆ.

- ಇದು ನಭೋವಾಣಿ : ೧೯/ಪ್ರ : ೧೯೭೦

ಭಾವ : ಜೇಡನ ಬಲೆಯ ನೇಯುವಿಕೆ ಹೂವಿನ ಪಕಳೆಗಳ ವಿನ್ಯಾಸದಂತೆ ಕವಿಗೆ ಕಂಡಿದೆ.



೨೦ ಬನ್ನಿ ಭಂಗಾರ

೧

ವಸ್ತು ಭಂಗಾರ-ಒಡವೆಯು ಅಲಂಕಾರ
ಸ್ವರ್ಣಕಾರನ ಮನೆಗೆ ಬಂದ ತಿರುಕ
ಮೈ-ಮಾತು-ಮನ ಎಲ್ಲ ಹರಕು-ಪರಕು

೨

ಮನೆಯೊಡೆಯ ಭಕ್ತ
ಬಂದವನು ಅರಕ್ತ-ವಿರಕ್ತ
ಎಲ್ಲೊ ಅನುರಕ್ತ!

೩

"ಹಸಿದು ಬಂದಾನೆ, ದೇವ!" ಎಂದ
ಮನೆಯವರು ನೀಡಿದರು,
ಇವನು ಅಲ್ಲೇ ಉಂಡ-ಕುಡಿದ-ತೇಗಿದ,
'ಮನಸು ಹಸಿದಿದೆ' ಎಂದ.

೪

ಕೇಳಿದ ಭಕ್ತ 'ಏನಾಸೆ?'
'ಕನ್ಯಾ ಭಿಕ್ಷೆ' ಉಸುರಿತು ದನಿಯು.

೫

ಭಕ್ತ ಮರುಗಿದನು "ನನಗಿಲ್ಲ ಆ ಪುಣ್ಯ"
ನಾನು ಪಡೆದುದು ಗಂಡು.
ನನ್ನ ಮನೆ ನಡೆಸಿಹುದು ಹೆರರ ಹೆಣ್ಣು;
ಇನ್ನೂ ಕಂದನ್ನ ಹಡೆದಿಲ್ಲ.
ನಮ್ಮನ್ನೆ ಸಲುಹುತಿದೆ", ಭಕ್ತ ಉಸುರಿದ-

೬

ಬಂದವನು ಅತಿಥಿ ದೇವ!
ಅಲ್ಲವೆ ಮತ್ತೆ!
'ಪರವಾ ಇಲ್ಲ, ಅದನೆ ಕೊಡಿ' - ಎಂದ.


೭
ಭಕ್ತ ಮನದಲಿ ನೆನೆದ
'ಏನೀ ಪರೀಕ್ಷೆ' ? ಇದು ಯಾವ ದೀಕ್ಷೆ?
ಯಾವ ಭಿಕ್ಷೆ?'
ಆ ದೈವಕ್ಕೆ ಈ ದೈವ ಎಂದಿತು
'ಎಲೊ ಜೀವ ಆ ಹೆಣ್ಣು ನನ್ನ ಮಗನಿಗೆ ತಂದೆ-
ಅದು ಅವನ ಸೊತ್ತು',
೮
ಅದೆ ಹೊತ್ತು ಮಗ ಬಂದ,
ತಂದೆಯ ಚಿಂತೆ ಕಂಡ,
ಕೈಮುಗಿದ "ಮಾತಾಡಿ ತಂದೇ !" ಎಂದ
೯
'ನಿಂತ ದೈವವ ನೋಡು, ಅದಕ್ಕೆ ಬೇಕಂತೆ
ಹೆಣ್ಣಿನ ಭಿಕ್ಷೆ'
೧೦
ಮಗ ಹೆಂಡತಿಯ ಹೊರಗೆ ಕರೆದ,
'ಇದ ನೋಡಿದೆಯಾ? ಕೇಳಿದೆಯಾ?' ಎಂದ.
೧೧
ಆಕೆ ಎಂದಳು,
'ಪಾಪ ! ಸಾವನಿಗೆ ಯಾವ ಕಾವ ?'
ಮಾಡಿದಳು ಪ್ರಣಾಮ

'ಅಜ್ಜ ! ಹುಟ್ಟುವ ಮನೆಗೆ ಮರಳಿದಿರಿ ನೀವು'
ಎಂದಳಾಕೆ
೧೨
ಭಿಕ್ಷುಕ ಗತ ಪ್ರಾಣ !

೧೩
ಮುಂದೆ ವರುಷಕ್ಕೆ ಫಲಿಸಿತ್ತು ಮನೆ
ಎದೆಯು ತೊರೆದಿತ್ತು
ಭಕ್ತನ ರಸವು ಮುಂದೆ ಹರಿದಿತ್ತು
ಆಕಾರ, ಊಕಾರ, ಒಂದೆ ಓಂಕಾರ
ಬನ್ನಿ ಭಂಗಾರ
ಮನೆ ಇದೆ ಬನ್ನಿ
೧೪
ಮರಣವೆ ಮಹಾನವಮಿ
ದಸರೆ-ದಶಮಿ-ಹೊಸಜನ್ಮ
ಸಿಮೋಲ್ಲಂಘನ !
ಬನ್ನಿ - ಭಂಗಾರ !.

ಭಾವ : ಪಂಢರಪುರದ ವಾರಕರಿ ಅತ್ಯಂತ ವಿಕೃತವಾದ ಕಥೆ ಹೇಳಿದಾಗ, ಅದರ ವಿಕೃತಿಯನ್ನು ಹೊಡೆದು ಹಾಕಿ ಅದಕ್ಕೆ ಸುಸಂಸ್ಕೃತ ರೂಪ ಕೊಟ್ಟ ಕವನ. ಸೊಸೆ ಆ ಹೆಣ್ಣಿನ ಭಕ್ತಿಗೆ ಅರ್ಪಿಸಿ ಕೊಳ್ಳದೆ, ಅವನು ಮರಣ ಹೊಂದುವಂತೆ ಮಾಡಿದ ಆದರ್ಶ ಪತ್ನಿ ಎಂದು ವರ್ಣಿಸಲಾಗಿದೆ. ವಿಕೃತ ಕಥೆಯನ್ನು ಪ್ರಚಾರ ಮಾಡಿ ಮನೆಮನೆ ಒಡೆಯಬಾರದು ಎಂಬ ಸೂಚನೆ ಕೊಟ್ಟು "ವಿಕೃತ ಹಾಡನ್ನು ಎಂದೂ ಹಾಡುವದಿಲ್ಲ" ಎಂಬ ವಚನವನ್ನು ಬೇಂದ್ರೆ ಅವನಿಂದ ಪಡೆದರು.

ಶಬ್ದಾರ್ಥ : ಸಾವನಿಗೆ=ಸಾಯುವವನಿಗೆ. ಕಾವ=ರಕ್ಷಿಸುವ.



೨೧ ಬಂಗಾರದ ಹೊದಿಕೆ

೧
ಸತ್ಯಕ್ಕೆ ಸಧ್ಯಕ್ಕೆ ಬಂಗಾರ ಹೊದಿಕೆ
ದೊರೆ! ತೆರೆಯೊ ಆ ತೆರನ ತೆರೆಯ ಮುಚ್ಚಳಿಕೆ
೨
ಆಹಾರ ಅಂಗಾರ ಕಂಗಾಲ ಜನಕೆ;
ಜೀವನ ತಲೆ ತಗ್ಗಿ ಬೆಲೆ ಬಂತು ಧನಕೆ,
ಆ ಮಂದಿ ಈ ಮಂದಿ ಒಂದೆ ಈ ದನಕೆ!
ಎಂತು ಬಾಳುವೆ ಬದುಕು ತಂತು ಜೀವನಕೆ?
ಧಾನ್ಯಕ್ಕೆ ಬರಗಾಲ ಕೈಯಲ್ಲಿ ಒನಕೆ
ಬಹಳ ಅಂತರವಿಲ್ಲ ದೇಶಕ್ಕೆ ವನಕೆ.
೩
ನೆನೆನೆನೆದು ಕುದಿಕುದಿದು ನನೆಯಾಯ್ತುನೆನಕೆ
ಉಸಿರೆ ಅನ್ನವದಾಯ್ತು ಬರಿಯ ತಂತನಕೆ,
ಇರವಿಗೋ ಆಧಾರ ಅರಿವಿನಾ ಗೊರಕೆ.
ಪಿಂಡಾಂಡ ಬ್ರಹ್ಮಾಂಡ ಒಂದೆ ಒಳ-ಹೊರಕೆ
ನವನಲ್ಲ ಮಾನವನು ದಾನವನ ದಾನ
ತರ್ಕವೇತಕೆ ಬೇಕು?-ಸಾಕು ಅನುಮಾನ.

ಭಾವ : ಶ್ರೀಮಂತರು ಕೊಟ್ಟ ದಾನದಲ್ಲಿ ಬದುಕುವದು ಪಶು ಜೀವನಕ್ಕೆ ಸಮಾನ. ಅವನು ಮಾಡುವ ದಾನ ನಿಜವಾದ ದಾನವಲ್ಲ. ಅನ್ನದ ಋಣವೆಂಬ ಉರುಲು-ಇದೇ ಬಂಗಾರ ಹೊದಿಕೆ.

೨೨ ಅಭಯ ಸ್ವಸ್ತಿ

೧

ಧೀರನಾಗಿರು ಧರಣಿಪುತ್ರನೆ
ಮರಣವಿಲ್ಲವು ಮಣ್ಣಿಗೂ
ಕಾಂಬ ಆಸೆಯೆ ಜೀವ ಭಾಷೆಯು
ಕುರುಡು ಬಂತೇ ಕಣ್ಣಿಗೂ ?

೨

ದೇವನಿರುವನು, ಭಾವವಿರುವುದು
ಜೀವನಿರುವನು, ಹೊಂದಿಗೂ
ಮೈಗೆ ಹಸಿರುಡೆ, ಹಣೆಗೆ ಕುಂಕುಮ
ಭೂಮಿ ಇಟ್ಟಿದೆ ಇಂದಿಗೂ

೩

ಉಸಿರೆ ಕುಸುರಿಸುತಿಹುದು ಹೆಸರನು
ಬಾಳೆ ನಂದನವೆಂದಿಗೂ
ಕಂದನಿಂದಲೆ ಮನೆಗೆ ತೋರಣ
ತನ್ನ ತಾಯಿಗು ತಂದೆಗೂ

೪

ಏಕೆ ರೋಗದ ರಾಗ ಎತ್ತುವೆ ?
ಯೋಗಕಿದೆ ಮುಂದಿನತನ
ತನನ ತಾನದ ನೆಲೆಯು ಗಗನವು
'ಸ್ವಸ್ತಿ' ಎನುತಿದೆ ಸಹಜನ.

ಭಾವ : ಕವಿಯ ಬಾಳು, ಪೃಥ್ವಿ, ಆಕಾಶ, ತಾಯಿ, ತಂದೆ, ಮಕ್ಕಳ ಸಂಬಂಧ ಸೂತ್ರದ ಚಿಂತನದ ಕವನ.

೨೩ ಅರಿದು ಹಾದಿ

೧

ಹೆಸರ ಹೊತ್ತಿರದ ಆ ಛಂದ
ಉಸಿರು ಕಟ್ಟಿರದ ಆ ಬಗೆಯು
ಗುರಿ ಇಲ್ಲದಿದ್ದರೂ,
ಸಂಧಿ ಹೊಂದದೆ ಬಿಡದೆ
ಮತ್ತೆ ಒತ್ತೇ ಒತ್ತಿ ಎತ್ತಿತ್ತು ತಲೆ

೨

ಅರಿವು ತೊರೆದೂ ಕೂಡ ಇರಬಲ್ಲೆನೆನುವಂತೆ
ನಾಣರದ ಜಾಣಗೋ ನಾಚಿಕಾಗುವ ಪಾಂಗು
ಕುರುಡು ಕಣ-ಗಣ ಹುರುಡು
ಹುರುಳನರಸುವ ರೀತಿ

೩

ಬೇನೆ ತಿನ್ನುವ ನಡುಕ ಜಾಡ ಮೂಡಿಸುವಂತೆ
ಹಳೆಯ ಬೇಕಿನ ಕೊರೆಗೆ ಎಡೆಮಾಡಿ
ಬೇಜಾರಿನಲ್ಲಿ ಬೇಸತ್ತು ಬೆಳುದಿಂಗಳೂ ಇರದ
ಗವಿಯ ಗಬ್ಬದ ಮಬ್ಬು ಸೇರಿರಲು.


೪

ಇರದ ಬೆಳಕಿನ ಕಡೆಗೆ ತಲೆಯೆತ್ತಿ ತೆರೆ ಹಾದಿ
ಎಂದು ಕರಕರೆ ಮಾಡುತಿರುವಂತೆ, ಅಂತೆ-
ಅಡಗಿರುವ ತಾನನ್ನು ಹುಡುಕ ಹಂಬಲಿಸುತಿರೆ
ಹವಣಿಕೆಗೆ ಅದರ ಹೆಣ ಮುಚ್ಚಿದಂತಾಯ್ತು

ಭಾವ : ಜ್ಞಾನದ ಹಾದಿಯ ಹುಡುಕಾಟ.

ವಿಶೇಷ : ಯಾವುದೋ ಒಂದು ಕವನದ ಭಾವಾನುವಾದ.

೨೪ ಮಂತ್ರ-ಯಂತ್ರ-ತಂತ್ರ



೧

ಅಗ್ನಿದೇಹಿಗೆ ಲಿಂಗ ಸಂಬಂಧಿ ಈ ಭೂಮಿ
ಪಳಕು ಪಳಕಾಗಿ, ಕಣ ಕಾಳಾಗಿ, ಕ್ಷಣ ಭೌಮಿ
ಸೌಮ್ಯ ಆಪಸ್ಯಂದಿ ಹಸೆಯ ಹಾವಸೆ ಕಾಮಿ
ಪ್ರಾಣಾಂಗನಾಗಾಮಿ ಅಣಿಮಾದಿ ಸಂಗ್ರಾಮಿ!
ಮನುವಿಗನುವಾಗಿ ಮಾನಿಸರ ಲೋಕವ ಮೀರಿ
ದೈವಯೋಗದ ನವೋನವ ಪುರುಷರಸವೇರಿ
ಓಂಕಾರ ಭೇರಿ ಮೊಳಗಿತ್ತು ಕೃತಯುಗ ಸಾರಿ
ಜ್ಞಾನ ಕ್ಷೇತ್ರಕ್ಕೆ ವಿಜ್ಞಾನ ಬೀಜವು ಸೇರಿ!

೨

ಕಂಡೆ, ಕಾಣೆ, ಕಾಣಿಕೆಯ ಕಣವು ಕಣ್ಣಿಂಗೆ ಕಾಣ್ಕೆಯಾಗಿ
ಅಗ್ನಿ-ಸ್ಫುಲಿಂಗ, ಅದು ಯಾರ ಲಿಂಗ? ಯಾವಂಗ ಮಾಳ್ಕೆಯಾಗಿ?
ಛಂದೋऽಬಂಧ, ಅದರಂದ ಅದುವೆ, ಹೋಲುಮೆಯ ಋದ್ಧಿಯಾಗಿ
ಕಣವೆ ಕಳವು, ಕಾಳಾಗಿ ಗಣವು, ಗುಣವಾಗಿ ವೃದ್ಧಿಯಾಗಿ
ಅಂಕುರಿಸಿತಣ್ಣ, ಒಡೆದಿತ್ತು ಗಣ್ಣ, ಬೇರಾಗಿ ಬೇರೆಯಾಗಿ
ಜನ್ಮಕ್ಕೆ ಜನ್ಮ ಆವರ್ತವಾಗಿ, ಪುಷ್ಕರವೆ ಮೇರೆಯಾಗಿ
ಸ್ಥಾವರದ ಹರಣ ಪಡೆದಿತ್ತು ಚರಣ, ಮರಣಕ್ಕೆ ಮರಣ ಮೂಡಿ
ವಿದವಿತ್ತವೇದಿ ಸಂವಾದಿಯಾಗಿ ಸೀಮಾಂತವನ್ನೆ ದೂಡಿ
ಗ್ರಹಗಣಿತ ಗುಣಿತ ಕುಣಿತಕ್ಕೆ ಪಕ್ಕ ಪಡೆದಿತ್ತು ದಿಕ್ಕಕೂಡಿ
ಎಚ್ಚರದ ವಿಶ್ವ ಸರ್ವಸ್ವವನ್ನೆ ಮಾಡಿತ್ತು ಹ್ರಸ್ವ, ಮೋಡಿ!
ಇದು ಅದಕೆ ಬಾಯಿ, ಅದು ಇದರ ತಾಯಿ, ಭಾವಕ್ಕೆ ಭಾವ ಜೋಡಿ
ಒಂದಕ್ಕೆ ಮಂತ್ರ, ಎರಡಕ್ಕೆ ಯಂತ್ರ, ಮೂರಕ್ಕೆ ತಂತ್ರ, ನೋಡಿ!

ಭಾವ : ಜ್ಞಾನ ಕ್ಷೇತ್ರಕ್ಕೆ ವಿಜ್ಞಾನ ಬೀಜ ಸೇರ್ಪಡೆಯಾದ ತಂತ್ರ ಕುರಿತು ಚಿಂತನ.

ಶಬ್ದಾರ್ಥ : ಪಳಕು=ಪಳಂಕು=ರಭಸದಿಂದ ಹೊಡೆ, ಗಟ್ಟಿಯಾಗಿ ಹಿಡಿ. ಅಣಿಮಾ=ಅಷ್ಟಸಿದ್ಧಿಗಳಲ್ಲಿ ಒಂದು. ಪುಷ್ಕರ=ಆಕಾಶ.

ವಿಶೇಷ : ಬೇಂದ್ರೆಯವರ ವಿಜ್ಞಾನ ಚಿಂತನ ಆಧರಿಸಿ ಒಡಮೂಡಿದ ದರ್ಶನ ಇದು.

೨೫ ನಾನು ಕಂಡಂತೆ

೧

ದತ್ತಗುರು ನೀಡಿದರು ಆ 'ವಿನಾಯಕ' ಭಿಕ್ಷೆ
'ಬಾರೋಬಾ' ಎಂದು ಹೃದಯದ ಗುಹೆಯು ಕರೆದಾಗ
ಸಹಜೀವನಕೆ ಮೈತ್ರಿಸೂತ್ರ ತೆರೆ ತೆರೆದಾಗ
ತನ್ನ ತಾ ಮೀರುವುದು ವಿಜ್ಞಾನದಾ ದೀಕ್ಷೆ.

೨

ಐದು ಖಂಡಗಳಲ್ಲಿ ಅಲೆದಾಡಿಸಿದ ಕೀರ್ತಿ
ಈ ವ್ಯಕ್ತಿ ಈ ಭಕ್ತಿ ಇದಕೆ ಇದುವೇ ಸಾಟಿ
ಸಾಹಸಕೆ ಹಿಂಜರಿವುದಲ್ಲ ವೇಗದ ಧಾಟಿ
ಕಂಡರಿಸುತಿದೆ ದೃಷ್ಟ ತನ್ನದೃಷ್ಟದ ಮೂರ್ತಿ

೩

ನವಖಂಡ ಭಾರತೀಯತ್ವದಾ ಉದಯ ಘನ
ಭಾಷೆ ಹತ್ತಾದರೂ ಐಕ್ಯ ಲಿಂಗದ ಭಾವ
ವಾದ್ಯಗಳ ಮೇಳದಲಿ ಏಕತಾನದ ಜೀವ
ಕವಿ ವಿಹಂಗವು ಸಂಘ ಕಂಡಿದೆ ವಿನಾಯಕನ

೪

ನಾನು ಕಂಡಂತೆ; 'ಕಂಡಿಲ್ಲಾ' ಇನ್ನೂ ಪೂರಾ
ಇವನರಿವು ಇವನ ಗುರು; ಗುರಿಯೊ ಬಲು ಬಲು ದೂರಾ.

ಭಾವ : ಬೇಂದ್ರೆಯವರನ್ನು ಗೋಕಾಕ ಕಂಡದ್ದು ೧೯೨೫ರಲ್ಲಿ. ಆಗ ಅವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ವಿದ್ಯಾರ್ಥಿ. ಬೇಂದ್ರೆಯವರನ್ನು ಗೋಕಾಕರು ತಮ್ಮ ಕೊನೆಯವರೆಗೂ ಗುರು ಎಂದೇ ಒಪ್ಪಿಕೊಂಡಿದ್ದರು. ಈ ಕವನದಲ್ಲಿ ಗೋಕಾಕರ ಗುರು ಅವರಲ್ಲಿಯ ಅರಿವು ಎಂದು ಸ್ಪಷ್ಟಪಡಿಸಿದ್ದಾರೆ. ಕೊನೆಯ ಸಾಲಿನಲ್ಲಿ 'ಗುರಿಯೋ ಬಲು ದೂರ' ಎಂದು ಇದ್ದದನ್ನು - ಗುರಿಯೋ ಬಲು ಬಲು ದೂರ - ಎಂದು ತಿದ್ದಿದ್ದಾರೆ. ಗೋಕಾಕರಿಂದ ಇನ್ನೂ ಸಾಕಷ್ಟು ಕಾರ್ಯಗಳಾಗಬೇಕಾಗಿವೆ ಎಂಬ ಆಶಯು ಎರಡನೆಯ 'ಬಲು' ವಿನ ಸೇರ್ಪಡೆಗೆ ಕಾರಣವಿರಬಹುದು. ಗೋಕಾಕರ ಜೀವಿತ ಕಾಲ : ೯-೮-೧೯೦೯ ರಿಂದ ೨೮-೪-೧೯೯೨.

ಶಬ್ದಾರ್ಥ : ವಿಹಂಗಮ=ಹಕ್ಕಿ, ಬಾಣ, ಮೋಡ.

೨೬ ಕೃತಕೃತ್ಯ

೧

ಈಕೆ ? ಯಾವಾಕೆ ? ಕಣ್ಗೊಂಬೆ. ನಂಬಿಕೆಯಲ್ಲಿ
ಅಂಬಿಕೆಯ ಪದಕೆ ತಾನಿಂಬುಗೊಡದಾಕೆ ! ಸಾ-
ಕೇ ಸಾಕು ! ನಿಷ್ಠೆಯಲಿ ಕಷ್ಟ ಕಂಡವನು ಇ-
ಷ್ಟವ ಪಡೆವನೇ? ತಿಷ್ಠ, ಉತ್ತಿಷ್ಠ, ಭಾಗ್ಯ ಬೆಂ-
ಬಿಡದ ಭಕ್ತನೆ, ಸುಭಗ, ಲೀಲಾವಿಭಕ್ತ, ಪ್ರಾ-
ಸಾದಿಕನ ಭವಭವಾಂತರವು ಅವಿಸಂವಾದಿ-
ಇದು ಖುದ್ದು ಗಾದಿ. ನಾದಿಗೆ ಅನಾದಿಯೇ ಶ್ರುತಿಯು ;
ಬೇರುಗೊಳ್ಳುವುದು ಕೃತಿ, ಮೂಡುವುದು ಆಕೃತಿಯು.

೨

ಓಂಗೊಡದ ತತ್ತಿಯಾಸುತ್ತ ಸತ್ತಿತ್ತೊ ಭಾವ ?
ಅದು ಅನರ್ಥದ ಕುಣಿಯು, ಶಬ್ದಕಾವನೆ ಸಾವ !
ಈ ತಂತಿ ಆ ತಂತಿ ಊ ತಂತಿ ಮಿಡಿಯದೇ
ಚಿಂತನದ ಚಿಂತಿಕಾ ತಂತ್ರ ಕರಣಭ್ರಾಂತಿ
ಯಾವ ಓಜಸ್ಸು ಮಾಧುರ್ಯ ಯಾವುದೊ ಕಾಂತಿ
ಮಿಂಚು ಮುಸೆದಾಟದಲಿ-ನಕ್ಷತ್ರ ವಿಶ್ರಾಂತಿ.

ಭಾವ : ಓಜಸ್ಸು, ಮಾಧುರ್ಯ, ಕಾಂತಿ ಇವು ಕಾವ್ಯಗುಣಗಳು. ಕಾವ್ಯಗುಣಗಳ ಪ್ರಕಾಶ ಕಂಡ ಕವಿ ಕೃತಜ್ಞತಾಭಾವದಿಂದ ತಾನು ಕಂಡದ್ದನ್ನು ತನ್ನ ಕವನಗಳಲ್ಲಿ ಅಭಿವ್ಯಕ್ತ ಪಡಿಸುತ್ತಾನೆ.

ಶಬ್ದಾರ್ಥ : ಖುದ್ದು=ಪ್ರತ್ಯಕ್ಷ



೨೭ ಪ್ರಾಚೀನ

೧

ಗಣ್ಣಗೆ ಗಣ್ಣಗೆ ಬೀಜವು ಗಣಿಕೆಗೆ ಗಣ ತಿಣ್ಣ
ಕಂಡೇ ಇದೆ ಕಾಣುವುದದು, ತೆರೆವುದು ಯಾಕಣ್ಣ?
ಮುನ್ನೀರಿನ ಆ ಕಡಲಿಗೆ ಈ ಕಡೆ ಕರೆ ಧರೆಯು
ನನ್ನೂರಲಿ ನಿನ್ನೂರಲಿ ಅಸ್ಥಿರೆಯೋ ತಿರೆಯು.

೨

ತುರು ಬರುವುದು ತರುವಿನ ಬಳಿ-
-ಅನುದೊರೆತರೆ ಸಾಕು
ದ್ರವಿಸದ ದ್ರುಮವೆಲ್ಲಿದೆಯೋ ಆ ದ್ರವ್ಯವು-
-ಬದುಕು

೩

ತುರು ತುಂಬಲಿ, ಹಸಿ ಫಲಿಸಲಿ ಹಣ್ಣಾಗಲಿ ಬಣ್ಣ
ತೋರದ ಬೆಳಕಿನ ಕಿಡಿಕಿಡಿ ಕಿಡಿಕೆಯ ಹಿಡಿಸಣ್ಣ
ತೂತೂ ತನು ತುರುಕಾಡುತ ಕರುವಿಟ್ಟಿತು ಬಸಿರು
ಸ್ವರವ್ಯಂಜನ ಅಭ್ಯಂಜನ ವರ್ಣಿಸುವುದು ಉಸಿರು

೪

ಒಳಗರಳಿರೆ ನೀಲಾಂಜನ ಪುಲಕಿಸುತಿದೆ ಕುಸುರು
ಮಾಟದ ಆಟದ ಅಡಿಗೆಗೆ ಸವಿ ಎಂಬುದೆ ಹೆಸರು
ಮಾತಿನ ಆಚೆಗೆ ಈಚೆಗೆ ಚಾಚಿದೆ ಪ್ರಾಚೀನ
ವಿರಸನು ಶುಂಠನು ಅಲ್ಲವೆ? ತಿಳಿವನೆ ರಸಹೀನ?

ಭಾವ : ಬೇರಿಗೂ ಹೂವಿಗೂ ಇರುವ ಸಂಬಂಧವೇ ಪ್ರತಿಯೊಂದು ಘಟನೆಗೂ ಇರುತ್ತದೆ. ಸಂಬಂಧದ ಅರ್ಥ ತಿಳಿದುಕೊಳ್ಳುವವನು ರಸಿಕ. ರಸಹೀನನಿಗೆ ಸಂಬಂಧದ ತಿಳುವಳಿಕೆ ಆಗದು.

ವಿಶೇಷ : ಈ ಕವನ ''ತಾ ಲೆಕ್ಕಣಿಕಿ ತಾ ದೌತಿ'' ಕವನ ಸಂಗ್ರಹದಲ್ಲಿ ವಿರಸ-ರಸಹೀನ ಎಂಬ ಶೀರ್ಷಿಕೆಯಿಂದ ಮುದ್ರಣಗೊಂಡಿದೆ.

೨೮ ಓಂ ಪ್ರಾರ್ಥನಾಗೀತ

೧
ವೇದ ಪುರಾಣವು
ಬಾಯ್ಬಲ್ ಕುರಾಣವು
ಆಗಮಾವೆಸ್ತಾ-ಓಂಕಾರಾ
ನಂಬಿಗೆಗಿಂಬಾದ ಝೇಂಕಾರಾ
ಇದು ತತ್ ಪುರುಷನ ಓಂಕಾರಾ
ಇದು ಸತ್ ಪುರುಷನ ಓಂಕಾರಾ
ಅವರವರಿಗೆ ಅವರಾಕಾರಾ.
೨
ಸ್ವರ ವ್ಯಂಜನಗಳ ವರ್ಣವಿಕಾರಾ
ಛಂದೋನಿರ್ಮಿತ ಪ್ರಾಕಾರಾ
ಚಿತ್ರದ ಭಿತ್ತಿಗೆ ಸಂಸ್ಕಾರಾ
ಪರಾಪ್ರಕೃತಿಗಿದೆ ಅಧಿಕಾರಾ
ಸಹೃದಯ ರಸಿಕನ ಉದ್ಗಾರಾ
ಓಂಕಾರವೆ ಶ್ರುತ್ಯಾಕಾರಾ
೩
ಭಾವಸ್ಫೂರ್ತಿಗೆ ಇದು ದಿವ್ಯ ಧ್ವನಿ
ಜೀವಸಾಹಿತ್ಯಕೆ ಇದು ಸವಿ, ಇದು ಸನಿ
ಓಂಕಾರಾ
ಇದು ಝೇಂಕಾರಾ.
ಓಂ! ಸ್ವಸ್ತಿ! AMEN! ಓಂ!

ಭಾವ : ಸರ್ವ ಧರ್ಮ ಸಮನ್ವಯ ಗೀತ.

೨೯ ಮಹಾತ್ಮಾ

೧

ಒಮ್ಮಿಂದೊಮ್ಮೆ, ನೀಲಯಕ್ಷಿಣಿಯರಾಲಾಪವಾಯಿತ್ತು ಮಂದ ಸ್ತಬ್ಧ
ರೆಕ್ಕೆಗುದುರೆಯ ಸಪ್ಪಳವು ಗಪ್ಪುಗಾರಾಯಿತ್ತು.
ಸನ್ನಂತರಂಗದಾ ಉತ್ಫುಲ್ಲ ಕುಸುಮಗಳು ಕೈಜಾರಿ ಉದುರಿದವು
ದಿಕ್ಕುದಿಕ್ಕಿನ ವರ್ತಮಾನಪತ್ರದ ಸುದ್ದಿ, ಒಂದು ಕೂಗು
'ಕೊಂದರೋ ಲೋಕಕಾಶೀರ್ವಾದ ಪ್ರಾರ್ಥಿಸುವ ಸಮಯಕ್ಕೆ ಕೊಂದರು!'
ಹಬ್ಬಿರುವ ಇರುಳುಗತ್ತಲೆಯಲ್ಲಿ ಹಕ್ಕಿನರಳಿದ ಹಾಗೆ ಒಂದು ನಿಟ್ಟುಸಿರು-
ನಾನೆದ್ದೆ, ಹೊರಬಿದ್ದೆ, ಎಲ್ಲಿಗೆತ್ತಲೋ. ಸಾಕು ಸಾಕೀಲೋಕ.
ನೀನು ಹಾಕಿದ ಉಸಿರು, ಕೊನೆಯ ತುಸು ಬಿಸಿರಕ್ತ ಬಸಿದಾಗ!
ನಿನ್ನೆಲುಬು ಅಲ್ಲಿ ಲಟಲಟ ಮುರಿದು ಸಾವು ಎದೆ ಹೊಕ್ಕಾಗ
ಬೆಳಗುಜಾವಕೆ ಬಿದಿರು ಸಿಳ್ಳುಹಾಕಿದ ಹಾಗೆ-ಬಂತು ಧ್ವನಿ-
'ಆ ಜನ ದನ, ತಾಯಿ',

೨

ಅಸ್ತವಾದವೆ ಸತ್ಯದಾಗ್ರಹದ ಆ ದಿನಗಳು?
ಎಲ್ಲಿ ಹೋದವೋ ಮನೆಮನೆಗೆ ನೂಲುವ ರಾಟಿ, ಗುಂಗುಣು ಧಾಟಿ
ರೇಸಿಮೆಯ ತೊಟ್ಟವರು, ಬಂಗಾರ ಇಟ್ಟವರು, ಬೆರಳಾಡಿಸಿದಲ್ಲಲ್ಲಿ
'ವಂದೇ ಮಾತರಂ' ಗೀತ, ಸರಿಗಮ ಸಾಟಿ -
ದಾರ್ಜಿಲಿಂಗ ಚಹಕೆ ಬಿಳಿಗುಲಾಬಿಯ ಕಂಪು, ಅಲ್ಲವೇನೇ?
ಎಂಬ ಬಿಸಿ ಮಾತು.

೩

ಈ ಬೀದಿ, ಆ ಬೀದಿ, ಅದರಾಚೆಯಾ ಬೀದಿ, ಆದರಾಚೆ, ಆ ಪಾತಾಳದಲ್ಲಿ
ಇಂಡಿಯಾದಲ್ಲಿ,
ಯಾರೋ ಕೊಂದರು, ಯಾರೋ ಸತ್ತರಂತೆ, ಪಿಸುಪಿಸು ಮಾತು.
ಇರಬಹುದೇ? ಇದ್ದೀತೆ? ಮುಟ್ಟಬಾರದ ಕೆಟ್ಟ ಕರೆ ಮಂದಿ!
ಏನಂದಿ? ಅಳು ಬರುವ ಸುದ್ದಿಯೇ! ನೀನೆಲ್ಲಿದ್ದೀ?
ಓ ಠಾಕೂರ ಕವಿ!

೪

"ಹೊಟ್ಟೆತುಂಬಿದ ಹಕ್ಕಿ ಬೆಳಗು ಹಾಡುವಹಾಗೆ ನಿನ್ನ ಕವನದ ಪ್ರಾಣಾ
ನನ್ನ ಹಕ್ಕಿಯ ಹೊಟ್ಟೆ ಬರಿದು, ಬರಿದೋ ಬರಿದು, ಉಸಿರಲೂ ಕೂಡ ನಿತ್ರಾಣಾ"
ಇದು ಸವಾಲು ಜವಾಬು ಆಯ್ತು ಸಂಜೆಗೋ ಬಿಸಿಬಿಸಿ ಸುದ್ದಿ ಬೀಸಿತ್ತು
ಓದಿದ್ದೆ ಓದಿದ್ದು, ಚಿಕ್ಕಮಕ್ಕಳು ಬಾಲಬೋಧೆ ಓದಿದ ಹಾಗೆ
ಅಕ್ಷರಕ್ಷರವ ನುಡಿಸಿ ನೋಡಿದರು, ಏನೋ ಅರ್ಥ? ಸುಮ್ಮನಾದರು.
ಎಲ್ಲರೂ ಪಾದ ಬೆಳೆಸುವರು-ಹೆಜ್ಜೆಯ ಮೇಲೆ ಹೆಜ್ಜೆ-ಮುಂದಿನ ಹಾದಿ
ಒಬ್ಬೊಬ್ಬರೂ ತಮತಮಗೆ ಮೂಕ, ಮಾತಿಲ್ಲ ಕುರುಡಾಗಿ ಕಣ್ಮುಚ್ಚಿದರು
ಎಲ್ಲೊ ಮುಳ್ಳು ಕಚ್ಚಿದ ಹಾಗೆ ಎದೆಯೊಳಗೆ.

೫

ಇಲ್ಲೂ ಕೂಡ ಐದೇ ಗಂಟೆ! ಎಲ್ಲರ ಕೈಯಲ್ಲೂ ಕಪ್ಪು ಚಹ
ಅಲ್ಲೂ ಕೂಡ ಅದೇ ಸುದ್ದಿ, ಚಹ ಕೂಡ ನಿಟ್ಟುಸಿರಬಿಟ್ಟಿತ್ತು.
"ಈ ಮನುಷ್ಯನಿಗೆ ಬೇಕಿತ್ತೇನು? ಈ ಲೋಕಕೇಕೆ ಬಂದಿದ್ದನೀತ?"
"ಓ ದೇವ ಕುಂಭಾರ! ನಾನೇನಯ್ಯ? ನಿನ್ನ ಕೈ ಕಪ್ಪರದ ಮಡಕೆಯು ನಾನು.
ಅವಗೆ ಸಾಕಾಯ್ತೋ, ನನ್ನೀ ಸೇವೆ, ಕೈ ಬಿಡುವ" ನಿನ್ನೀ ವಚನ ನಿಜವಾಯ್ತು.

೬

ದೇವರೇ ಕೈ ಬಿಟ್ಟ, ಬಿದ್ದಿತು ಮಡಕೆ, ಟಪ್ಪ ಟಪಾರನೆ!
ಅಬ್ಬ! ಒಳಗೆ ಹಸಿ ಇತ್ತೇನೋ! ತುಸು ಬಿಸಿರಕುತ ಬಸಿದಿತ್ತು.
ಎಂಥದಣ್ಣಾ ನಿನ್ನ ಹೃದಯ? ಕುದಿದು ಒಣಗಿರಲಿಲ್ಲ, ಭಲೆ ವೀರನೋ ನೀನು.

೭


ಪುಟ್ಟ ಹೂ ನಾರುಬಟ್ಟೆಯಲಿ ಸುತ್ತಿಟ್ಟಂತೆ ಸುಖವಾಗಿದ್ದೆ,
ಜೀವನಸ್ಮೃತಿಯ ಪಟಲದಲಿ ಮಂತ್ರಾಕ್ಷರವ ಬರೆದಂತೆ!
ಇಗೊ ಇತ್ತ ಸಂಧ್ಯಾವಾತ, ಇತ್ತಿಂದತ್ತ, ಅತ್ತಿಂದಿತ್ತ
ಇಂಡಿಯಾದಿಂದ ಬ್ರೇಝಿಲ್‌ದತ್ತ, ಮತ್ತಿತ್ತ
ಬೇಸರಿಲ್ಲವೊ ಇದಕೆ?
ಕಟ್ಟಕೊನೆ ಮಾತು, "ನನ್ನ ಸೋದರರಿರಾ, ಅದು ಪ್ರೀತಿ! ಅಹಿಂಸೆ!"
ಕೇಳಬಂದವರ ಕಳ್ಳಜೇಬಿನಲಿ; ಮದ್ದು ತುಂಬಿದ-ಗನ್ನು
ಆ ಗುಂಪಿನಲಿ, ಸತ್ಯವಾಗಿ ನಿನ್ನ ಹತ್ತಿರ ಮಾತ್ರ 'ಗನ್ನು' ಇರಲಿಲ್ಲ
ಬಚ್ಚಿಡಲು ಕಳ್ಳ ಕಿಸೆ ಇಲ್ಲ, ಸುಳ್ಳಿಲ್ಲ.
ನಿನಗೆ ಮುಸುಕೇ ಇಲ್ಲ, ರಕ್ತದಾನಾಳ ಕೂಡ ಮುಕ್ತದ್ವಾರ
ಇನ್ನಿಲ್ಲ-ನಾಳಿಲ್ಲ; ಕಾಲನಾಳಲ್ಲ.
'ಆ ಜನ ದನ, ಅಷ್ಟೇ ತಾಯಿ'.

೮

ಸುತ್ತಲಿನ ಗಾಳಿ ಹೀರಿತು ನಿನ್ನ ಪ್ರಾಣ, ನಾನೊ ಇತ್ತ ಅರೆಜೀವ,
ಸಮವಸ್ತ್ರ ಇಲ್ಲ ಮೈಯಲ್ಲಿ, ಕೈಯಲ್ಲಿ ಇಲ್ಲ ನಿಶಾನಿ, ಈ ಹರಕು ಮುರುಕು ಜೀವ.
ಲೋಕಪಲಿ ನೀ ಬಂದೆ, ನನ್ನ ವಿದೇಹಿ, ತಂದೆ ಬರಿ ಆತ್ಮ, ನಿರ್ದೇಹಿ
ಸುಡಲು ಏನಿತ್ತಲ್ಲಿ?
ಭಾರತದ ಹೆಂಗಳೆಯರೆಲ್ಲ, ನಿಟ್ಟುಸಿರ ಸಿವುಡು ಕಟ್ಟಿ ಎಸೆದಂತೆ
ಬಾಗಿ ಬಿದ್ದರು ನೆಲಕೆ, ಚಿತೆಗೆ ಬೆಂಕಿಂಯನು ಇಟ್ಟಾಗ
ಆಗಲೇ ಗಂಗೆಪಾಲಾಗಿತ್ತು ನಿನ್ನ ಜೀವದ ನೀರು.
ಇನ್ನು ಉಳಿದಾ ಬೂದಿ, ನೀರಿನೊಡನೆ ಕಲಕಿ ಬೆರೆತಿತ್ತು
ಮುದ್ದಿನಂತಾಗಿತ್ತು ಮಿದ್ದಿದ ಮುದ್ದಿ
ಇಳಿದುಬಂದವು ಸೂರ್ಯಕಿರಣ, ಎತ್ತಿದವು ಜೀವನಪ್ರಾಣ
ಇಳಿಸಿದವು ದೇವನೊಡ್ಡಿದ ಬೊಗಸೆಗೊಯ್ದು-ಇಳಿಸಿದವು
'ಆ ಜನ ದನ, ಓ ತಾಯಿ'.

೯

ಏನಣ್ಣಾ! ನೀ ಕಂಡ ಜನ ಎಂಥವರು? ಎಂದು ಹೇಳುವೆ ದೇವನಿದಿರು?
ಎಲ್ಲೊ ಒಂದು ಕುರಿಮರಿಯು ಬ್ಯಾ ಎಂದು ದೇವರಿಗೆ ಮೊರೆಯನಿಟ್ಟಿತ್ತು
ಉಳಿದೆಲ್ಲ ಕಡೆಗೆ ದಪ್ಪದಪ್ಪನ್ನ ಅಕ್ಷರದಲ್ಲಿ ಸುದ್ದಿ, ಸುತ್ತು ಸಂಭ್ರಮವು
ಎತ್ತೂ ಮಂದಿ, ಝಗಝಗ ದೀಪ, ಕೋಪ, ಕ್ರೋಧ, ಉರಿಬೆಂಕಿ
ಮುಗಿದ ಕೈಗಳಲಿ ಮುಚ್ಚಿದ ಡೊಣ್ಣೆ!
ಕೂಗಾಟ, ಘೋಷ-ರೋಷ, ಸಿಮೆಂಟುಮನೆ ಗೋಡೆ ಅದರಿದವು.
ಸತ್ತ ಸಜ್ಜನನೊ "ದೇವರೇ, ಕ್ಷಮೆಮಾಡು, ಕೊಲೆಗಡಕರಾರೇ ಇರಲಿ;
ಸರ್ವೇಜನರು ಸುಖವಾಗಿರಲಿ" ಎಂದು ರಾಮನಲಿ ಮೊರೆಯಿಟ್ಟು ಪ್ರಾಣಬಿಟ್ಟ,



೧೦

ಆಯ್ತು ಸೋದರಿಕೆ ಒಪ್ಪಂದ ; ಸದ್ದಡಗಿ ಬಯಲ ಲಯ ಕಂಡಿತಾಗಲೇ
ನನ್ನ ಕೈದೋಟದಲ್ಲಿರುವ ಹೂವು ಕೂಡ ಉದುರಿದವು.
ಇನ್ನು ಏಕಾಂತಕ್ಕು ನನಗೂ ನಂಟು, ಬಂದವು ಮೋಡ, ಮುಸುಕಿದವು
ಗಾಳಿ ತಂದವು ಮೋಡ, ನೋಡನೋಡಾ ಆನೆಯಾ ದಂಡು ನೆರೆದಂತೆ
ಓಡಿರೋ, ಬದುಕಸಿರಿ, ನಿಮ್ಮ ಬುದುಕಿಸಿದ ಸಾಧು ಸಜ್ಜನನನ್ನು
ನನ್ನ ತೋಳುಗಳಲ್ಲಿ ಇಳಿದಿತ್ತು ಆವೇಶದವತಾರ
ನನ್ನ ಈ ಹೃದಯಕ್ಕು ನಿನ್ನ ಹೃದಯಕ್ಕು ಏನಿತ್ತೊ ಭಾವ-ಸಂಬಂಧ
ನಿನ್ನ ನೆತ್ತರು ಅಲ್ಲಿ ಚೆಲ್ಲಿರಲು, ಕುದಿದಿತ್ತಿಲ್ಲಿ ನನ್ನ ಕಣ್ಣೀರು
ಬೀಸಿತ್ತು ದುರ್ವಾಸನೆಯ ವಾತ, ಕೊಲೆಯ ನಾರುವ ನಾತ.
ಅಬ್ಬ! ಎಂದರು ಯಾರೊ, ಯಾರೊ ಅಬ್ಬರಿಸಿದರು.
ಮೋರೆದಿರುವಿದರು, ಕಿವಿಚಿದರು, ನಕ್ಕರು ಯಾರೊ.
ಆದರೂ ಅವರಸ್ನಟ್ಟಿತ್ತಾಗಾಳಿ ಮನೆಮನೆಯ ಹೊಕ್ಕರೂ
ಸಿಕ್ಕವರು ಸಿಕ್ಕಲ್ಲಿ. ಮುಂದೆ ಸಾಗಿತ್ತು ರಥ.
ಹತ್ತಿತ್ತು, ಹೊತ್ತಿತ್ತು ಬೆಂಕಿ, ಗಾಳಿ ಬೀಸಿದಲ್ಲಲ್ಲಿ, ನಸುತುಸು ಬೂದಿ
ಎಲ್ಲೆಲ್ಲು. ಇನ್ನು ಇರುಳಾಗುವುದು, ಕತ್ತಲೆಯು ಕವಿಯುವುದಿಲ್ಲಿ
ಬಿಗಿ ಹಿಡಿವವರಾರು? ಒತ್ತರಿಸಿತ್ತು ಒಟ್ಟದ ದುಃಖ ನೆರೆನೆರೆಯಾಗಿ
ನುಗ್ಗಿತ್ತು ದುಃಖದಪೂರ, ಎಲ್ಲಿಯ ಶಾಂತಿ, ಭ್ರಾಂತಿ?
ಕಟ್ಟಿದ್ದ ಒಡ್ಡು ಕೊಚ್ಚಿಹೋದವು.
ದೇವರೂ ಕೂಡ ಕೊನೆಗೆ ಅಂದಾನು 'ಮಗನೆ, ಆ ಜನ-ದನ'

೧೧

ದುಡಿದು ದಣಿದೆವು ನಾನೂ ನೀನು, ಹೋಗಲಿ ಬಿಡು ಪ್ರಳಯದತ್ತ
ಆ ಜಲಧಾರೆ, ಕಡಲೆಲ್ಲ ಕುದಿದೀತು ಆ ಕಣ್ಣೀರ್ಕುಡಿದು
ಮತ್ತೆ ಹುಟ್ಟು ಮತ್ತೆ ಸಾವು, ಬುದ್ಧಿಯ ಉದಯವಾಗುವವರೆಗೆ,
ಬಾ ಇಲ್ಲಿ, ನನ್ನ ನೀಲ ನಭದಿಂದ ನೋಡಲ್ಲಿ, ತಪ್ಪಿನ ಮೇಲೆ ತಪ್ಪು
ದಿಕ್ಕೆಟ್ಟ ಕಾಳಗದ ಮೇಲೆ ಕಾಳಗ, ಅಳಿಸಿಹೋಗಲಿ ಎಲ್ಲಾ.
ಹೊಸ ಪಾಟ, ಹೊಸ ಲೆಕ್ಕ, ನನಗೂ ಸಾಕಾಯ್ತು, ನಾ ಕೂಡ
ಕಣ್ಣು ಮುಚ್ಚುವೆನು, ಅದಕಾಗಿಯೇ ನಾನು ಆದೇಶವಿತ್ತಿದ್ದೆ
ಅವನೆಲಬು ಮುರಿವಂತೆ! ಹಿಂಸೆ ಹೊಕ್ಕಿರಲಲ್ಲಿ.
ನಿನಗೊ ಬೇಕಿತ್ತು ಮಾನವಸೇವೆ. ಎಲ್ಲಿಹುದೊ ಮಾನವಜಾತಿ ?
ಕೊನೆ ಉಸಿರು ಬೆರಿಸು ನನ್ನಲ್ಲಿ, ಮತ್ತೆ ಎಂದಾರೆ ಅಂದಾರು
ಈ ದನ-ಜನ, ದೇವರೇ! ಕಣ್ತೆರಯೋ, ಕಳಿಸು ನಿನ್ನ ಮಹಾತ್ಮ.
ಚಿತೆಯಲ್ಲಿ ಎದ್ದ ಉರಿ, ಉರಿಯ ನಾಲಿಗೆಯಲ್ಲು, ದೇವದೇವನ
ಒಂದೇ ಮಾತು. ಈ ಮಹಾತ್ಮನ ಎಲುಬಿನ ಬೂದಿ
ಬಿತ್ತಿದಲ್ಲಲ್ಲು, ಬಿದ್ದಲ್ಲಲ್ಲು, ತಲೆ ಎತ್ತಿರಲಿ -
ಕಮಲದ ಕಾವು, ಕೆಂಪು ಗುಲಾಬಿ, ಸಾವಿರದ ಸಾವಿರ ಹೂವು
ಓ ಮಹಾತ್ಮ! ಮಹಾತ್ಮ!

ಭಾವ : ಮಹಾತ್ಮಾ ಗಾಂಧಿಯವರನ್ನು ಕುರಿತು ಇದ್ದ ಒಂದು ಪದ್ಯದ ಭಾವಾನುವಾದ. ಧಾರವಾಡ ಆಕಾಶವಾಣಿ ಪ್ರಸಾರಕ್ಕಾಗಿ ರಚಿಸಿದ್ದು.



೩೦ ಭಾವ-ಭಾಷೆ

೧

ಭಾವ ಭಾಷೆಗೆ ಮೂಲ; ಭಾಷೆ ವೇಷಾವೇಶ
ನಾಡಿಗಳ ಬಡಿತದಲು ಭಯವುಂಟು ನಯವುಂಟು
ವಿನಯ ಅನಯದ ಜತಿಗೆ ಲಯ ವಿಲಯ ಗತಿಯುಂಟು
ಬಯಲ ಆಲಯದಲ್ಲು ಆ ಅನಾಹತ ಸ್ಪಂದ
ಮುಕ್ತಿಗೂ ಸ್ವಚ್ಛಂದ ಲಹರಿ ಲಹರಿಯ ನಂಟು
ನಿಃಶಬ್ದದಲ್ಲಿಯೂ ಶ್ರುತಿಗೆ ಇದೆ ಸದ್ವಿಷಯ
ಬಂಧ ವಿಚ್ಛೇದದಲಿ ಪ್ರಚ್ಛನ್ನ ಪ್ರಳಯವಿದೆ.

೨

ಅರಿವು ಆರಿದ ಮರೆವು ಶಕ್ತಿ ರಹಿತದ ಇರವು
ಸಂಬಂಧನಾಸ್ತಿಕ್ಯ-ಆಸ್ತಿಕ್ಯದಡಿಗಲ್ಲೇ ?
ಎಲ್ಲೆ ಎಲ್ಲೇ ಇರಲಿ ಎಲ್ಲೆ ಇರದೇ ಇರಲಿ
ಅರಿವು ಇಂಗಿದ ಇರವು ಮಾತು ಮಾತಿನ ಮಲಕು
ಹುಟ್ಟುತ್ತಲೇ ಅತ್ತು ಶಂಖವೂದಿದ ಜೀವ
ಬರೆಯದಿರುವದು ಸಾಧ್ಯ; ಒರೆಯದಿರುವದಸಾಧ್ಯ !

೩

ಅರಿವು ಅಡಗಿದ ಇರವು ಅದುವೆ ಸೃಷ್ಟಿಯ ಹರವು
ದ್ರವದ ನೆಲೆ ಉಸಿರಿನಲೆ, ಘನದ ಘನಘನ ಮಹಿಮೆ
ಘನ ಅಂಗ, ಘನ ಲಿಂಗ, ಘನವು ಕೂಡಲ-ಸಂಗ
ಮಾತಿಗೂ ಮೌನಕ್ಕೂ ಜಾತಿ ವೈರವು ಇಲ್ಲ
ಮೂಕನಲು ಕಿವುಡನಲು ಮೌನಿಯಲು ನಾದವಿದೆ.

ಭಾವ : ಭಾಷೆ ಎಂಬುದು ಮಾತು. ಮೌನ ಎಂಬುದು ಭಾವ. ಮೂಕ, ಕಿವುಡ ಮತ್ತು ಮೌನಿಗೂ ಭಾವ ತಿಳಿಯುತ್ತದೆ. ಭಾಷೆಗಿಂತ ಭಾವ ಶ್ರೇಷ್ಠ.

ಶಬ್ದಾರ್ಥ : ಇರವು=ಅಸ್ತಿತ್ವ ಅರಿವು=ಜ್ಞಾನ. ಹರಿವು=ಆನಂದ. ಮಲಕು=ತೊಡಕು, ಗಂಟುಗಂಟಾದ ಬಗೆ.

೩೧ ವಾಸನಿ

೧
ಎಷ್ಟು ಮರಾ, ಅಷ್ಟು ಥರಾ
ಬೀಜದಾಗ ಅಡಗಿದ್ದು ಬಯಲಿಗೆ ಬಂದಽ ಬರ್‍ತದ
ಅದೇ ಅದೇ ಅದೇ ಅಂದ್ರೂ
ಬೇರೆ ಇದ್ದೇ ಇರ್‍ತಽದ.
೨
ಹೂವಿನೊಳಗ ಇರೋ ವಾಸನಿ
ನೋವಿನೊಳಗೂ ಒಮ್ಮೊಮ್ಮೆ ತೋರತಽದ
ಹಿಡತಕ್ಕ ಸಿಗದಽ ಹಾರತಽದ
ಯಾವುದೋ ಬಯಲಾಗ.
೩
ಬೆನ್ನಹತ್ತಿ ಹಾರಬೇಕೋ
ಹೆಜ್ಜಿ ಸುಳವು ಹತ್ತೋದಿಲ್ಲಾ
ಉಸಿಲಿನ ಸುಯಿಲಾಗ
ನೆನಿಸಿಕೊಂಡರಽ ಆರತಽದ
ಯಾವುದೋ ಹೋರ ಸೇರತಽದ
ದೀಪದ ಕುಡಿಹಾಂಗ.
೪
ಉಜ್ಜೀ ಉಜ್ಜತೇವಿ ಮಬ್ಬಿನ ಮಕ್ಕು
ಇದ್ದಽ ಇರತಽದ ಕತ್ತಲೀ ಕೆಚ್ಚು
ಕಿಚ್ಚು ಆಗತಽದ ನೂರು ನುಚ್ಚು
ತೆಯ್ದೆ ತೆಯ್ದಾಂಗ
ಹಾಂಗ ಬಳಿ, ಹೀಂಗ ಎಳಿ
ಹ್ಯಾಂಗ್‍ಹ್ಯಾಂಗೋ ಬಣ್ಣದ ಸುಳಿ
ಥಕ್ಕನ ಮೂಡತಽದ ಯಾವುದೋ ಮುಖ
ಬೆಂಕಿ ಸಿಡಿಧಾಂಗ.

೫
ಎಲ್ಲೆಲ್ಲೂ ಬಟಾಬಯಲು
ನಮಗ ನಾವs ಇರೋದಿಲ್ಲಾ
ಇದ್ದದ್ದಿರತsದ ಅಂತರಾಳಿ
ಗಾಳೀ ಒಳಗ ಹಾರತಿರೋ
ಜೇಡನ ಬಲಿಹಾಂಗ
ಯಾವುದನ್ನ ಯಾವುದು ಹಿಡೀತದೋ ?
ವ್ಯವಹಾರ ಹ್ಯಾಂಗ ನಡೀತದೋ ?
ನೂಲಿಗೆ ನೂಲು ಕೂಡತsದ
ಭಾವದಾಗ ಭಾವ ಮೂಡತsದ.
೬
ಗುದ್ದಲಿ ಮೊನೀ ಸೆಲೀ ಚಿಮ್ಮಿ
ಛಕ್ ಅಂತ ಚಿತ್ರಿಸತsದ
ಮರತುಹೋದ ಕನಸಿನ ಮ್ಯಾಲಿನ
ಸಿಪ್ಪೀ ಸುಲಿಧಾಂಗ.
೭
ಬೇರಬಿಟ್ಟು ಬ್ಯಾರೆ ಇರತsದ ಏನು?
ಕನ್ನಡಿ ಅಂಬೋದು ಬೇಕ ಯಾಕ?
ಕಣ್ಣಿಗಿದ್ದಾವಗs?
ನೀರ ಬ್ಯಾರೇ ನೆರಳ ಬ್ಯಾರೆ
ಪದರು ಬಿಟ್ಟು ಸದರಿಲ್ಲಾ
ನಿಧಿ-ವಿಧಿ ಬ್ಯಾರೆ ಅಲ್ಲಾ
ತಣ್ಣಗಿದ್ದಾವಗs.

ಭಾವ : ತನ್ನ ತಾನು ಅರಿಯುವ ವಾಸನೆ-ಇಚ್ಛೆ ಪ್ರಬಲವಾದಾಗ, ಸಾಕ್ಷಾತ್ಕಾರ ತಾನೇ ಸಂಭವಿಸುತ್ತದೆ. ಅದು ಅದ್ವೈತ ಭಾವ. ಬಿಂಬ ಮತ್ತು ಪ್ರತಿಬಿಂಬ ಒಂದೇ.

೩೨ ಚತುರ-ವಾಣಿ

೧
ಚತ್ವಾರಿ ಶೃಂಗಾಃ। ನಾಕು ಕೋಡು
ಇದು ನಮ್ಮ ಧನ
ದನದಂತೆ ದಿನದಂತೆ
ಜನಕೆ ಜನನದ ಕೋಡು-ನಾಕ
ಮುದ್ದು ನಾಕು
ಅಷ್ಟೇ ಸಾಕು.
೨
ಇದು ಹೇಯವೋ? ಶ್ರೇಯವೋ?
ಶೃಂಗಾರವೋ? ಬೀಭತ್ಸವೋ?
ರಾಗವೋ? ವಿರಾಗವೋ?
ಇದು ನಮ್ಮ ಶೃಂಗಾಪತ್ತಿ! ಸಂಪತ್ತಿ।ಆಪತ್ತಿ
ಹತ್ತಿ ಹತ್ತಿ
೩
ನೂಲಾಯ್ತು ಬತ್ತಿ ಬತ್ತಿ! ಸುಟ್ಟು ಅಂಗಾರ-ಈಬತ್ತಿ
ಇದು ಯಾವ ಆನಂದ? ಯಾವ ಪ್ರೀತಿ?
ಪರಮ ಪ್ರೇಮಾಸ್ಪದತ್ತ್ವಂ, ಆನಂದತ್ತ್ವಂ
ಅಂದ-ಅಭಿನವಗುಪ್ತ
ಅಂದತ್ತ.
೪
ಉಂಡ ಅನ್ನ ರಸವಲ್ಲವೋ
ಪಚನದ ಪಾಕ! ಆ ಶಾಕ
ಅಲ್ಲಿದೆ ಕಸುವು-ಹಸಿವು-ಓಜ-ತೇಜ
ಅದು ನಮ್ಮವೀರ್ಯ!
ಓ ಕಾರ್ತವೀರ್ಯ!

೫


ಕತ್ತರಿಗೆ ಈಡು ಮಾಡದಿರು
ನಿನ್ನ ಹೊಲಿಗೆಯ ಕಸುಬು
ಹೊಲ ಹೊಲವ ಹೋಳು ಮಾಡದಿರು
ಹೊರಗೇರಿ ಹೊಲೆಯನೆಂದು
ನಾ ತಿಳಿದೆ ಬೆಲೆಯನಿಂದು
ಮತ್ತೆ ನಿಂದು, ಮತ್ತೆ ನಿಂದು
ಕೃತಕೃತ್ಯ ಎಂದೂ ಒಂದು
ಪರಶು, ಚಾಪಾಂಕುಶನೆ, ಮೋದಕಪ್ರಿಯನೆ !
ಪದಪದಕೆ ಅಂಕಿ ಅಂಕಿ
ಇದು ತಿಳಿಯಲಾರದ ಬೆಂಕಿ-
'ಚತ್ವಾರಿ ವಾಕ್ ಪರಿಮಿತಾ'

ಭಾವ : 'ಚತ್ವಾರಿ ಶೃಂಗಾಃ, ಚತ್ವಾರಿ ವಾಕ್ ಪರಿಮಿತಾ' ಎಂಬ ಉಕ್ತಿಗಳು ಋಗ್ವೇದ ಕಾಲದ್ದು. ನಾಕು ಪ್ರಕಾರದ ರಕ್ತ ಎಂಬುದು ವೈಜ್ಞಾನಿಕ ಸತ್ಯ. ಗಣಪತಿ, ಸಂತತಿ, ಜನೆಟಿಕ್ ಕೋಡ ಇವುಗಳ ಅನ್ಯೋನ್ಯ ಸಂಬಂಧದ ಚಿಂತನೆ.

ಶಬ್ದಾರ್ಥ : ಶೃಂಗಾಪತ್ತಿ=ಉನ್ನತ ತೊಂದರೆ. ಈಬತ್ತಿ=ವಿಭೂತಿ. ಜನನದ ಕೋಡು=ಜನೆಟಿಕ್ ಕೋಡ್.

ವಿಶೇಷ : ನುಡಿ-೧ : ಜೀವ ಪ್ರಪಂಚದಲ್ಲಿ ಡಿ.ಎನ್.ಎ. ಹಾಗೂ ಆರ್.ಎನ್.ಎ. ಗಳು ಮನುಷ್ಯನ ಗುಣಲಕ್ಷಣಗಳನ್ನು ನಿರ್ಣಯಿಸುತ್ತವೆ. ಡಿಎನ್ಎ ನ್ಯೂಕ್ಲಿಯೋಟೈಡಗಳಲ್ಲಿ ಎ.ಜಿ.ಸಿ.ಟಿ. ಪ್ರತ್ಯಾಮ್ಲಗಳು ಮತ್ತು ಆರ್.ಎನ್.ಎ. ನ್ಯೂಕ್ಲಿಯೋಟೈಡುಗಳಲ್ಲಿ ಯು.ಎ.ಸಿ.ಜಿ. ಪ್ರತ್ಯಾಮ್ಲಗಳನ್ನು ಆಕರ್ಷಿಸುತ್ತವೆ. ಇವುಗಳ ಸಂಖ್ಯೆ ನಾಕು. ನ್ಯೂಕ್ಲಿಯಿಕ್ ಆಮ್ಲ ಮತ್ತು ಪ್ರೊಟಿನ್‌ಗಳಿಗಿರುವ ಸಂಬಂಧವನ್ನು ಅನುವಂಶಿಕ ಸಂಕೇತ ಭಾಷೆಗೆ ಜೆನೆಟಿಕ್ ಕೋಡ್ ಎಂದು ಕರೆಯುತ್ತಾರೆ. ಪ್ರೋಟೀನು ಆಕೃತಿಗಳು ನಾಲ್ಕು ವಿನ್ಯಾಸ ಪಡೆಯುತ್ತವೆ. ಆದುದರಿಂದ ಇವುಗಳ ಅಭ್ಯಾಸ ಮಹತ್ತ್ವದ್ದು ಎಂದಿದ್ದಾರೆ ಬೇಂದ್ರೆ.

ನುಡಿ-೩ : ಕಾವ್ಯ ಮೀಮಾಂಸೆಯ ನಿಪುಣ ಅಭಿನವಗುಪ್ತ ಮತ್ತು ಅಂದತ್ತ-(ಅಂಬಿಕಾತನಯದತ್ತ) ಇವರ ಕಾವ್ಯ ಚಿಂತನೆಯಲ್ಲಿರುವ ಸಾದೃಶ್ಯವನ್ನು ಬೇಂದ್ರೆ ಕಂಡಿದ್ದರು. ಅದು ಅವರಿಗೆ ಒಪ್ಪಿಗೆಯಾಗಿತ್ತು.



೩೩ ನಾನೋ ಮಹೀದಾಸಾ

೧

ನಾನೋ ಮಹೀದಾಸಾ। ಬೇರೆ ಅಲ್ಲಾ
ಮೈ ದಾಸನು। ನಾನೂ। ಸೂರ್ಯ ನಾ। ಸೂರಾ-ವೀರಾ।
ಕರ್ಣಾ। ಕರ್ಣದಲ್ಲಲ್ಲಾ। ಕಣ್ಣಿನ ಕುಣಿಯಲ್ಲೂ
ಕಣಕಣದಲ್ಲೂ-ಮಹೀದಾಸಾ.
ನಡೆನಡದಲ್ಲೂ। ನಡೂವಲ್ಲೂ
ಕಾನಡಾऽ। ಮಹಾರಾಟ್
ಮಹೀಭೋಜಾ। ರಾಜನ ತೇಜಾ.

೨

ಸೌರಾಷ್ಟ್ರऽ-ಮಹೀಕಂಠಾऽ
ವಿಂಧ್ಯಾದ್ರಿಯ ವಿತಳಾ
ರಸರಸವನು ಹಿಂಡೀऽ
ಪಾರಾವಾರದ ದಂಡೀ
ಗೋಕರ್ಣವ ಕಂಡೀ
ಕಾರಾ-ವಾರಾ-ಕರಾವಳಿ ತೀರಾ
ಫಣಿಕಾऽ-ವಣಿಕಾ-ಅಗಣಿಕಾऽ
ಕೇರಳೀ-ಶ್ರೀ ಶಂಕರ ಭೂಮಿ
ಕನ್ಯಾ ಕುಮಾರಿಗೆ ನಮಿಸಿ
ಕ್ಷಮೆಯನ್ನೇ ಕ್ಷಮಿಸಿ
ರತ್ನಾಕರಾ-ಅಪರಾಜಿತೇಶ್ವರಾ
-ನಾನೋ ಮಹೀದಾಸಾ.

೩

ಅತಳಾ-ವಿತಳಾ-ಸಪ್ತ ಪಾತಾಳಾ
ಏಳೂ ಹೆಡೆ ಎತ್ತೆ ಭೂ ಭುವನಾ ಹೊತ್ತೆ
ಧೂಪಾ-ಮಲಯಜ ಗಂಧಾ
ದೀಪಾ-ರತ್ನಾಗಿರಿಯಿಂದಾ
ಅರ್ಘ್ಯಾ-ಪಾದ್ಯಾ-ಗಂಗಾವಳಿಯಿಂದಾ.

೪

ಇಡೀ ನಾಗರಖಂಡಾ-ಅಖಂಡಾ
ಅಹಿರಾವಣನಲ್ಲಾ
ಮಹಿರಾವಣನಲ್ಲಾ
ಹಸಿ ಅಲ್ಲಾ, ಒಣಾ ಶುಂಠಿಯಲ್ಲಾ
ಶೃಂಗಿ ಬೇರೋ। ರಸದ್ರರಮಾವಲ್ಲಭ ತೇರೋ
ಸುಬ್ರಹ್ಮಣ್ಯಂ। ಸುಪ್ರತಿಷ್ಠಿತಮಸ್ತು
ನಿತ್ಯಾನಂದ ಪಾದಾಂಕಿತವುಸ್ತು.
ಕೊಡಲಿ। ಬಿಡಲಿ। ಆ ಪರಶು
ಶ್ರೀ ಗುರುವೆ। ದತ್ತಾವಧೂತಾ। ಹರಸು
ಸಹ್ಯಾದ್ರಿಯ ಬೆರಸು। ಆ ಖಂಡ ಪರಶೂ !
ನಾನೋ ಮಹೀದಾಸಾ
ಬೇರೇ ಅಲ್ಲಾ.
ಇತರಾ೭। ಎರಡಲ್ಲಾ। ಹೆರವೇ ಸಲ್ಲಾ
ನೆರವೇ ಲೇಸಲ್ಲಾ। ಗುರುವೇ ಬಲ್ಲಾ.

ಭಾವ : ದ. ರಾ. ಬೇಂದ್ರೆಯವರು ನೆಲದ ದಾಸನಾಗಿ ಬಾಳಲು ಇಚ್ಛಿಸುತ್ತಿದ್ದರು. ಯಾವುದೇ ಭೂಪ್ರದೇಶವಾಗಲಿ ನೀರಾಗಲಿ ಭೂಮಿಯನ್ನು ಬಿಟ್ಟು ಇಲ್ಲ. ನೀರಿನಲ್ಲಿಯ ರಸತತ್ತ್ವ-ಅಲ್ಲದಂತೆ ಜಾಗ್ರತವಾಗಿರಲಿ; ಶುಂಠಿಯಂತೆ ಒಣಗುವುದು ಬೇಡ. ಧಾರವಾಡದ ಶಾಲ್ಮಲಾನದಿ ಗುಪ್ತಗಂಗೆಯಾಗಿ ಗಂಗಾವಳಿಗೆ ಸೇರಿ ಸಮುದ್ರದಲ್ಲಿ ಕೂಡುತ್ತದೆ. ಹಾಗೆಯೇ ಬೇಂದ್ರೇಯವರ ಹೃದಯ ಸಮುದ್ರದಲ್ಲಿ ಅನೇಕ ದೈವತಗಳು ಮುಂಬೈಯ ವಜ್ರೇಶ್ವರಿಯ ನಿತ್ಯಾನಂದ ಸಂತರವರೆಗೂ ಮಿಲನಗೊಂಡಿವೆ. ಸಮುದ್ರವು ಅವಿಭಕ್ತಂ ವಿಭಕ್ತೇಷು-ಎಂಬುದಕ್ಕೆ ಉತ್ತಮ ಉದಾಹರಣೆ. ಈ ಕವನವನ್ನು ಸಾಮಛಂದದ ಆರೋಹ ಅವರೋಹ ಸಹಿತ ವಾಚನಮಾಡಬೇಕು.

ಶಬ್ದಾರ್ಥ : ಮಹೀ=ನೆಲ. ಪಾರಾವಾರ=ಸಮುದ್ರ. ಹೆರ=ಬೇರೆಬೇರೆ, ವಿಭಕ್ತ



೩೪ ನವ ವಿಸರ್ಗ

೧
ಕವಿಯ ಆತ್ಮ ಧ್ವನಿಕಾವ್ಯದಲ್ಲಿ ಬುಧ ಬುಧ ನಿವೇದಿಸಿದನು
ಹೃದಯವಂತ ಕಿವಿಗೊಟ್ಟು ಸವಿಗೆ ಎದೆಗೊಟ್ಟು ಭೇದಿಸಿದನು
ಇದರ ಅರಿವು ಇರದವರು ಉಂಟು ಸೋಗೆಯನೆ ಮೆಲ್ಲುವವರು
ಗಣಿಕೆ ಗಣಿಕೆ ಅಬ್ಬಬ್ಬ ಕಬ್ಬ ರುಚಿ ಎಂದು ಸೊಲ್ಲುವವರು.
೨
ನುಡಿಯಲ್ಲಿ ನಾದ, ತಿರುಳಲ್ಲಿ ಸ್ವಾದ, ಆ ಮೋದ ಆಗು-ಹೋಗೂ
ಅರಿವಿನಿರವಿನಲಿ ಇರವಿನರಿವು, ಓರಿ ಹಿಗ್ಗು ಈಗೂ-ಆಗೂ
ರವಿಯ ಕವಿದು ಉಳಿದಿತ್ತೆ ತಮವು; ಬಣ್ಣಿಸನೆ ರವಿಯ ಕವಿಯು
ಭಕ್ತಿ ಬಂತು ಭಗವಂತನಿಂದ, ಆ ಭಕ್ತನಾದ ಭವಿಯು.
೩
ಸ್ವಯಂಭುವಿನ ಸ್ವಾರಸ್ಯವಿರದ ಭವಭೂತಿಗೆತ್ತ ಭಾವ
ಕತ್ತಲುಂಟು ಬೆಳಕುಂಟು ಕುಂಟು ನೆಪವಲ್ಲ ಬೆಳಗುಜಾವ
ಅಹೋರಾತ್ರಿ ಹೋರಾಟ ಆಟ ಕಲ್ಪನೆಗು ಶಿಲ್ಪ ಉಂಟು
ಇತ್ತಂಡ ಜಲ್ಪ, ಮಹಮನೆಯ ಮಾತೆ? ಅಲ್ಪತೆಯು ಕವಡುಗಂಟು.
೪
ಅನುಭಾವವೇನು ನಾಟಕದ ಮಾತೆ? ಅಭಿನಯದ ಮುದ್ರೆ, ಬೇಕೇ?
ಹೃದಯಕ್ಕೆ ಹೃದಯ ಓಗೊಡುತಲಿರಲು ಆ ಕೂಟ ಸಾಕ್ಷಿ ಏಕೆ?
ನೆನವು ಮನವು ಅನುಭವ ವಿಭೂತಿ ಮನುಭವದ ಕವಚದಲ್ಲಿ
ಅವಚನೀಯ ಬೇರೇನೊ ಉಂಟು ವಚನೀಯ ಕವಚುವಲ್ಲಿ.
೫
ಅದೆ ನೋಡೊ ತಮ್ಮ ಧ್ವನಿ, ಧನಿಯ ಗುರುತು ಏಕಾಂತ ನಿಶೆಯ ಗೂಢ
ಪಿಸುಮಾತಿನಲ್ಲಿ ಹುಸಿಮಾತು ಇಲ್ಲಿ ಎಚ್ಚರವು ಇತ್ತು ಮೂಢ
ಆನಂದ ಬಡಿಸು ಆನಂದ ಉಣಿಸು, ಆನಂದ ಉಡಿಸು ತೊಡಿಸು
ಆ ಮೌನಗಬ್ಬ ಹಡೆದಾಗ ಕೂಸು, ತೊಡೆಯಲ್ಲೆ ಮುದ್ದನಿಡಿಸು.

೬
ನಸುಬುದ್ಧಿಯಾಚೆ, ತುಸು ಭಾವದೀಚೆ ಜೋಗುಳದ ಯೋಗದೀಕ್ಷೆ
ಆ ತನುವಿನಾಕೆ ಈ ತನುವಿನೀಕೆ ಉಭಯಕ್ಕೆ ರಸ ಸಮೀಕ್ಷೆ
ನಕ್ಷೆಯನು ಹಿಡಿದು ತಡಕಾಡಬೇಡ ನಕ್ಷತ್ರ ಮಾರ್ಗವನ್ನು
ತೊಂಡಮೋವರಿಗೆ ಹಾದಿ ಕೇಳದಿರು, ಹತ್ತು ದುರ್ಗವನ್ನು.

೭
ಶ್ರಾವಣದ ರಾತ್ರಿ, ಘನ ಮೇಘ ಜಾತ್ರಿ ಜಾಗರವು ಎಲ್ಲೊ ಏನೋ
ಕೇಳುವದೆ ಸದ್ದು ಸರಿಹದ್ದು ಮೀರಿ ಗುಂಗುಣುಗುಣುಗೂಡು ಜೇನೋ
ಅಧ್ವ ಅಧ್ವಕೂ ಮಧ್ವ ಸಂಘ ಒಳ ಬಗೆಗೆ ಪುಂಡರೀಕ
ತೊಂಡರಿರುವಲ್ಲಿ ಪುಂಡರಿಲ್ಲ, ಸ್ವಸ್ವಾಮಿ ಏಕರೇಖ!

೮
ಕಂಡಿದ್ದೆ ಕಿಂಡಿ, ನೈವೇದ್ಯ ತಿಂಡಿ, ನಿರ್ಮಾಲ್ಯ ಬದುಕು ಬಾಳು
ನೆನಿಸಿಗಿರುವ ಸುಖ ಕನಿಸಿಗಿಲ್ಲ ಅದು ಫಲಿಸುವನಕ ತಾಳು
ನೀನೆ ಬೀಜ, ನೀ ಬೊಡ್ಡೆ ಟೊಂಗೆ, ನೀ ಚಿಗುರು ನಿಗುರಿದೆಲೆಯು
ನೀನೆ ಹೂವು ನೀ ಕಾಯಿ ಹಣ್ಣು ಆನಂತ್ಯದೊಂದೆ ನೆಲೆಯು.

೯
ಭಕ್ತಿಮಾರ್ಗದಲಿ ಮುಕ್ತಿ ಬೇರೆ ಅರಸುವರೆ ಅರಸನಾಗಿ
ಕೈಂಕರ್ಯಕಾಗಿ ಕಾದಿರುವರುಂಟು ತಡೆ ನಿನ್ನ ಕರೆಸನಾಗಿ
ವಿರಹಾಗ್ನಿಯಲ್ಲೆ ರಸ ದಿವ್ಯಪಾಕ ಕರೆಸಿದನೋ ಕೇಳಲೇಕೆ?
ರಾಸಲೀಲೆಯಲಿ ಮಣ್ಣು ಪಾವನವು ಬೇರೆ ಹೇಳಬೇಕೆ?

೧೦
ಇಗೊ ವೃಂದೆಯೆಂದೊ ಮಣ್ಣಾದಳಣ್ಣಾ ಆ ಯಮುನೆ ಹಣ್ಣು ನೀರು
ಆಗೊ ತುಳಸಿ ಸೊಪ್ಪು, ಕೊಳಲ ಬಿದಿರು, ತೂತಾದ ಕಾಡು ಬೇರು
ಗೋಪ ಗೋಪಿಯರು ಗೋವು ಕೂಡ ಋಷಿವೃಂದ ಒಂದು ಮಂದಿ
ಭಟ್ಟಂಗಿಗಾಳಿ, ಓ ವಂಧಿಮಾಗಧರು ಬಯಲ ಸಂದಿಗೊಂದಿ.

೧೧
ಭಾಷೆ ಏಕೆ ಬರಿ ಧ್ವನಿಯು ಸಾಕು, ಆ ಅಲಂಕಾರ ನೂಕು
ರೀತಿಗೀತಿ ಕೊಂಡಾಟ ಬೇಡ, ಗುಣಗಣದ ಪೋಕಿ ಶ್ಲೋಕು
ಭಾವವೇನು ಎಣಿಸಾಟ ಉಂಟೆ? ಆ ಛಂದ ಗತ್ತುಗಿತ್ತು
ಒಂದೆ ನಾಮದಲಿ ಪ್ರಣವಧಾಮ ಅಡಗಿತ್ತು ಇಲ್ಲಾ, ಇತ್ತು.

೧೨
ಇದೆ ಅದೆಯೊ ಕಾಣೊ, ಓ ಜೀವ ಆತ್ಮ ಆ ಸ್ಫೋಟ ಸ್ಫೂರ್ತಿಸ್ಪಂದ
ಇರಇರುತ ತುಂಬು ನಂಬಿಗೆಯ ಬಿಂಬ ಆ ಸ್ತಂಭ ಮೂರ್ತಿಬಂಧ
ತೆರವುಂಟು ಎಲ್ಲಿ, ನೆರವುಂಟು ಅಲ್ಲಿ, ಎರವುಂಟೆ ತೆರೆಗೆ ಮರೆಗೆ
ಕಲ್ಪಾನುಕಲ್ಪ ಆ ಶೇಷತಲ್ಪದಲಿ ಸೃಷ್ಟಿಸ್ವಪ್ನ ಹರಿಗೆ.

೧೩
ನೇಸರನ ಮಣ್ಣು ಸಾವಿರದ ಕಣ್ಣು ಗಣಪತಿಯ ವರ್ಣವರ್ಣ
ಮಾತಾಯಿ ತನ್ನ ಬಸಿರಲ್ಲಿ ಕಾಸಿ ಮೂಸಿಸಿದ ಘನ ಸುವರ್ಣ
ಸ್ಥಿತಿಲಯದ ಜೋಡಿ ಹರಿ-ಹರನು ಕೂಡಿ ಮೂಡಿತ್ತು ಚಾರುಸರ್ಗ
ಉದ್ಭವಕೆ ನೆಲೆಯು ಹೃದಯಾರವಿಂದ, ಉದಿಸಿತ್ತು ಹೊಸ ವಿಸರ್ಗ.

ಭಾವ : ಕವನದ ಆತ್ಮ ಧ್ವನಿ. ಧ್ವನಿಕಾವ್ಯಸೃಷ್ಟಿ ಒಂದು ವಿಶಿಷ್ಟ ಹೊಸ ಸೃಷ್ಟಿ. ಅದಕ್ಕೆ ಅಲಂಕಾರ, ರೀತಿ, ಗುಣಗಣಗಳ ಅವಶ್ಯಕತೆ ಇಲ್ಲ. ಅದು ನಿರಾಭರಣ ಸುಂದರಿ.

ಶಬ್ದಾರ್ಥ : ಅಹೋ+ರಾತ್ರಿ=ಹಗಲು+ರಾತ್ರಿ. ಜಲ್ಪ=ಅಸ್ಪಷ್ಟ ಹಾಗೂ ಅಸಂಬಂಧ ಮಾತು. ಕೂಟ ಸಾಕ್ಷಿ=ಪ್ರತ್ಯಕ್ಷ ಪ್ರಮಾಣ. ಕವಚು=ಕೆಳಗು ಮೇಲು ಮಾಡು. ತೊಂಡು=ತುಂಟತನ, ಸ್ವೇಚ್ಛಾ ಪ್ರವೃತ್ತಿ. ತೊಂಡ=ಸೇವಕ, ದಾಸ. ನಿಗುರು=ನೆಟ್ಟಗಾಗಿ. ಕರೆಸನಾಗಿ=ಕರೆಸನು+ಆಗಿ=ಆಮಂತ್ರಿಸದವನಾಗಿ. ಷೋಕಿ=Show+ಕಿ=ತೋರಿಕೆಯವನು. ಝೋಕಿ=ತೂಗಾಟದ ಲಾವಣ್ಯಉಳ್ಳ.



ಡಾ|| ದ. ರಾ. ಬೇಂದ್ರೆಯವರ ಜೀವನ ಕಥೆಯ ಹಂದರ

ಜನನ-ವಿವಾಹ

೩೧-೧-೧೮೯೬	:	ಮಾಘವದ್ಯ ಪ್ರತಿಪದಾ-ಗುರುಪ್ರತಿಪದಾ, ಮನ್ಮಥನಾಮ ಸಂವತ್ಸರ-ಧಾರವಾಡ, ಪೋತನೀಸ ಓಣಿಯಲ್ಲಿ ಜನನ.
೧೮೯೯	:	ನೀರಕುತ್ತು ದಾಟಿತು. ಜೇಷ್ಠವೋ ಶ್ರಾವಣವೊ ಇರಬೇಕು. ಹಾಲಗೇರಿ ಕೆರೆಯಲ್ಲಿ ಬಿದ್ದು ಪಾರಾದದ್ದು.
೧೯೦೭	:	ತಂದೆ-ರಾಮಚಂದ್ರ ತೀರಿಕೊಂಡರು.
೧೯೦೨-೧೯೧೩	:	ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕ್ ಪಾಸಾಗುವವರೆಗೆ.
೧೯೧೩	:	ಅಜ್ಜಿ-ತಾಯಿಯ ತಾಯಿ. ಗೋದುಬಾಯಿ ತೀರಿಕೊಂಡರು,
೧೯೧೪	:	ಪುಣೆಯ ಫರ್ಗ್ಯುಸನ್ ಕಾಲೇಜು ಸೇರಿದ್ದು.
೧೯೧೬-೧೭	:	ವಿವಿಧ ಛಂದಸ್ಸುಗಳಲ್ಲಿ, ಕನ್ನಡ, ಮರಾಠಿ, ಇಂಗ್ಲೀಷ್ ಹಾಗೂ ಸಂಸ್ಕೃತದಲ್ಲಿ ಕವಿತಾ ರಚನೆ ಹಾಗೂ ಶ್ರೇಷ್ಠ ಕವಿಗಳ ಕವನಗಳ ಅನುವಾದ.
೧೯೧೮	:	ಬಿ. ಎ. ಪದವಿ. ಜೂನ್ ೪ರಂದು. ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕ. (ಈಗಿನ ವಿದ್ಯಾರಣ್ಯ ಹೈಸ್ಕೂಲು)
೧೯೧೯	:	ಲಕ್ಷ್ಮೀಬಾಯಿ ಅವರೊಂದಿಗೆ ಹುಬ್ಬಳ್ಳಿಯಲ್ಲಿ ವಿವಾಹ. 'ವಾಗ್ಭೂಷಣ' ಸಂಪಾದಕ ವರ್ಗದಲ್ಲಿ ಸೇರ್ಪಡೆ.

ಸಂತತಿ

೧.	:	ಕ್ಷೇಮೇಂದ್ರ (ಜನನ : ೧೯೨೨ ಧಾರವಾಡ; ಮರಣ ; ೧೯೨೩) ಮೊದಲಿನ ಫಲವೊಂದು ಮೀಸಲು ಮಣ್ಣಿಗೆ.
೨.	:	ರಾಮು (ಜನನ ೧೯೨೪ ಹಾನಗಲ್ಲ : ಮರಣ ೧೯೪೪) ಹುಸಿನಗುವ ಕೂಸಿನ ಹೊಸ ಹೊಸ ಆಟಿಕೆ.
೩.	:	ಭಾಸ್ಕರ (ಜನನ ೧೯೨೭ ಧಾರವಾಡ ; ಮರಣ ೧೯೨೭) ಭೆಟ್ಟಿಗೆ ಬಂದನು ಹೊಸದೊಬ್ಬ ಕಂದನು ಅಥಿತಿಯೋ ಎಂಬಂತೆ.
೪.	:	ಪಾಂಡುರಂಗ (ಜನನ ೧೯೨೮, ಧಾರವಾಡ) ಹುಡುಗನ ಒಡನಾಟವು ಹುಡುಗಾಟ ಮಾಡಿದವು.
೫.	:	ಲಲಿತಾ (೧೯೩೪, ಧಾರವಾಡ; ಮರಣ ೧೯೩೪) ಆ ಕೂಸ ಕಳಕೊಂಡು ನೀನೆಂತೊ ಉಳಕೊಂಡು ಲಾಲಿತ್ಯವಿಲ್ಲದ ಶೈಲಿಯೊಲು. 'ನೀ ಹಿಂಗ ನೋಡಬ್ಯಾಡ ನನ್ನ' ಕವನದ ವಸ್ತು
೬.	:	ವಾಮನ (ಜನನ ೧೯೩೫, ರಾಣೆಬೆನ್ನೂರು)
೭.	:	ಪ್ರೇಮಾ (೧೯೩೭, ಧಾರವಾಡ; ಮರಣ ೧೯೩೭)
೮.	:	ಮಂಗಲಾ (೧೯೩೯, ಧಾರವಾಡ)
೯.	:	ಆನಂದ (ಜನನ ಧಾರವಾಡ; ಮರಣ ೧೯೪೪)

೧೯೨೨ : ದಾವಣಗೇರಿಗೆ ಸಮ್ಮೇಲನಕ್ಕೆ ಹೋದದ್ದು.

೧೯೨೩ : ವಿಜಾಪೂರದ ಸಾಹಿತ್ಯ ಸಮ್ಮೇಲನಕ್ಕೆ ಹೋದದ್ದು. 'ಜಯ ಕರ್ನಾಟಕ' ಪತ್ರಿಕೆಯೊಂದಿಗೆ ಸಂಬಂಧ, ಮಧುರಚೆನ್ನರ ಭೆಟ್ಟಿ.

೧೯೨೪ : ತಾಯಿ-ಪಾರ್ವತಿ-ಅಂಬಿಕೆ ತೀರಿಕೊಂಡದ್ದು
ತಾಯಿ ಗಿಡವು ಮಾಯವಾಯಿತಲೇ!
'ಜೆನುಹುಟ್ಟು' ಕೈ ಬರಹ ಪತ್ರಿಕೆ ಎಳೆಗೆಳೆಯರಾದ ವಿದ್ಯಾರ್ಥಿಗಳ ಮೂಲಕ ಹೊರಡಿಸಿದ್ದು.

೧೯೨೫ : ಬೇರೆ ಶಾಲೆಗೆ ಶಿಕ್ಷಕನಾಗಿ ಹೋಗಲು ಸುತ್ತಾಡಿ ಮತ್ತೆ ವಿಕ್ಟೋರಿಯಾ ಹೈಸ್ಕೂಲಿನಲ್ಲಿಯೇ ಶಿಕ್ಷಕ.

೧೯೨೬ : 'ಸ್ವಧರ್ಮ' ಪತ್ರಿಕೆಯ ಸಂಪಾದಕರು.
ಗೆಳೆಯರ ಗುಂಪಿನಿಂದ ನಾಡ ಹಬ್ಬ ಪ್ರಾರಂಭ.

೧೯೨೮ : 'ನನ್ನದು ಈ ಕನ್ನಡ ನಾಡು' ಕವನ ಸಂಗ್ರಹದ ಸಂಪಾದಕರು.

೧೯೨೯ : I) ಕಕ್ಕ ಬಂಡೋಪಂತ ಬೇಂದ್ರೆಯವರು ದ. ರಾ. ಬೇಂದ್ರೆಯವರಿಗೆ ೫-೧೧-೧೯೨೯ ರಂದು ವಾಸಕ್ಕಾಗಿ ಸಾಧನಕೇರಿಯಲ್ಲಿ ಒಂದು ಮನೆಯನ್ನು ಕಾಣಿಕೆಯಾಗಿ ಕೊಡಿಸಿದ್ದು. ೧೩, ಶ್ರೀಮಾತಾ, ಸಾಧನಕೇರಿ, ಧಾರವಾಡ - ನಿವಾಸ.
ಮಲೆನಾಡ ಸೆರಗಿನ ನೆರೆಗಿದ್ದ ಮನೆಯೊಂದು ಮಮತೆಯ ಕುರುಹಾಗಿ ತಾ ದೊರಕಿತು.

II) ಬೆಳಗಾವಿಯ ಸಮ್ಮೇಳನದಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ' ಕವನ ವಾಚನ.

III) ೧೧-೧೧-೧೯೨೯ ರಂದು ಶ್ರೀ ಆಲೂರ್ ವೆಂಕಟರಾವ್ ಇವರಿಂದ 'ಜಯ ಕರ್ನಾಟಕ' ಕೊಂಡದ್ದು. ಸಂಪಾದಕರಾಗಿ ಕಾರ್ಯ ನಿರ್ವಹಣೆ.
'ಜಯ ಕರ್ನಾಟಕ'ವೆನ್ನುತ ಗೆಳೆಯರ ಕನ್ನಡದಾಸೆಯು ಗುಡಿಕಟ್ಟಿತು.
'ನರಬಲಿ' ಕವನವು ಬಲಿಮಾಡಿತೆನ್ನನು, ಹೆಳವನಿದ್ದಲ್ಲಿಗೆ ಹೊಳೆ ಬಂದಿತು.

೧೯೩೦ : 'ಹಕ್ಕಿ ಹಾರುತಿದೆ' ಕವನ ಸಂಗ್ರಹದ ಸಂಪಾದಕರು.

೧೯೩೨ : ಹಿಂಡಲಗಿ ಜೇಲುವಾಸ. ಮುಗದ ಎಂಬ ಹಳ್ಳಿಯಲ್ಲಿ ದಿಗ್‌ಬಂಧನವಾಸ.
ಪ್ರಾಣದ ಒಗರಷ್ಟು ಹಿಂಡಿತು ಹಿಂಡಲಗಿ, ಮುಗದದ ಮಳೆಗಾಗಿ ಮುಂದೆಳೆದಿತು.

೧೫-೮-೧೯೩೩ : 'ಜಯ ಕರ್ನಾಟಕ' ಸಂಬಂಧ ಮುಕ್ತಾಯ. ಗೆಳೆಯರ ಗುಂಪಿನ ಸ್ಫೋಟ, ವಿಘಟನೆ.

೧೯೩೩ : ಎಂ. ಎ. ಅಭ್ಯಾಸಕ್ಕಾಗಿ ಪುಣೆಗೆ ಪ್ರಯಾಣ.
'ಪುಣೆಯಲ್ಲಿ ಕಳೆದಂಥ ಅಜ್ಞಾತವಾಸವ ನೆನೆದರೆ ಮೈಯೆಲ್ಲ ಜುಮ್ಮೆನ್ನುತ್ತ'

೧೯೩೫ : ಎಂ. ಎ. ಪದವಿ ಪಡೆದದ್ದು ಮುಂಬೈಯಲ್ಲಿ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನಕ್ಕೆ ಅಧ್ಯಕ್ಷ.

೧೯೩೫-೪೦ : ಡಾ|| ಮಾಸ್ತಿಯವರ ಸಹಾಯ ಹಸ್ತ ಲಭಿಸಿದ್ದು.ದೈವದ ಕೃಪೆಯೆಂದು ಅದ ತಿಳಿದೆನು.

೧೯೩೬ : ವಿಜಯನಗರ ಷಟ್ ಶತಸಾಂವತ್ಸರಿಕ ಉತ್ಸವದ ಕೆಲಸಕ್ಕಾಗಿ ಹೈದರಾಬಾದ ಪ್ರವಾಸ.

೧೯೩೭ : 'ಸಖೀಗೀತ'ದ ಮೊದಲನೆಯ ಆವೃತಿ.

೧೯೩೮ : ನಾದಲೀಲೆ, ಉಯ್ಯಾಲೆ, ಪ್ರಕಟಗೊಂಡದ್ದು ''ಜೀವನ'' ಪತ್ರಿಕೆಯ ಸಂಪಾದಕ ಆದದ್ದು.

೧೯೩೯ : ನಿರಾಭರಣ ಸುಂದರಿ, ಸಾಹಿತ್ಯ ಮತ್ತು ಸಂಶೋಧನೆ, ಪ್ರಕಟಗೊಂಡದ್ದು.

೧೯೪೦ : ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ.

೧೯೪೧ : ಗದಗ-ವಿದ್ಯಾದಾನ ಸಮಿತಿ ಹೈಸ್ಕೂಲಿಗೆ-ಹೆಡ್ ಮಾಸ್ತರ ಆಗಿ ಹೋದದ್ದು.

೧೯೪೨ : ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಸ್ಕೂಲಿಗೆ ಶಿಕ್ಷಕ.

೧೯೪೩ : ಫೆಬ್ರುವರಿಯಲ್ಲಿ ಪಾಂಡಿಚೇರಿ-ಶ್ರೀಮಾತಾರವಿಂದರ ದರ್ಶನ. ಪೂನಾ ಬಿ. ಎಂ. ಸಿ. ಸಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ, ಮೇಘದೂತ ಪ್ರಕಟಗೊಂಡದ್ದು.

೧೯೪೪ : ಸೊಲ್ಲಾಪುರದ ಡಿ. ಎ. ವ್ಹಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಆದದ್ದು.

೧೯೪೪ : ರಾಮು ಹಾಗೂ ಆನಂದ ತೀರಿಕೊಂಡದ್ದು ಸೊಲ್ಲಾಪುರದಲ್ಲಿ.

೧೯೪೫ : ಸೊಲ್ಲಾಪುರ ನೀಲಾನಗರದಲ್ಲಿ ವಾಸ ಪ್ರಾರಂಭ.

೧೯೪೬ : ಗೆಳೆಯರಿಂದ ಸನ್ಮಾನ. ೫೦ನೆಯ ಹುಟ್ಟುಹಬ್ಬ ಹಾಡು-ಪಾಡು ಪ್ರಕಟಗೊಂಡದ್ದು.

೧೯೪೭ : ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು.

೧೯೪೮ : ಗಾಂಧೀ ಮರಣ, ಜೆ.ಕೃಷ್ಣಮೂರ್ತಿ ಮತ್ತು ಶ್ರೀ ಗುಳವಣಿ ಮಹಾರಾಜರ ದರ್ಶನ.

೧೯೫೦ : ಶ್ರೀಅರವಿಂದರ ನಿರ್ವಾಣ ಡಿಶೆಂಬರ-೫. ಹೆಂಡತಿಗೆ ವಿಷಮ ಜ್ವರ.

೧೯೫೧ : ಗಂಗಾವತರಣ ಪ್ರಕಟಗೊಂಡದ್ದು. ಸಂಖ್ಯಾಯೋಗ ವಿಚಾರ, ಮರಾಠಿಯಲ್ಲಿ ವಿಪುಲವಾಗಿ ಬರವಣಿಗೆ.

೧೯೫೨ : ಪ್ರಭಾಕರ ಮಹಾರಾಜರ ದರ್ಶನ.

೧೯೫೩ : ಗೆಳೆಯ ಚೆನ್ನಮಲ್ಲಪ್ಪ-ಮಧುರಚೆನ್ನ-೧೫ ಅಗಸ್ಟರಂದು ಮರಣ.

೧೯೫೪ : ಶ್ರೀರಾಮದಾಸರ ದರ್ಶನ.

೧೯೫೫ : ದಿಲ್ಲಿಗೆ ಕವಿ ಸಮ್ಮೇಳನಕ್ಕಾಗಿ ಹೋದದ್ದು.

೧೯೫೬ : ೬೦ನೇ ಹುಟ್ಟುಹಬ್ಬ. ಧಾರವಾಡ ಆಕಾಶವಾಣಿ ಸಾಹಿತ್ಯ

ಸಲಹಾಕಾರ, ಮಗ-ಪಾಂಡುರಂಗನ ವಿವಾಹ, ಡಾ॥ಕುವೆಂಪು ಅವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೫೭ : ಅರಳು-ಮರಳು ಪ್ರಕಟಗೊಂಡದ್ದು. ಡಾ॥ ರಂ. ಶ್ರೀಮುಗಳಿಯವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೫೮ : ಸಾಹಿತ್ಯ ಅಕಾಡೆಮಿ ಬಹುಮಾನ ಯಾರಿಗೂ ಸಿಗಲಿಲ್ಲ.

೧೯೫೮-೫೯ : ಅರಳು-ಮರಳು ಸಂಗ್ರಹಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ, ಧರ್ಮಸ್ಥಳಕ್ಕೆ ಹೋದದ್ದು. 'ನಮನ' 'ಸಂಚಯ' ಪ್ರಕಟಗೊಂಡದ್ದು.

೧೯೬೦ : ಡಾ॥ ಕಾರಂತರಿಗೆ ಬಹುಮಾನ.

೧೯೬೧ : ಡಾ. ಗೋಕಾಕರಿಗೆ ಬಹುಮಾನ.
(ಇಲ್ಲಿಯವರೆಗಿನ ಜೀವನ ಘಟನಾವಳಿಗಳನ್ನು ದ.ರಾ.ಬೇಂದ್ರೆಯವರು ತಮ್ಮ ಆತ್ಮಚರಿತ್ರೆಗೆ ಅನುಬಂಧವಾಗಿ ಪ್ರಕಟಿಸಿದ್ದು ನಡೆದುಬಂದ ದಾರಿ ಸಂ.೩ರಲ್ಲಿ. ಇದಕ್ಕೆ ಐತಿಹಾಸಿಕ ಮಹತ್ವವಿದೆ. ತಮ್ಮ ಸ್ನೇಹಿತರಿಗೆ ಸಿಕ್ಕ ಬಹುಮಾನ ಅಥವಾ ಅವರ ಜೀವನ ಘಟನೆಗಳು ತಮ್ಮ ಜೀವನದ ಪ್ರಮುಖ ಘಟನೆ ಎಂಬುದಾಗಿ ಬೇಂದ್ರೆ ಭಾವಿಸಿದ್ದು ಅನುಕರಣೀಯ ನಿಲುವು ಆಗಿದೆ. ಸಾಹಿತಿ-ಸಾಹಿತಿ-ಸ್ನೇಹ ಸಂಬಂಧವೇ ಸಂಸ್ಕೃತಿ.)

೧೯೬೨ : ತುಮಕೂರಿನ ಪೌರಸಭೆಯ ಸನ್ಮಾನ.

೧೯೬೪ : ಮೈಸೂರು ದಸರಾ ಮಹೋತ್ಸವ ಸನ್ಮಾನ.

೧೯೬೫ : ಮರಾಠಿ ಸಂವಾದ ಕೃತಿಗೆ ಕೇಳಕರ ಪ್ರಶಸ್ತಿ

೧೯೬೬ : ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಹೈದ್ರಾಬಾದಿನ ಹಿಂದೀ ಪ್ರಚಾರ ಸಭಾದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ. ಶಿರಹಟ್ಟಿಯಲ್ಲಿ ೭೦ನೇ ಹುಟ್ಟು ಹಬ್ಬ, ಮೈಸೂರು ಸರ್ಕಾರದ (ಕರ್ನಾಟಕ) ಆಜನ್ಮ ವಿಶ್ರಾಂತಿ ವೇತನ. ಪತ್ನಿ ಶ್ರೀಮತಿ ಲಕ್ಷ್ಮೀಬಾಯಿಯವರ ನಿಧನ ೧೭-೮-೧೯೬೬.

೧೯೬೮ : ದಿಲ್ಲಿಯಿಂದ 'ಪದ್ಮಶ್ರೀ' ಪ್ರಶಸ್ತಿ. ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್.

೧೯೬೯ : ಕೇಂದ್ರ ಸಾಹಿತ್ಯ ಅಕಾಡೆಮಿಯ 'ಫೆಲೋಶಿಪ್' ಗೌರವ-ದಿಲ್ಲಿ.

೧೯೭೨ : ಪರ್ಯಾಯದಲ್ಲಿ 'ಉಡುಪಿ ಮಠದ' ವತಿಯಿಂದ 'ಕರ್ನಾಟಕ ಕವಿ ಕುಲ ತಿಲಕ' ಬಿರುದು. ೭೫ನೇ ಹುಟ್ಟುಹಬ್ಬದ ಸವಿನೆನಪಿಗಾಗಿ ವರಕವಿ ಬೇಂದ್ರೆಯವರನ್ನು ಕುರಿತು ರಾಜ್ಯ ಸರ್ಕಾರದ ಸಾಕ್ಷಿ ಚಿತ್ರ ನಿರ್ಮಾಣ.

೧೯೭೩-೭೪ : 'ನಾಕುತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ.

೧೯೭೬ : ವಾರಣಾಶಿ ಕಾಶೀ ವಿದ್ಯಾಪೀಠದಿಂದ ಗೌರವ ಡಾಕ್ಟರೇಟ್

೨೬-೧೦-೮೧ : ನಿರ್ವಾಣ - ಮುಂಬೈಯ ಹರಿಕಿಸನ್‌ದಾಸ ಆಸ್ಪತ್ರೆಯಲ್ಲಿ.

ಡಾ. ದ.ರಾ.ಬೇಂದ್ರೆಯವರ ಸಾಹಿತ್ಯ ಕೊಡುಗೆ

ಕವನ ಸಂಗ್ರಹಗಳು - ೨೯

೧. ಕೃಷ್ಣಕುಮಾರಿ
೨. ಗರಿ
೩. ಸಖೀಗೀತ
೪. ಮೂರ್ತಿ ಮತ್ತು ಕಾಮಕಸ್ತೂರಿ
೫. ಉಯ್ಯಾಲೆ
೬. ನಾದಲೀಲೆ
೭. ಮೇಘದೂತ
೮. ಹಾಡು-ಪಾಡು
೯. ಗಂಗಾವತರಣ
೧೦. ಸೂರ್ಯಪಾನ
೧೧. ಹೃದಯ ಸಮುದ್ರ
೧೨. ಮುಕ್ತಕಂಠ
೧೩. ಚೈತ್ಯಾಲಯ
೧೪. ಜೀವಲಹರಿ
೧೫. ಅರಳು ಮರಳು
೧೬. ನಮನ
೧೭. ಸಂಚಯ
೧೮. ಉತ್ತರಾಯಣ
೧೯. ಮುಗಿಲ ಮಲ್ಲಿಗೆ
೨೦. ಯಕ್ಷಯಕ್ಷಿ
೨೧. ನಾಕುತಂತಿ
೨೨. ಮರ್ಯಾದೆ
೨೩. ಶ್ರೀಮಾತಾ
೨೪. ಬಾ ಹತ್ತರ
೨೫. ಇದು ನಭೋವಾಣಿ
೨೬. ವಿನಯ
೨೭. ಮತ್ತೆ ಶ್ರಾವಣಾ ಬಂತು
೨೮. ಒಲವೆ ನಮ್ಮ ಬದುಕು
೨೯. ಚತುರೋಕ್ತಿ ಮತ್ತು ಇತರ ಕವನಗಳು.

ಮರಣೋತ್ತರ ಕವನಗಳು - ೬

೧. ಪರಾಕಿ
೨. ಕಾವ್ಯವೈಖರಿ
೩. ತಾ ಲೆಕ್ಕಣಿಕಿ ತಾ ದೌತಿ
೪. ಬಾಲಬೋಧೆ
೫. ಪ್ರತಿಬಿಂಬಗಳು
೬. ಚೈತನ್ಯದ ಪೂಜೆ (ಪ್ರಾರ್ಥನೆಗಳ ಸಂಗ್ರಹ)

ನಾಟಕಗಳು - ೧೪

೧. ದೆವ್ವನ ಮನೆ
೨. ಹಳೆಯ ಗೆಣೆಯರು .
೩. ಸಾಯೋ ಆಟ
೪. ತಿರುಕರ ಪಿಡುಗು
೫. ಗೋಲ್
೬. ಉದ್ಧಾರ
೭. ನಗೆಯ ಹೊಗೆ
೮. ಮಂದೀ ಮದಿವಿ
೯. ಮಂದೀ ಮಕ್ಕಳು
೧೦. ಮಂದೀ ಮನಿ
೧೧. ಆ ಥರಾ ಈ ಥರಾ
೧೨. ಶೋಭನಾ
೧೩. ಜಾತ್ರೆ
೧೪. ಮಕ್ಕಳು ಅಡಗಿ ಮನೆ ಹೊಕ್ಕರೆ

ವಿಮರ್ಶೆ - ೧೦

೧. ಸಾಹಿತ್ಯ ಮತ್ತು ವಿಮರ್ಶೆ
೨. ಸಾಹಿತ್ಯ ಸಂಶೋಧನೆ
೩. ವಿಚಾರ ಮಂಜರಿ
೪. ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ
೫. ಮಹಾರಾಷ್ಟ್ರ ಸಾಹಿತ್ಯ
೬. ಕಾವ್ಯೋದ್ಯೋಗ
೭. ಕುಮಾರವ್ಯಾಸ (ಪುಸ್ತಿಕೆ)
೮. ಸಾಹಿತ್ಯದ ವಿರಾಟ್ ಸ್ವರೂಪ,
೯. ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು
೧೦. ಶ್ರೀ ಅರವಿಂದ ಯೋಗ, ಆಶ್ರಮ ಮತ್ತು ತತ್ತ್ವೋಪದೇಶ. (ಶ್ರೀ ಅರವಿಂದರನ್ನು ಕುರಿತು ಪರಿಚಯ ಪುಸ್ತಿಕೆ)

ಮರಾಠಿಯಲ್ಲಿ - ೬

೧. ಸಂವಾದ
೨. ವಿಠಲ ಸಂಪ್ರದಾಯ
೩. ಶಾಂತಲಾ (ಕಾದಂಬರಿ)
೪. ಸಂತ ಮಹಂತ ಪೂರ್ಣಶಂಭು ವಿಠಲ, (ಪ್ರಬಂಧ)
೫. ವಿಠ್ಠಲ ಪಾಂಡುರಂಗ (ಕವನ ಸಂಗ್ರಹ)
೬. ಉಮಾಳ (೧೧೩ ಮರಾಠಿ ಕವನಗಳ ಸಂಗ್ರಹ)

ಅನುವಾದಿತ ಗ್ರಂಥಗಳು - ೬

೧. ಉಪನಿಷತ್ ರಹಸ್ಯ
೨. ಭಾರತೀಯ ನವಜನ್ಮ
೩. ಕಬೀರ ವಚನಾವಲಿ
೪. ಭಗ್ನ ಮೂರ್ತಿ
೫. ನೂರೊಂದು ಕವನಗಳು
೬. ಗುರು ಗೋವಿಂದಸಿಂಗ

ಇತರ - ೫

೧. ನಿರಾಭರಣ ಸುಂದರಿ (ಕಥಾ ಸಂಗ್ರಹ)
೨. ಮಾತೆಲ್ಲ ಜ್ಯೋತಿ (ಭಾಷಣ ಸಂಗ್ರಹ)
೩. ಚಂದ್ರಹಾಸ (ಸಂಪಾದಿತ)
೪. ಹೊಸಗನ್ನಡ ಕಾವ್ಯಶ್ರೀ (ಸಂಪಾದಿತ)
೫. ಮತ-ಧರ್ಮ ಮತ್ತು ಆಧುನಿಕ ಮಾನವ (ಭಾಷಣಗಳ ಸಂಗ್ರಹ).

ಔದುಂಬರಗಾಥೆ : ಅಂಬಿಕಾತನಯದತ್ತರ ಸಮಗ್ರ ಕಾವ್ಯ

ದ. ರಾ. ಬೇಂದ್ರೆ ಜೀವನ ಮಹಾಕಾವ್ಯ ಸಂಪುಟಗಳು:

೧. ಸಮನ ಸಂಪುಟ
೨. ದರ್ಶನ ಸಂಪುಟ
೩. ವಿಕಾಸ ಸಂಪುಟ
೪. ವಿನ್ಯಾಸ ಸಂಪುಟ
೫. ತತ್ತ್ವ ಸಂಪುಟ
೬. ಸಿದ್ಧಾಂತ ಸಂಪುಟ

ದ. ರಾ. ಬೇಂದ್ರೆ ಸಂಗೀತ ಅಕಾಡಮಿ ಪ್ರಕಟಣೆಗಳು.

ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಸಂಯೋಜನೆಗಳೊಂದಿಗೆ ಬೇಂದ್ರೆ ಗೇಯ ಗೀತಗಳ ಸಂಗ್ರಹಗಳು.

೧. ಅಂಬಿಕಾತನಯನ ಹಾಡಽ ಬೆಳದಿಂಗಳ ನೋಡಽ
೨. ನೋಡ್ಯಾನಽ ದಶಾವತಾರ ಅಂಬಿಕಾತನಯ ಹಾಡ್ಯಾನಽ
೩. ಅಂಬಿಕಾತನಯದತ್ತ ಬೇಂದ್ರೆ ಕಂಡ ಬೆನಕ
೪. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರಾವಣ

ಶ್ರೀಮಾತಾ ಪ್ರಕಾಶನ

"ವಿಶ್ವಶ್ರಮ ಚೇತನ", ಗೋಕುಲ ರಸ್ತೆ, ಬಸವೇಶ್ವರ ನಗರ, ಹುಬ್ಬಳ್ಳಿ

ಫೋನ್ : ೨೩೩೦೪೬೬ (ಕಛೇರಿ) ೨೩೭೩೪೮೬ (ಮನೆ)

ದರ ಪಟ್ಟಿ

ಡಾ|| ದ. ರಾ. ಬೇಂದ್ರೆಯವರ ಕವನ ಸಂಗ್ರಹಗಳು

೧.	ಕೃಷ್ಣಕುಮಾರಿ	೦೬-೦೦	೨.	ಗರಿ	೬೦-೦೦
೩.	ಸಖೀಗೀತ	೪೫-೦೦	೪.	ಮೂರ್ತಿ	೧೫-೦೦
೫.	ಕಾಮಕಸ್ತೂರಿ	೨೧-೦೦	೬.	ಉಯ್ಯಾಲೆ	೨೧-೦೦
೭.	ನಾದಲೀಲೆ	೪೫-೦೦	೮.	ಮೇಘದೂತ	೩೦-೦೦
೯.	ಹಾಡು-ಪಾಡು	೩೦-೦೦	೧೦.	ಗಂಗಾವತರಣ	೬೦-೦೦
೧೧.	ಸಮರಸವೇ ಜೀವನ	೪೫-೦೦	೧೨.	ಕುಣಿಯೋಣು ಬಾ	೧೫-೦೦
೧೩.	ಅರಳು ಮರಳು	೧೫೦-೦೦	೧೪.	ನಾಕುತಂತಿ	೬೦-೦೦
೧೫.	ವಿನಯ	೩೦-೦೦	೧೬.	ಒಲವೆ ನಮ್ಮ ಬದುಕು	೨೫-೦೦
೧೭.	ಚೈತನ್ಯದ ಪೂಜೆ	೦೯-೦೦	೧೮.	ನಾಳಿನ ಕನಸು	೨೦-೦೦

ಡಾ|| ದ. ರಾ.ಬೇಂದ್ರೆ ಕವನಗಳ ಇಂಗ್ಲಿಷ ಅನುವಾದಗಳು

೧೯.	Spring Fire	೭೫-೦೦	೨೦.	Four Strings	೦೫-೦೦

೨೧. ಉಮಳಾ (ಡಾ|| ದ. ರಾ. ಬೇಂದ್ರೆಯವರ ಮರಾಠಿ ಕವನ ಸಂಗ್ರಹ) ೫೦-೦೦

ಔದುಂಬರಗಾಥೆ : ದ. ರಾ. ಬೇಂದ್ರೆ ಜೀವನ ಮಹಾಕಾವ್ಯ

ಅಂಬಿಕಾತನಯದತ್ತರ ಸಮಗ್ರ ಕಾವ್ಯ ಒಟ್ಟು ೬ ಸಂಪುಟಗಳಲ್ಲಿ ೨,೧೦೦-೦೦

ಸಂಪಾದಕರು : ಡಾ|| ವಾಮನ ಬೇಂದ್ರೆ

೧. ನಮನ ಸಂಪುಟ	೨. ದರ್ಶನ ಸಂಪುಟ
೩. ವಿಕಾಸ ಸಂಪುಟ	೪. ವಿನ್ಯಾಸ ಸಂಪುಟ
೫. ತತ್ತ್ವ ಸಂಪುಟ	೬. ಸಿದ್ಧಾಂತ ಸಂಪುಟ

ಡಾ|| ದ. ರಾ. ಬೇಂದ್ರೆ ಸಂಗೀತ ಅಕಾಡಮಿ ಪ್ರಕಟಣೆಗಳು.

ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಸಂಯೋಜನೆಗಳೊಂದಿಗೆ ಬೇಂದ್ರೆ ಗೇಯ ಗೀತಗಳ ಸಂಗ್ರಹಗಳು.

೧. ಅಂಬಿಕಾತನಯನ ಹಾಡS ಬೆಳದಿಂಗಳ ನೋಡS	೨೦-೦೦
೨. ನೋಡ್ಯಾನS ದಶಾವತಾರ ಅಂಬಿಕಾತನಯ ಹಾಡ್ಯಾನS	೩೦-೦೦
೩. ಅಂಬಿಕಾತನಯದತ್ತ ಬೇಂದ್ರೆ ಕಂಡ ಬೆನಕ	೪೦-೦೦
೪. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರಾವಣ	೪೫-೦೦

ಡಾ॥ ದ. ರಾ. ಬೇಂದ್ರೆಯವರ ನಾಟಕಗಳು

೧.	ದೆವ್ವನ ಮನೆ	೧೫-೦೦	೨.	ಹಳೆಯ ಗೆಣೆಯರು	೦೯-೦೦
೩.	ಸಾಯೋ ಆಟ	೧೫-೦೦	೪.	ತಿರುಕರ ಪಿಡುಗು	೦೯-೦೦
೫.	ಗೋಲ್	೧೫-೦೦	೬.	ಉದ್ಧಾರ	೨೪-೦೦
೭.	ನಗೆಯ ಹೊಗೆ	೦೬-೦೦	೮.	ಮಂದೀ ಮದಿವಿ	
೯.	ಆ ಥರಾ ಈ ಥರಾ	೧೫-೦೦	೧೦.	ಮಂದೀ ಮಕ್ಕಳು	೨೭-೦೦
೧೧.	ಶೋಭನಾ	೦೫-೦೦	೧೨.	ಮಂದೀ ಮನಿ	
೧೩.	ಜಾತ್ರೆ	೦೯-೦೦	೧೪.	ಮಕ್ಕಳು ಆಡಗಿ ಮನೆ ಹೊಕ್ಕರೆ	೦೩-೦೦

ಡಾ॥ ದ. ರಾ. ಬೇಂದ್ರೆಯವರ ಇತರ ಕೃತಿಗಳು

೧.	ನವ ಮಾನವ ದರ್ಶನ	೨೦-೦೦
೨.	ನಿರಾಭರಣ ಸುಂದರಿ (ಕಥೆ ಹಾಗೂ ಹರಟೆಗಳ ಸಂಗ್ರಹ)	೩೬-೦೦
೩.	ಸಾಹಿತ್ಯ ಯೋಗ (ವಿಮರ್ಶೆ)	೪೫-೦೦
೪.	ಚೀನದ ಬಾಳು ಬದುಕು	೩೬-೦೦

ಇತರ ಲೇಖಕರ ಕೃತಿಗಳು

೧.	ಬೇಂದ್ರೆ ಕಾವ್ಯದಲ್ಲಿ ಆಧ್ಯಾತ್ಮದ ನೆಲೆ ಮತ್ತು ಆರ್ಷ ದೃಷ್ಟಿ ಲೇ : ಪ್ರೊ. ಕೆ. ಎಸ್. ನಾರಾಯಣಾಚಾರ್ಯ	೯೯-೦೦
೨.	ಕರೇ ಹೆಂಡತಿ ಆದರ ಖರೇ ಹೆಂಡತಿ (ನಾಟಕ) - ಲೇ : ಎನ್ಕೆ	೩೦-೦೦
೩.	ನಾ ಕಂಡ ಬೇಂದ್ರೆ ಜೀವನ ಮತ್ತು ಸಾಹಿತ್ಯ - ಲೇ : ಜೀವಿ ಕುಲಕರ್ಣಿ	೧೦೦-೦೦

ಡಾ॥ ವಾಮನ ಬೇಂದ್ರೆಯವರ ಕೃತಿಗಳು

೧.	ವರಕವಿ ಡಾ॥ ದ. ರಾ. ಬೇಂದ್ರೆ ಜೀವನ ಪರಿಚಯ	೧೦೦-೦೦
೨.	ಸ್ಪರ್ಶ (ನಾಟಕ ಸಂಗ್ರಹ)	೨೫-೦೦
೩.	ಸ್ಪಂದನ (ಕವನ ಸಂಗ್ರಹ)	೧೫-೦೦
೪.	ಕವಿಚೂತವನ ಚೈತ್ರ ಲಕ್ಷ್ಮೀಶ	೬೦-೦೦

ಮುಂದಿನ ಯೋಜನೆ

ಬೇಂದ್ರೆ ಸಮಗ್ರ ಸಾಹಿತ್ಯ (ಕಥೆ, ನಾಟಕ, ವಿಮರ್ಶೆ, ವಿನೋದ, ರೂಪಕ, ವೈಜ್ಞಾನಿಕ ಸಂಶೋಧನೆ ಮುಂತಾಗಿ ೧೯ ಸಂಪುಟಗಳಲ್ಲಿ ಪ್ರಕಟಗೊಳ್ಳಲಿವೆ.)

ನಮ್ಮ ಪ್ರಕಾಶನದ ಎಲ್ಲ ಪುಸ್ತಕಗಳ ಸಗಟು ಖರೀದಿ ಬೆಲೆ ಹಾಗೂ ನಿಯಮಗಳಿಗಾಗಿ ಮೇಲಿನ ವಿಳಾಸಕ್ಕೆ ಸಂಪರ್ಕಿಸಲು ಕೋರಲಾಗಿದೆ.

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ದ. ರಾ. ಬೇಂದ್ರೆ ಜೀವನ ಮಹಾಕಾವ್ಯ - ಔದುಂಬರಗಾಥೆ-ಅಂಬಿಕಾತನಯದತ್ತರ ಸಮಗ್ರ ಕಾವ್ಯ-ಆರು ಸಂಪುಟಗಳಲ್ಲಿ ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನ ಸಂಸ್ಥೆಯ ಹೆಮ್ಮೆಯ ಪ್ರಕಟಣೆಯಾಗಿ ೨೦೦೩ರಲ್ಲಿ ಪ್ರಕಟಗೊಂಡಿದೆ. ಅದರಲ್ಲಿ,

(೧) ನಮನ ಸಂಪುಟ :
(೧) ಶ್ರುತಿ ನಮನ (೨) ದೇವ ನಮನ (೩) ಗುರು ನಮನ (೪) ಕವಿ ನಮನ ಎಂಬ ನಾಕು ವಿಭಾಗಗಳಿವೆ. ಬೇಂದ್ರೆಯವರ ಶ್ರಾವಣ ಪ್ರತಿಭೆ-ಕನ್ನಡ, ಮರಾಠಿ, ಇಂಗ್ಲಿಷ್, ಸಂಸ್ಕೃತ ಹಾಗೂ ಹಿಂದಿ ಮನದ ಭಾಷೆ, ಮನೆಯ ಭಾಷೆ, ಅಂತರ್‌ರಾಷ್ಟ್ರೀಯ ಭಾಷೆ, ಭಾರತೀಯ ಭಾಷೆ ಹಾಗೂ ರಾಷ್ಟ್ರ ಭಾಷೆಯ ಹಿರಿಯ ಅನೇಕ ಕವಿಗಳ ಮಹೋನ್ನತ ಕೃತಿಗಳ ಭಾವಾನುವಾದ ಮಾಡಿ ನಮನ ಸಲ್ಲಿಸಲಾಗಿದೆ. ಈ ಸಂಪುಟದಲ್ಲಿ ಆದಿಕವಿ ಪಂಪ, ಬಸವಣ್ಣ ಅಲ್ಲಮಪ್ರಭು, ರತ್ನಾಕರ ಹಾಗೂ ಮುದ್ದಣ ಕವಿ ನಮನ ವಿಶಿಷ್ಟವಾಗಿವೆ.

(೨) ದರ್ಶನ ಸಂಪುಟ :
(೫) ಬೇಂದ್ರೆ ಕವಿ ಕಾವ್ಯ ಮಹತಿಯ ದರ್ಶನ (೬) ಏಶ್ವ ದರ್ಶನ (೭) ಭಾರತ ದರ್ಶನ ಮತ್ತು ಕನ್ನಡ ಭಾಷೆಯನ್ನು-''ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ ಅಂಬಿಕಾತನಯನಿವನು'' ಎಂಬ ಉಕ್ತಿಯನ್ನು - ಸಾರ್ಥಕಗೊಳಿಸಿದ ಸಂಪುಟ ಇದು ಆಗಿದೆ.

(೩) ವಿಕಾಸ ಸಂಪುಟ :
(೯) ನಾಯಕ-ನಾಯಿಕೆ ವಿಕಾಸ (೧೦) ಸಂತಾನ ವಿಕಾಸ (೧೧) ಗೆಳೆತನದ ವಿಕಾಸ (೧೨) ಜೀವನ ದೃಷ್ಟಿ ವಿಕಾಸ ಎಂಬ ವಿಭಾಗಗಳು ಇಲ್ಲಿವೆ. ಬೇಂದ್ರೆ ಜೀವನ ಮಹಾಕಾವ್ಯದ ನಾಯಕ - ದ. ರಾ. ಬೇಂದ್ರೆ; ನಾಯಿಕೆ-ಲಕ್ಷ್ಮಿಬಾಯಿ ಬೇಂದ್ರೆ; ಬೇಂದ್ರೆಯವರ ೯ ಸಂತತಿ; ಬೇಂದ್ರೆಯವರ ಸಮಕಾಲೀನ ವಿವಿಧ ಭೂಮಿಕೆಯ ಗೆಳೆಯರು-ವಿವಿಧ ಪಾತ್ರಗಳಾಗಿ ಬೇಂದ್ರೆ ಜೀವನ ದೃಷ್ಟಿ ವಿಕಸಿತಗೊಂಡುದರ ಅರಿವು, ಇರವು, ಹರವು ಇಲ್ಲಿದೆ.

(೪) ವಿನ್ಯಾಸ ಸಂಪುಟ :
(೧೩) ಪಂಚಮಹಾಭೂತ ವಿನ್ಯಾಸ (೧೪) ನಾಕು ಪುರುಷಾರ್ಥ ವಿನ್ಯಾಸ (೧೫) ಆರು ಋತುವಿನ್ಯಾಸ (೧೬) ಸಪ್ತಕಲಾ ವಿನ್ಯಾಸ ಎಂಬ ವಿಭಾಗಗಳು ಇಲ್ಲಿವೆ. ಬೇಂದ್ರೆಯವರು - ಪೃಥ್ವಿ ಆಪ್, ತೇಜ, ತತ್ತ್ವಗಳನ್ನು; ಅನ್ನಧರ್ಮ, ಒಲವು ಸಿದ್ಧಾಂತ, ದುಡ್ಡು-ದುಡಿತ ಹಾಗೂ ಜೀವನ್ಮುಕ್ತಿ ಪುರುಷಾರ್ಥಗಳನ್ನು; ಋತು ವೈಭವವನ್ನು ಹಾಗೂ - ಚಿತ್ರ, ಸಂಗೀತ, ನೃತ್ಯ, ನಾಟಕ, ವಸ್ತುಶಿಲ್ಪ ಎಂಬ ಆರು ಮಹತ್ತ್ವಕಲೆಗಳ ಶಕ್ತಿಗಳ ಸಾಧನೆಯಿಂದ ಜೀವನ ಕಲಾ ಸಿದ್ಧಿಯನ್ನು ಸಂಪಾದಿಸುವ ಬಗೆಯನ್ನು ಇಲ್ಲಿ ವರ್ಣಿಸಲಾಗಿದೆ.

(೫) ತತ್ತ್ವ ಸಂಪುಟ :
(೧೭) ಓಂ ತತ್‌ಸತ್ ತತ್ತ್ವ (೧೮) ಸಾಮಾಜಿಕ ಪ್ರಜ್ಞಾ ತತ್ತ್ವ (೧೯) ವಿನೋದ-ವಿಡಂಬನೆ ತತ್ತ್ವ (೨೦) ಬದುಕು-ಬಾಳು ತತ್ತ್ವ ಎಂಬ ವಿಭಾಗಗಳು ಇಲ್ಲಿವೆ ಬದುಕನ್ನು ಬಾಳುಗೊಳಿಸುವ ಅಮರ ವಿದ್ಯೆಯ ಪ್ರತಿಪಾದನೆ ಇಲ್ಲಿದೆ.

(೬) ಸಿದ್ಧಾಂತ ಸಂಪುಟ :
(೨೧) ಸೌಂದರ್ಯ ಸಿದ್ಧಾಂತ (೨೨) ಮೂರ್ತಿ ಸಿದ್ಧಾಂತ (೨೩) ಸಂಖ್ಯಾ ಸಿದ್ಧಾಂತ (೨೪) ಹೃದಯ-ವಿವೇಕ ಸಿದ್ಧಾಂತ (೨೫) ನವಮಾನವೀಯತೆಯ ಆವಿರ್ಭಾವ ಸಿದ್ಧಾಂತ ಎಂಬ ವಿಭಾಗಗಳು ಇಲ್ಲಿವೆ. ಬೇಂದ್ರೆಯವರ ಜೀವನದ ೨೫ ತತ್ತ್ವಗಳನ್ನು ಪ್ರತಿಪಾದಿಸುವ ೧೪೨೭ ಕವನಗಳಿಂದ ವಿಸ್ತಾರಗೊಂಡ-ಜೀವನ ಮಹಾಕಾವ್ಯ- ಅಂಬಿಕಾತನಯದತ್ತರ ಸಮಗ್ರ ಕಾವ್ಯ - ಔದುಂಬರಗಾಥೆ ಎಂಬ ಅನನ್ಯ ಮಹಾಕಾವ್ಯದ ಶಿಲ್ಪ, ಸೌಂದರ್ಯ ಮಹತಿ, ಮಹೋನ್ನತಿಯ ಬೆಳಕಿನ ಪಥ ಇದು. -

ಆರು ಸಂಪುಟಗಳ ಬೆಲೆ : ರೂ.೨,೧೦೦-೦೦ (ಅಂಚೆವೆಚ್ಚ ಪ್ರತ್ಯೇಕ)

ಇದು ನಭೋವಾಣಿ

''ಇದು ನಭೋವಾಣಿ'' - ''ಅರಳು-ಮರಳು'' ನಂತರ ಅರಳಿದ ಒಂಭತ್ತನೆಯ ಕೃತಿ. ಬೇಂದ್ರೆಯವರ ''ಔದುಂಬರಗಾಥೆ'' ಎಂಬ ಜೀವನ ಮಹಾಕಾವ್ಯ ವೃಕ್ಷದ ಇಪ್ಪತ್ತೈದನೆಯ ಪುಷ್ಪ. ''ಇದು ನಭೋವಾಣಿ''-ಧಾರವಾಡ ಆಕಾಶವಾಣಿಯ ಪ್ರಸಾರಶಕ್ತಿವರ್ಧನ ನಿಮಿತ್ತವಾಗಿ ಬರೆಯಲಾದ ಕವನ. ಇದರಲ್ಲಿ ಬೇಂದ್ರೆಕಾವ್ಯದ ಉದ್ದೇಶ ''ಮಾನವ್ಯ ಜೀವದಿಂ ಜೀವಕ್ಕೆ ಕಟ್ಟಿದ ಸೇತು। ಬಾಂಧವ್ಯ ಜಾತ ಜೀವಾತು । ದಾಯಾದಿ ಕದನ ಕೌತುಹಲದ ವ್ಯಥೆಯ ಕಥೆಯಲ್ಲ'' ಎಂಬುದಾಗಿ ಇಲ್ಲಿ ಸ್ಪಷ್ಟಪಡಿಸಲಾಗಿದೆ. ಹೃದಯ ತೆರೆದಿದ್ದರೆ ಮಾತ್ರ, ಬೇಂದ್ರೆಕಾವ್ಯ ಶ್ರೋತೃವಿನ ಅಂತಃಕರಣವನ್ನು ಪ್ರವೇಶಿಸಬಲ್ಲದು ಎಂಬ ಎಚ್ಚರಿಕೆಯನ್ನು ಕೊಡಲಾಗಿದೆ.

'ಶ್ರೀ ಭಗವಾನ್ ಪಾಂಡುರಂಗಾರ್ಪಣಮಸ್ತು' ಎಂಬ ಅಂದತ್ತ ಅರ್ಪಣೆ ಬೇಂದ್ರೆಯವರ ವಿಟ್ಠಲ ಉಪಾಸನೆಯ ಪ್ರತೀಕವಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರವನ್ನು ಬೆಸೆದುಬಿಟ್ಟ ಆಧ್ಯಾತ್ಮಶಕ್ತಿ-ವಿಟ್ಠಲ ಎಂಬ ದೈವತ. ವಿಟ್ಠಲಮೂರ್ತಿಯ ತಲೆಯ ಮೇಲೆ ಲಿಂಗವಿದೆ. ವಿಟ್ಠಲ ಶ್ರೀಕೃಷ್ಣನ ಕಲಿಯುಗದ ಅವತಾರ. ಆದುದರಿಂದ ಹರಿಹರ ಸಾಮರಸ್ಯದ ಸಂಕೇತ ಇಲ್ಲಿ ಪ್ರಮುಖವಾಗಿದೆ.

ದೈವತ ಹಾಗೂ ಭಾಷೆಗಳ ಮಧ್ಯದ ಕೊಂಡಿ ಶುದ್ಧ ಭಾವ. ಈ ಭಾವವೇ ಕಾವ್ಯಕ್ಕೆ ಮೂಲ ದ್ರವ್ಯ. ಭಾವ ಪ್ರಬಲವಾದರೆ ಭಾಷೆ ಸಶಕ್ತವಾಗಿ ದೈವಿಕ ಜ್ಞಾನದ ಪ್ರಕಾಶ ಬೀರುತ್ತದೆ. ಬೇಂದ್ರೆ ತನ್ನ ವಾಕ್ ಎಂಬ ಯಜ್ಞದಿಂದ ಪರಮಾತ್ಮನನ್ನು ಒಲಿಸಿಕೊಳ್ಳುವ ಕಾರ್ಯ ಸತತ ಮಾಡಿದರು. ಚೆಲವು-ಹೂ, ಒಲವು-ಶುದ್ಧ ಭಾವ ಮತ್ತು ಆನಂದ-ಕಾವ್ಯದ ಫಲ ಎಂಬ ತ್ರಿದಲ, ಬೇಂದ್ರೆ ಕಾವ್ಯ ಪುಷ್ಪದ ಪ್ರಭಾವಳಿ. ಭಾವಭಾಷೆ, ವಾಸನಿ, ಚತುರವಾಣಿ ಮತ್ತು ನವವಿಸರ್ಗ ಕವನಗಳು ಬೇಂದ್ರೆ ಕಾವ್ಯದ ವೈಶಿಷ್ಟ್ಯಗಳನ್ನು ಸಮರ್ಥವಾಗಿ ವಿವರಿಸುತ್ತವೆ.